ಬೆಲೆ: ಎರಡು ಆಣೆ

ಕರ್ಮವೀರ

ಮಹಾತ್ಮರ ಮನೋರಂಗ
ಅನುವಾದಕರು: ಶ್ರೀ. ರಂ. ರಾ. ದಿವಾಕರ
ಜೀವನದ ವಿವಿಧ ಸಮಸ್ಯೆಗಳ ಬಗ್ಗೆ ಗಾಂಧೀಜಿಯ ವಿಚಾರ ಗಳನ್ನು ಅವರ ಭಾಷಣ ಲೇಖನ ಗಳಿಂದಲೇ ಆಯ್ದು, ಸಂಗ್ರಹಿಸಿದ ಪುಸ್ತಕ.
ಪುಟ, ಬೆಲೆ: ೪-೮-೦
ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

ವಚನಶಾಸ್ತ್ರ ರಹಸ್ಯ
ಲೇ: ಶ್ರೀ. ರಂ. ರಾ. ದಿವಾಕರ
ಕರ್ನಾಟಕದ ಉಪನಿಷತ್ತು ಗಳೆನಿಸಿದ ಶಿವಶರಣ ವಚನಗಳ ಬಗ್ಗೆ ವಿಚಾರ ಪರಿಪೂರ್ಣ ಹಾಗು ಶಾಸ್ತ್ರೀಯ ಪೂರ್ಣ ವಿವೇಚನೆ.
ಬೆಲೆ: ೫ ರೂಪಾಯಿ
ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

ಸಂಪಾದಕರು: ಹ. ರಾ. ಪುರೋಹಿತ, ಎಂ. ಎ.
)——ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ——(
Editor: H. R. Purohit, M. A.

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೧೩—೧೦—೧೯೪೭ —(ಸಂಚಿಕೆ ೨೭)—

ಹಿಂದುಸ್ತಾನದಲ್ಲಿಯ ಪ್ರಗತಿಕಂಟಕ ಸಂಸ್ಥಾನಗಳು

ಸಂಸ್ಥಾನಿಕರ ಹುಟ್ಟಿನ ಗುಟ್ಟು— ಅಧಿಕಾರದ ನಿರಂಕುಶ ಪ್ರಯೋಗ— ಸತ್ತಾಂತರದಲ್ಲಿ ಬ್ರಿಟಿಶರ ಕೌಟಿಲ್ಯ— ಸಂಸ್ಥಾನೀ ಪ್ರಜೆಗಳ ಬಿಡುಗಡೆಯ ಮಾರ್ಗ—

ಸಾಗರೋಪಮವಾದ ವಿಶಾಲ ಭಾರತದಲ್ಲಿ ನಡುಗಡ್ಡೆಗಳಂತಿರುವ ಸಂಸ್ಥಾನಗಳ ಒಡೆಯರು ಮಧ್ಯಯುಗದ ದರಬಾರು ದೌಲತ್ತುಗಳನ್ನು ಇಂದು ಪುನಃ ಪ್ರಾರಂಭಿಸಲು ತಾವು ಸ್ವತಂತ್ರರೆಂದು ಪ್ರಗತಿ ಕಂಟಕರಾಗಿ ಉಳಿಯಲು ಹಾಗೂ ಕಾಲಾನುಗುಣವಾದ ಪ್ರಜಾಸತ್ತೆಯ ತತ್ವಗಳಂತೆ ಪ್ರಜಾಧಿಕಾರವನ್ನು ಮನ್ನಿಸದೆ "ದೊರೆಯೇ ಸೊಕ್ಕಿದ ಕೋಣನೈ" ಎಂಬಂತೆ ಪ್ರಜಾಪೀಡನಪರರಾಗಿ ನಿಲ್ಲಲು ಅಧಿಕಾರ ಹಸ್ತಾಂತರ ಕಾರ್ಯದಲ್ಲಿ ಬ್ರಿಟಿಶರು ಹೂಡಿದ ಕುಟಿಲ ತಂತ್ರವೇ ಕಾರಣವೆಂದೂ ಸಂಸ್ಥಾನೀ ಪ್ರಜೆಗಳ ಬಿಡುಗಡೆಗೆ ಹಿಂದೀ ಒಕ್ಕೂಟ ಸರಕಾರವು ಪ್ರಕಟಿಸಹಾಯವೀಯುವ ಸ್ಥಿತಿಯಲ್ಲಿಲ್ಲವಾದರೂ ಒಕ್ಕೂಟದ ನಾಗರಿಕರು ಅವರ ಅಹಿಂಸಾತ್ಮಕ ಸಮರಕ್ಕೆ ತನುಮನಧನದಿಂದ ನೆರವೀಯದಿರರೆಂದೂ ಭಾರತದ ಪ್ರಸಿದ್ಧ ರಾಜತಂತ್ರಜ್ಞರಲ್ಲೊಬ್ಬರೂ ಕನ್ನಡದ ಕೀರ್ತಿವೆತ್ತ ಬರಹಗಾರರೂ ಆದ ಶ್ರೀ ದಿವಾಕರ ರಂಗರಾಯರು ಅಭಿಪ್ರಾಯ ಪಡುತ್ತಾರೆ.

ಕಳೆದ ಶತಮಾನಕ್ಕಿಂತಲೂ ಹೆಚ್ಚು ವರ್ಷಗಳಿಂದ ಸಂಸ್ಥಾನಗಳ ಸಮಸ್ಯೆಯು ನಮ್ಮ ತಲೆ ಬೇನೆಯನ್ನೆಬ್ಬಿಸಿದೆ. ಅದರಿಂದ ರಾಜಕಾರಣದಲ್ಲಿ ಅನೇಕ ಬಗೆಯ ತೊಡಕುಂಟಾಗಿ ಹಿಂದುಸ್ತಾನದ ಘಟನಾತ್ಮಕ ರಚನೆಯೇ ನಿರ್ಬಲವಾಗಿದೆ. ಲಾರ್ಡ ಡಾಲಹೌಸಿಯ ಲೋಭಿತನದ ಧೋರಣೆಯ ಆಡಳಿತದಿಂದ ಎಲ್ಲ ಸಂಸ್ಥಾನಗಳೂ ಲಯಹೊಂದಿದ್ದರೆ ಹಿಂದುಸ್ತಾನದ ಜನತೆಗೇನೂ ನಷ್ಟವಾಗುತ್ತಿದ್ದಿಲ್ಲ. ಭಾರತದ ಪ್ರಗತಿಪಥದಲ್ಲಿ ಈ ಸಣ್ಣಪುಟ್ಟ ತುಣುಕುಗಳು ಅಲ್ಲಲ್ಲಿ ದರಿಕಂದರಗಳಂತೆ ಅಡ್ಡ ಬಂದಿವೆ; ಅವುಗಳ ಪ್ರತಿಗಾಮೀ ನರೇಂದ್ರರು ಯಾವಾಗಲೂ ವಿದೇಶೀಯರ ಕೈಕೊಂಬೆಗಳಾಗಿ ಇಲ್ಲಿ ರಾಜ್ಯಭಾರ ನಡೆಸುತ್ತ ಬಂದಿದ್ದಾರೆ. ಹೀಗಾಗಿ, ಇಷ್ಟು ದಿನಗಳ ವರೆಗೆ ಅವು ನಮ್ಮ ಸ್ವಾತಂತ್ರ್ಯದ ಹೋರಾಟದಲ್ಲಿ ಅಡ್ಡಿಯನ್ನೊಡ್ಡುತ್ತಿದ್ದವಲ್ಲದೆ ಈಗ ಸ್ವತಂತ್ರ ಹಿಂದುಸ್ತಾನದಲ್ಲಿ ಸಹ ಸರ್ವಸಮ್ಮತವಾದ, ಹಾಗೂ ಒಂದೇ ಮಾದರಿಯ, ಸಮನ್ವಯ ಆಡಳಿತವನ್ನು ಎಲ್ಲ ಕಡೆಗೆ ಸ್ಥಾಪಿಸಲು ತೊಡಕನ್ನುಂಟುಮಾಡಿವೆ. ಏಕೀಕೃತ ಹಾಗೂ ಕೇಂದ್ರೀಕೃತ ರಾಜಕೀಯ ಮನೋಭೂಮಿಕೆಗೆ ಸಹ ಅವು ಆಸ್ಪದ ಕೊಡುವದಿಲ್ಲ. ಇಂದು ಹೊಸ ಹುಮ್ಮಸ್ಸಿನಿಂದ ಬೆಳಗುತ್ತಿರುವ ಪ್ರಜಾರಾಜ್ಯದಲ್ಲಿ ಈ ಸಂಸ್ಥಾನಗಳು ಅಲ್ಲಲ್ಲಿ ಚಿಕ್ಕಪುಟ್ಟ ನಿರಂಕುಶ ಪ್ರಭುತ್ವದ ನಡುಗಡ್ಡೆಗಳಾಗಿವೆ.

ಸಂಸ್ಥಾನಗಳ ಹುಟ್ಟು

ಆದರೂ ಸಂಸ್ಥಾನಿಕರು ಪ್ರಾಚೀನಕಾಲದ ರಾಜವೈಭವದ ಅವಶೇಷಗಳೆಂದೂ ಅವರನ್ನು ಕಾಯ್ದಿಡಲೇಬೇಕೆಂದೂ ಕೆಲವರು ಹೇಳುವರು. ಮತ್ತೆ ಕೆಲವರು ಅವುಗಳೆಂದರೆ ನಮ್ಮ ರಾಜದರಬಾರುಗಳ, ರೂಢಿ ಪರಂಪರೆಗಳ ಪ್ರತೀಕಗಳೆಂದು ಪ್ರತಿಪಾದಿಸುತ್ತಾರೆ. ಇನ್ನೂ ಕೆಲವರು ಸಂಸ್ಥಾನಗಳೆಂದರೆ ಭಾರತೀಯ ಕಲೆ ಸಾಹಿತ್ಯ, ಸಂಸ್ಕೃತಿ ಮತ್ತು ಅನೇಕ ವೈಶಿಷ್ಟ್ಯಗಳ ತವರುಮನೆಯೆಂದು ಅವುಗಳನ್ನು ಎತ್ತಿ ಹಿಡಿಯುತ್ತಾರೆ. ಉಳಿದ ಕೆಲವರು ಸಂಸ್ಥಾನಗಳು ತಮ್ಮಲ್ಲಿ ಬದುಕುವ ಬಲವಿರುವದರಿಂದಲೇ ಇಲ್ಲಿಯ ವರೆಗೆ ಉಳಿದಿವೆ. ಎಂದು ಸಮರ್ಥಿಸುತ್ತಾರೆ. ಆದರೆ ಏನೇ ಇರಲಿ, ದೇಶಕ್ಕೆ ಅವುಗಳಿಂದಾಗುವ ಹಿತಾಹಿತದ ದೃಷ್ಟಿಯಿಂದ ನಾವು ನೋಡಬೇಕಾಗುತ್ತದೆ. ಹಾಗೆ ನೋಡಿದರೆ ಒಂದು ವೇಳೆ ಈ ಸಂಸ್ಥಾನಿಕರು ಮತ್ತು ಅವರ ದರಬಾರುಗಳು ಪ್ರಜಾರಾಜ್ಯಕ್ಕೆ ಎಡೆಕೊಟ್ಟು ತಾವು ಕಣ್ಮರೆಯಾದರೆ ಆದರಿಂದ ಅವರ ಸದ್ಯದ ಆಡಳಿತದ ವಿವಿಧ ರೂಪರಂಗಗಳು, ಕುಟಿಲ ನೀತಿ ತಂತ್ರಗಳು ನಿಂತು ಹೋಗುವವೇ ಹೊರತು ಉಳಿದ ಯಾವ ಕೇಡೂ ಆಗುವಂತಿಲ್ಲ. ಹಿಂದುಸ್ತಾನದ ವಿಶಿಷ್ಟ ಕಲೆ ಸಂಸ್ಕೃತಿಗಳನ್ನೇನಾದರೂ ಕಾಯುವದಿದ್ದಲ್ಲಿ, ನಮ್ಮ ಸಂಗ್ರಹಾಲಯಗಳಲ್ಲಾಗಲಿ, ವಿಶ್ವವಿದ್ಯಾಲಯಗಳಲ್ಲಾಗಲಿ ಅವುಗಳಿಗೆ ಯೋಗ್ಯ ಸ್ಥಾನವನ್ನು ಕಲ್ಪಿಸಿ ಕೊಡಬಹುದು.

ಆದರೆ, ಸಂಸ್ಥಾನಗಳು ಹೇಗೆ ಮತ್ತು ಏಕೆ ಬದುಕಿದವು? ಮತ್ತು ಅದರಿಂದ ಯಾವ ತೊಡಕು ಉತ್ಪನ್ನವಾಗಿದೆ? ಎಂಬುದನ್ನು ಪರಿಶೀಲಿಸುವುದೇ ಮುಖ್ಯ ವಿಷಯ. ಅವು ತಮ್ಮ ಸಹಜ ಗುಣದ ಬಲದಿಂದಲೇ ಇಲ್ಲಿಯ ವರೆಗೆ ಬಾಳುತ್ತ ಬಂದಿವೆಯೆಂದು ನಂಬುವವ ನಾನಲ್ಲ. ಪರರ ಹಸ್ತಕರಂತೆ ಅಥವಾ ಕೈಗೊಂಬೆಗಳಂತೆ ಇದ್ದುದರಿಂದಲೇ ಅವು ಇಲ್ಲಿಯ ವರೆಗೆ ಬದುಕಿವೆ. ನಮ್ಮ ಸ್ವಾಭಿಮಾನಿಗಳೂ, ಸ್ವದೇಶಾಭಿಮಾನಿಗಳೂ ಆದ ಹಳೆಯ ರಾಜರು ಬ್ರಿಟಿಶರ ರಾಜ್ಯ ಸ್ಥಾಪನೆಯನ್ನು ಪ್ರತಿಭಟಿಸಿ, ಯುದ್ಧದಲ್ಲಿ ಪ್ರಾಣಬಿಟ್ಟು ಅಡವಿ ಬಿದ್ದು, ಅಥವಾ ಜನರನ್ನು ಕೂಡಿಕೊಂಡು ತಮ್ಮ ಗೌರವವನ್ನು ಕಾಯ್ದುಕೊಂಡರು; ಪರದಾಸ್ಯವನ್ನು ಒಪ್ಪಿಕೊಂಡವರೇ ಉಳಿದುಕೊಂಡದ್ದು. ಆದರೆ ಈ ಹೊಸ ದಾಸ್ಯವು ಒಗ್ಗದಿದ್ದವರು ಮುಂದೆ ೧೮೫೭ ರಲ್ಲಿ ಬಂಡಾಯ ಹೂಡಿ ಅದರಲ್ಲಿ ತಮ್ಮ ರಾಜ್ಯ, ಐಶ್ವರ್ಯ, ವೈಭವ, ಅಧಿಕಾರ ಮತ್ತು ಪ್ರಾಣವನ್ನೂ ಬಲಿಕೊಟ್ಟರು. ಆಗ ಬದುಕಿಕೊಂಡವರೆಂದರೆ ನಮ್ಮ ಕಳೆದ ರಾಜಕೀಯ ಖಾತೆಯ ಕೈಗೊಂಬೆಗಳು. ೧೮೫೭ ರ ನಂತರ, ಈ ಸಂಸ್ಥಾನಿಕರು ಕೇವಲ ಬ್ರಿಟಿಶರು ಹಾಕಿದ ತಾಳದಂತೆ ಕುಣಿಯಬೇಕೆಂದು ಗೊತ್ತಾಯಿತು. ಸಂಸ್ಥಾನಿಕರ ಶಿರೋಮಣಿಯಾದ ಹೈದರಾಬಾದಿನ ನಿಜಾಮರಿಗೂ ಸಹ, ಲಾರ್ಡ ಹಾರ್ಡಿಂಜ್ ಮತ್ತು ರೀಡಿಂಗ್ ಸಾಹೇಬರು ಸಾರ್ವಭೌಮ ಅಧಿಕಾರವಿಲ್ಲೆಂದು ಸ್ಪಷ್ಟವಾಗಿ ತಿಳಿಸಿದರು. ಇಡೀ ಭರತ ಖಂಡದಲ್ಲಿ ಬ್ರಿಟಿಶ ಚಕ್ರವರ್ತಿಯೊಬ್ಬನಿಗೇ ಸಾರ್ವಭೌಮ ಅಧಿಕಾರ ಉಂಟೆಂದು ಘೋಷಿಸಲಾಯಿತು.

ಸಂಸ್ಥಾನಿಕರ ಸಂಚು

ಮುಂದೆ ಹಿಂದುಸ್ತಾನದಲ್ಲಿ ರಾಜಕೀಯ ಜಾಗೃತಿ ಹಾಗೂ ಚಳವಳಗಳು ಬಲವಾಗಹತ್ತಿದ್ದರಿಂದ, ಬ್ರಿಟಿಶರಿಗೆ ಅಧಿಕಾರ ಬಿಟ್ಟುಕೊಡುವ ಪ್ರಸಂಗವು ಅನಿವಾರ್ಯವೆಂದೆನಿಸಿತು. ಅದರ ಪರಿಣಾಮವಾಗಿ ಕೂಡಲೇ ೧೯೩೫ರ ಹಿಂದುಸ್ತಾನ ಸರಕಾರದ ಕಾನೂನು ಅಮಲಿನಲ್ಲಿ ಬಂದಿತು. ಅಷ್ಟರೊಳಗೆ ಸಂಸ್ಥಾನದ ಒಡೆಯರೂ ಎಚ್ಚೆತ್ತು ವೈಸರಾಯರ ಘೋಷಣೆಯ ಕೆಳಗೆ ತಮ್ಮ ಸಂಘಟನೆ ಮಾಡಿಕೊಳ್ಳಹತ್ತಿದರು. ಬ್ರಿಟಿಶರ ತಾಳದಂತೆ ಕುಣಿಯಲು ಅಷ್ಟುಹೊತ್ತಿಗೆ ಕಲಿತದ್ದರಿಂದ ಅವರಿಗೆ ಬ್ರಿಟಿಶರ ಭಯವು ಅಷ್ಟು ಹೆಚ್ಚಾಗಿರಲಿಲ್ಲ; ಆದರೆ ಉಕ್ಕುತ್ತಿರುವ ರಾಜಕೀಯ ಚಟುವಟಿಕೆಗಳನ್ನು ಕಂಡು ಅವರ ತಾಳ ತಪ್ಪಿತು. ಆದಕ್ಕೆ ಭಯಭೀತರಾಗಿ ಮುಂಗಾಣದವರಾದರು. ಬ್ರಿಟಿಶರು ಏನಾದರೂ ಮಾಡಿ (ಸ್ವಾರ್ಥಕ್ಕಾಗಿ ಯಾಹರೂ) ಈ ಸಂಸ್ಥಾನಿಕರ ಸ್ಥಾನಮಾನಗಳನ್ನು ಕಾಯುವದಕ್ಕೆ ಮುಂದೆ ಬಂದರು. ಸಂಸ್ಥಾನಗಳಲ್ಲಿಯ ಆಡಳಿತವನ್ನು ಸುಧಾರಿಸುವ ಹೊಣೆ ಹೊರಲು ಅವರು ಹೋಗಲಿಲ್ಲ. ಈ ಪ್ರಕಾರ ಸಂಸ್ಥಾನಿಕರಲ್ಲಿಯೂ ಬ್ರಿಟಿಶ ರಾಜಕಾರಣಿಗಳಲ್ಲಿಯೂ ಕೃತಜ್ಞತಾರ ಸ್ಥಾನ ನಡೆದು ಅವರ ಪರಿಣಾಮವಾಗಿ, ಸಂಸ್ಥಾನಿಕರು ಬ್ರಿಟಿಶ ಪಾರ್ಲಮೆಂಟಿನ ಸಂಬಂಧವನ್ನು ತಪ್ಪಿಸಿಕೊಂಡು ಬ್ರಿಟಿಶ ಚಕ್ರವರ್ತಿಯ ವಿಶೇಷ 'ರಕ್ಷಾಕವಚದ' ಮರೆ ಹೊಕ್ಕರು. ಹೀಗಾಗಿ ೧೯೩೫ರ ಕಾನೂನಿನ ಪ್ರಕಾರ ಪಾರ್ಲಮೆಂಟಿಗೆ ಜವಾಬ್ದಾರವಿದ್ದ ಗವರ್ನರ ಜನರಲ್ಲರಿಗೂ ಸಂಸ್ಥಾನಿಕರಿಗೂ ಸಂಬಂಧ ತಪ್ಪಿ, ರಾಜಕೀಯ ಪ್ರತಿನಿಧಿಯ ಮುಖಾಂತರ ಅವರು ಬ್ರಿಟಿಶ ಚಕ್ರವರ್ತಿಗಷ್ಟೇ ಜವಾಬ್ದಾರರಾಗಿ ನಡೆಯಹತ್ತಿದರು. ಬೈಲು ಹವೆಯಲ್ಲಿ ಬಾಳಲಾರದ ಬಳ್ಳಿಯನ್ನು ಪೆಟ್ಟಿಗೆಯಲ್ಲಿಟ್ಟು ರಕ್ಷಿಸುವಂತೆ, ಈ ನರೇಂದ್ರರನ್ನು ಪ್ರಜಾಪ್ರಭುತ್ವದ ವಾತಾವರಣದಿಂದ ದೂರಿರಿಸಿ ಬ್ರಿಟಿಶ ಚಕ್ರವರ್ತಿಯ ರಕ್ಷಾಕವಚದಲ್ಲಿರಿಸಲಾಯಿತು. ಇದರಿಂದ ಬ್ರಿಟಿಶ ಚಾಣಕ್ಯರದೂ ನಮ್ಮ ಸಂಸ್ಥಾನಿಕರದೂ ಉದ್ದೇಶ ಸಾಧಿಸಿತು. ಒಂದು ದೃಷ್ಟಿಯಿಂದ ಸಂಸ್ಥಾನಿಕರು ಹಿಂದೀ ಕಾಯದೆ ಮಂಡಳದ ಚುನಾವಣೆ ಅಥವಾ ಮತಾಧಿಕಾರದ ಭಯವನ್ನು ದೂರಮಾಡಿಕೊಂಡರೆ, ಬ್ರಿಟಿಶರು ಮತ್ತೊಂದು ಬಗೆಯಿಂದ ಇಂಥ ದೇಶೀರಾಜ್ಯದಲ್ಲಿ ಮನಬಂದಂತೆ ಆಸ್ಪದವನ್ನು ಕಲ್ಪಿಸಿಕೊಂಡರು. ಈ ಕಪಟಿಕಾರಸ್ಥಾನದಿಂದಲೇ, ಮೊನ್ನೆ ೧೫ ನೆಯ ಆಗಸ್ಟಕ್ಕೆ ಬ್ರಿಟಿಶರಿಂದ, ಭಾರತೀಯರಿಗೆ ಸತ್ತಾಂತರ ಆದಾಗ ಈ ಸಂಸ್ಥಾನಿಕರು, ಹಿಂದೀ ಒಕ್ಕೂಟಕ್ಕೆ ಸೇರದೆ ಉಳಿದುಕೊಂಡರು.

ಕಾಂಗ್ರೆಸ್ಸಿನ ಕಾರ್ಯಕೌಶಲ

ಭಾರತದಲ್ಲಿ ಸಶಸ್ತ್ರ ಕ್ರಾಂತಿಯಾಗಿ ಬ್ರಿಟಿಶರು ಇಲ್ಲಿಂದ ಕಾಲ್ತೆಗೆಯುವ ಪ್ರಸಂಗ ಬಂದಾಗ ಬ್ರಿಟಿಶರು ತಮ್ಮ ಕೈಗೊಂಬೆಗಳಾದ ಸಂಸ್ಥಾನಿಕರಿಗೆ "ನಾವು ಹೊರಟೆವು. ನೀವು ಇನ್ನು ಮೇಲೆ ಸಂಪೂರ್ಣ ಸ್ವತಂತ್ರರು" ಎಂದು ಹೇಳಿದ್ದರೆ ಅದೊಂದು ಬೇರೆ ಪರಿಸ್ಥಿತಿಯನ್ನುಂಟುಮಾಡಬಹುದಿತ್ತು. ಆದರೆ ಬ್ರಿಟಿಶರು ಭಾರತದಿಂದ ಹೊರಟಿದ್ದು ಹೋಗುವ ಮುನ್ನ ಪರಸ್ಪರ ಒಪ್ಪಿಗೆಯಿಂದ ಶಾಂತ ರೀತಿಯಲ್ಲಿ ಸತ್ತಾಂತರ ಮಾಡಲು ನಿರ್ಧರಿಸಿ ಪಾರ್ಲಿಮೆಂಟಿನಲ್ಲಿ ಆ ಬಗ್ಗೆ ಕಾನೂನು ಮಾಡಿ ಆ ಕಾನೂನಿನಂತೆ ಎಲ್ಲ ಅಧಿಕಾರ ಒಪ್ಪಿಸಿ ಹೋಗಿದ್ದಾರೆ. ಹಾಗಿದ್ದರೆ ಸಂಸ್ಥಾನಗಳನ್ನೊಳಗೊಂಡ ತಮ್ಮ ಎಲ್ಲ ಅಧಿಕಾರವನ್ನು ಹಿಂದೀ ಒಕ್ಕೂಟಕ್ಕೆ ಬಿಡದಿರಲು ಕಾರಣವೇನು? ಸಾರ್ವಭೌಮನಿಗೆ ಅಧಿಕಾರವಿತ್ತರೆ ಅವರು ಅದನ್ನೇಕೆ ಒಕ್ಕೂಟಕ್ಕೆ ಒಪ್ಪಿಸಲಿಲ್ಲ? ಬ್ರಿಟಿಶ ಚಕ್ರವರ್ತಿ ಮತ್ತು ಪಾರ್ಲಿಮೆಂಟು ಇವುಗಳಿಗೆ ಹಿಂದುಸ್ತಾನದಲ್ಲಿದ್ದ ಎಲ್ಲ ಅಧಿಕಾರ ಮತ್ತು ಹಕ್ಕುಗಳಿಗೆ ದಾಯಾದರಾಗಲಿಕ್ಕೆ ಹಿಂದೀ ಒಕ್ಕೂಟಕ್ಕೆ ಅನು ಮತಿಯನ್ನೇಕೆ ಕೊಡಲಿಲ್ಲ—? ಯಾರು ಇದಕ್ಕೆ ಅಡ್ಡ ಬಂದರು? ಖಂಡಿತವಾಗಿ ಕಾಂಗ್ರೆಸ್ಸಂತೂ ಅಲ್ಲ. ಮುಸ್ಲಿಮಲೀಗೂ ಅಲ್ಲ. ಹಾಗಿದ್ದರೆ ಸಂಸ್ಥಾನಗಳ ನರೇಂದ್ರರಾಗಲಿ, ಕುಟಿಲತನದಲ್ಲಿ ಚತುರರಾದ ಬ್ರಿಟಿಶರಾಜಕಾರಣಿಗಳಾಗಲಿ ಇದಕ್ಕೆ ಕಾರಣರಿರಬಹುದೆಂದು ಸ್ಪಷ್ಟವಿದೆ. ಇಂದು ನಮ್ಮ ಮುಂದೆ ತೊಡಕಿನದಾಗಿ ಸಂಸ್ಥಾನಗಳ ಪ್ರಶ್ನೆಯು ಧುತ್ತೆಂದು ನಿಲ್ಲಲು ನರೇಂದ್ರರ ಕುಟಿಲ ಕಾರಸ್ಥಾನವೇ ಕಾರಣವಾಗಿದೆ. ಮೊದಲು ಕ್ರಿಪ್ಸ ಶಿಷ್ಟಾಯಿಯವರು ಸಂಸ್ಥಾನಗಳ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯದಂತೆ ಸತ್ತಾಂತರವಾಗಿದ್ದರೆ ಸಂಸ್ಥಾನಗಳ ಸಮಸ್ಯೆಯು ಈಗಿದ್ದ ಮಟ್ಟಕ್ಕಿಂತಲೂ ಎಷ್ಟೋ ಹೆಚ್ಚು ಗಂಡಾಂತರ ಸ್ವರೂಪದ್ದಾಗಬಹುದಿತ್ತು. ಆದರೆ ಕಾಂಗ್ರೆಸು ಹಟ ಹಿಡಿದು ಬ್ರಿಟಿಶರ ಮೇಲೆ ಒತ್ತಾಯ ತಂದು ಬ್ರಿಟಿಶ ಮುಖ್ಯಮಂತ್ರಿ ಆಟ್ಲಿಯವರಿಂದಲೂ ಭಾರತದಲ್ಲಿ ಬ್ರಿಟಿಶ ಚಕ್ರವರ್ತಿಯ ಪ್ರತಿನಿಧಿಯಾದ ವೈಸರಾಯರಿಂದಲೂ "ಸಂಸ್ಥಾನಗಳು ನೇರವಾಗಿ ಬ್ರಿಟಿಶ ಕಾಮನವೆಲ್ಥದ ಸದಸ್ಯವಾಗಲಾರವು ಮತ್ತು ಯಾವದೇ ಸಂಸ್ಥಾನವೂ ದನೆ ಇಂಗ್ಲೆಂಡು ಸ್ವತಂತ್ರವಾಗಿ ಮಿತ್ರತ್ವದ ಒಪ್ಪಂದ ಮಾಡಿಕೊಳ್ಳಲಾರದು" ಎಂಬ ವಚನವನ್ನು ತೆಗೆದುಕೊಂಡಿತು. ಇಂದು ಇದರ ಪರಿಣಾಮವಾಗಿ ಸಂರಕ್ಷಣೆ, ಸಾರಿಗೆ ಸಂಪರ್ಕ, ಮತ್ತು ಪರರಾಷ್ಟ್ರ ಸಂಬಂಧ ಈ ವಿಷಯಗಳ ಬಗ್ಗೆ ಪ್ರತಿಯೊಂದು ಸಂಸ್ಥಾನವೂ ಹಿಂದುಸ್ತಾನ ಇಲ್ಲವೆ ಪಾಕಿಸ್ತಾನಕ್ಕೆ ಸೇರಲೇಬೇಕೆಂಬ ತಿಳುವಳಿಕೆ ಯುಂಟಾಗಿದೆ. ಆದು ತಿಳುವಳಿಕೆಯ ಸ್ವರೂಪದಲ್ಲಿಯ ಬೆದರಿಕೆ. ಘಟನಾತ್ಮಕವಾಗಿ ಪ್ರತಿಯೊಂದು ಸಂಸ್ಥಾನವೂ ಸಂಪೂರ್ಣವಾಗಿ ಸರ್ವತಂತ್ರ ಸ್ವತಂತ್ರವಾಗಿರುವದು. ಸಂಸ್ಥಾನಗಳು ಸ್ವತಂತ್ರ ಘಟಕಗಳಾದ ಕಾರಣದಿಂದಲೇ ಅವುಗಳು ಸಾಮಂತ ಸರಕಾರದೊಡನೆ ಸ್ವೇಚ್ಛೆಯಿಂದ ಒಪ್ಪಂದಮಾಡಿಕೊಂಡು ಒಕ್ಕೂಟದಲ್ಲಿ ಸೇರಬಹುದಾಗಿದೆ. ಸಂಸ್ಥಾನಿಕರು ತಮ್ಮ ಮನಬಂದಂತೆ ವರ್ತಿಸುವ ಪ್ರವೃತ್ತಿ ತಾಳಿದರೆ ಒಪ್ಪಂದ ಮಾಡಿಕೊಳ್ಳದೆ ಇರಲು ತಾತ್ವಿಕವಾಗಿ ಅವರಿಗೆ ಅಧಿಕಾರವಿದೆ. ಆದರೆ ಸಂಸ್ಥಾನಗಳ ಅಸಹಾಯ ಪರಿಸ್ಥಿತಿ, ಐತಿಹಾಸಿಕ ಭೂಮಿಕೆ, ಭೌಗೋಲಿಕ ಸ್ಥಿತಿ ಮತ್ತು ಎಲ್ಲಕ್ಕೂ ಮಿಗಿಲಾಗಿ ಅವುಗಳ ಪ್ರಜೆಗಳ "ಹಿಂದುಸ್ತಾನ ಇಲ್ಲವೆ ಪಾಕಿಸ್ತಾನದಲ್ಲಿ ಅವು ಸೇರಬೇಕೆಂಬ ಪ್ರಬಲ ಇಚ್ಛೆ, ಇವುಗಳ ಮೂಲಕ ಅವು ಒಂದಿಲ್ಲೊಂದು ಸಾಮಂತ ರಾಜ್ಯಗಳಲ್ಲಿ ಸೇರಿಕೊಳ್ಳಬೇಕಾಗಿದೆ.

ಸಂಸ್ಥಾನ ಪ್ರಜೆಯ ಅಧಿಕಾರ ಮರ್ಯಾದೆ

ಆದರೆ ಅದಿಷ್ಟರಿಂದ ಸಮಸ್ಯೆ ತೀರಿದಂತಾಗಲಿಲ್ಲ. ಆದು ಕೇವಲ ಸಮಸ್ಯೆಯ ಪ್ರಾರಂಭ. ಆಗಸ್ಟ ೧೫ ನೆಯ ದಿನ ಭಾರತವು ಸ್ವಾತಂತ್ರ್ಯ ಪಡೆಯಿತು. ಅಂದೇ ಬ್ರಿಟಿಶರ ಪರಿಸ್ಥಾಧಿಕಾರದ ಉಚ್ಚಾಟನೆಯಾಯಿತು. ಬ್ರಿಟಿಶ ರಾಜಪ್ರತಿನಿಧಿಯ ರಾಜಕೀಯ ಖಾತೆಯೂ ಅಂದೇ ನಾಮಶೇಷವಾಯಿತು. ಹೈದರಾಬಾದು ಕಾಶ್ಮೀರ ಈ ಎರಡು ಸಂಸ್ಥಾನಗಳನ್ನು ಬಿಟ್ಟು ಉಳಿದ ಬಹುತರ ಎಲ್ಲ ಸಂಸ್ಥಾನಗಳು ಹಿಂದುಸ್ತಾನ ಇಲ್ಲವೆ ಪಾಕಿಸ್ತಾನ ಸಾಮಂತ ರಾಜ್ಯದೊಡನೆ ಒಪ್ಪಂದ ಮಾಡಿಕೊಂಡು ಅವುಗಳಲ್ಲಿ ಸೇರಿಕೊಂಡಿವೆ. ಭೌಗೋಲಿಕ ವಿಚಾರಗಳನ್ನೆಲ್ಲ ಬದಿಗೊತ್ತಿ ಜುನಾಗಡವು ಪಾಕಿಸ್ತಾನವನ್ನು ಸೇರಿದೆ. ಸಂಸ್ಥಾನಗಳ ಸಮಸ್ಯೆಯನ್ನು ಒಳಹೊಕ್ಕು ನೋಡಬಯಸಿದರೆ, ಹೊಸದಿನ ರಾಜಕೀಯ ಖಾತೆಯು ರೂಢಿ ಪರಂಪರೆ ಮತ್ತು ಆಗಾಗ ಉಪಯೋಗಿಸಿದ ಅಧಿಕಾರ ಅವುಗಳ ಬಲದಿಂದ ಅಮಿತ ಅಧಿಕಾರವನ್ನು ನಡೆಯಿಸುತ್ತಿದೆ.

—ಅಪೂರ್ಣ



ಅಲ್ಲೋಲ ಮತ್ತು ಕಲ್ಲೋಲ

ಬರೆದವರು ಶ್ರೀ ನಾ. ಕಸ್ತೂರಿ, ಪ್ರಕಾಶಕರು ಶಿವಮೊಗ್ಗ ಪ್ರಿಂಟಿಂಗ್ ಎಂಡ್ ಪಬ್ಲಿಶಿಂಗ್ ಕಂಪನಿ, ಲಿಮಿಟೆಡ್ ಅಲ್ಲೋಲ- ಪುಟ ೧೦೮, ಬೆಲೆ ರೂ. ೧॥ ಮತ್ತು ಕಲ್ಲೋಲ- ಪುಟ ೮೦, ಬೆಲೆ ರೂ. ೧.

ಮೇಲಿನವೆರಡು ಶ್ರೀ ಕಸ್ತೂರಿಯವರ ವಿನೋದ ಪ್ರಬಂಧಗಳ ಸಂಕಲನಗಳು. ಮೊದಲನೆಯದರಲ್ಲಿ ೨೪ ಸರಸ ಪ್ರಬಂಧಗಳಿವೆ; ಎರಡನೆಯದರಲ್ಲಿ ೧೭. ಪ್ರತಿಯೊಂದು ಪ್ರಬಂಧದಲ್ಲೂ ಹುಟ್ಟು ಹಾಸ್ಯಗಾರತನ ಚಿಮ್ಮಿನಿಂತಿದೆ. ಒಂದೊಂದರಲ್ಲೂ ಒಂದೊಂದು ನಗೆಗಾರಿಕೆಯ ಗತ್ತಿದೆ. ಇವರ 'ಹಿಮೊ ಶುಂಠಿ' ಜಾಹೀರಾತಿನ ಪ್ರಭಾವವನ್ನು ಓದಿಯೇ ನೋಡಬೇಕು; ಅದರ ಪರಿಣಾಮಿತ್ವ ಅಷ್ಟು ಅದ್ಭುತವಾಗಿದೆ. ಇವರ 'ಗಾಯಕಲ್ಪ'ದಿಂದ ಎಂತಹ ಗಾಯಗೊಂಡ ಮನಸ್ಸಿನ ಗಾಯವಾದರೂ ಮಾಯದಿರದು! 'ಓಲೆಗೊಂದು ಓಲೆ'ಯಲ್ಲಿಯ ಡಾಕ್ಟರನ ಹೆಂಡತಿ ಹೇಳುವ ತನ್ನ ಪ್ರೇಮಸಂಕಟ ಸ್ವಾಭಾವಿಕವೆನಿಸಿಯೂ ಚಮತ್ಕಾರಕವೆನಿಸುತ್ತದೆ. 'ಮಾತಿನ ಯುಗ'ವನ್ನು ಮುಗಿಸಹೊರಟ ಮಾತುಗಾರನ ಮಾತಿನ ಮಾಲೆ ಮೂಕನಿಗೂ ಮಾತು ಕಲಿಸಿ ಕೊಡಬಲ್ಲುದು, ನಗಿಸಿ ಮಾತಿನ ಸ್ಫೂರ್ತಿಯನ್ನು ಕೊಡಬಲ್ಲುದು. 'ನಾನುಹೊತ್ತ ತಲೆ'ಯ ಕುಂಭಕರ್ಣ ಸಂಗೀತದ ಸ್ವಾರಸ್ಯವನ್ನೂ, ಪತಂಜಲಿಗೂ ಅರಿಯದ ಯೋಗಾಸನಗಳ ವೈವಿಧ್ಯವನ್ನೂ ಓದಿ ನೋಡಬೇಕು, ಅರ್ಥಾತ್ ನಕ್ಕು ಪುಷ್ಟರಾಗಬೇಕು! 'ಬಾಲ'ವೃಳ್ಳ ಕಪಿಸುಂದರಿಯರಿಗೆ ತ್ರಿಲೋಕ ಸುಂದರಿಯಾದ ಸೀತೆಯು ಸೊಬಗನ್ನು ಕಂಡು ಉಂಟಾದ ನಿರಾಶೆಯನ್ನು ಓದಿದರೆ ಬಾಲವಿಲ್ಲದವರಿಗೂ ಬಾಲ ಅಲ್ಲಾಡಿಸಿ ನೋಡೋಣ ಎಂಬ ಉತ್ಕಟೇಚ್ಛೆ ಉಂಟಾಗದಿರದು! 'ಬಾಡಿಗೆ ಮನೆ'ಯ ಅನುಕೂಲ - ಪರಂಪರೆಗಳನ್ನು ಪ್ರತಿಯೊಬ್ಬ ಬಾಡಿಗೆದಾರನೂ ಓದಿಕೊಂಡೇ ಮನೆ ಬಾಡಿಗೆ ಹಿಡಿಯಬೇಕು. 'ಗೂರೆ'ಯ ಕುಲದೀಪಕತ್ವ ಮತ್ತು ಅದ್ಭುತ ಸ್ವರ್ಗ ಶಕ್ತಿಗಳನ್ನು ಅಂತಹ ಮೃತ್ಪಿಂಡಬುದ್ಧಿಯ ಮಕ್ಕಳನ್ನು ಪಡೆದ ತಂದೆಯರೇ ಓದಿ ತಿಳಿಯಬೇಕು. 'ಇಪ್ಪತ್ತೇಳು' ವರ್ಷ ವಯಸ್ಸಿನ ಕಾಮಣ್ಣನ ಕನ್ಯಾರ್ಥಿ ದಶೆಯನ್ನು ಕಂಡು ಕನಿಕರಿಸಿಯೂ ನಗದಿರಲಾಗದು. ಹೀಗೆ ಜೀವನವನ್ನು ವಿಶ್ವತೋಮುಖವಾದ ಹಾಸ್ಯದೃಷ್ಟಿಯಿಂದ ಕಂಡು ಚಿತ್ರಿಸಿದ ಈ ವಿನೋದ ಕಥೆಗಳನ್ನವಲೋಕಿಸಿದವರಿಗೆ ಶ್ರೀ ಕಸ್ತೂರಿಯವರು ತೆನ್ನಾಲಿ ರಾಮಕೃಷ್ಣನ ಆಧುನಿಕ ಅವತಾರವಾಗಿ ಕಾಣಿಸದಿರರು. ಇಂತಹ ಹಾಸ್ಯಪೌಷ್ಟಿಕ ರಸಾಯನವನ್ನು ಶ್ರೀ ಕಸ್ತೂರಿಯವರ ಧನ್ವಂತರಿ ಮುಂದಿರದಿಂದ ಇನ್ನೂ ಹೆಚ್ಚಾಗಿ ಕನ್ನಡ ಜನ ಪಡೆವಂತಾಗಲೆಂದು ಆಶಿಸುತ್ತೇವೆ.

ಬೆಸ್ತರ ಕೇರಿಯ

ಬರೆದವರು ಶ್ರೀ ಓರೂರು ರಾಮಸ್ವಾಮಿ ಅಯ್ಯಂಗಾರರು. ಪ್ರಕಾಶಕರು ಮೈಸೂರು ಕಾವ್ಯಾಲಯ, ಪುಟ ೧೭೦ ಬೆಲೆ ಸಾದಾ ಪ್ರತಿಗೆ ರೂ ೨, ಕ್ಯಾಲಿಕೊ ಪ್ರತಿಗೆ ರೂ. ೩.

ಪುಸ್ತಕದಲ್ಲಿ ೧೪ ಬೇರೆ ಬೇರೆ ಚಿಕ್ಕ ಕಥೆಗಳಿವೆ. ಅಯ್ಯಂಗಾರರು ತಮ್ಮ ಸಹಜವಾದ ಸರಳ ವಿನೋದ ಶೈಲಿಯಲ್ಲಿ ಅವುಗಳನ್ನು ಬರೆದಿದ್ದಾರೆ. 'ಕಾಮಭಾಗನ ಸಾವು', 'ಪರಮಿಟ್ ಪಿಶಾಚ', 'ರಂಗಮ್ಮನ ಭೂತ', 'ಅನ್ನದಾತ' ಎಂಬವು ಬಹಳ ಚೆನ್ನಾಗಿವೆ, ರಸವತ್ತಾಗಿವೆ. ಇಂತಹ ಕಥೆಗಳು ಎಷ್ಟಿದ್ದರೂ ಬೇಕು.

ದೇವತಾ ಮನುಷ್ಯ

ಬರೆದವರು ಶ್ರೀ ಕಡೆಂಗೋಡ್ಲು ಶಂಕರಭಟ್ಟರು, ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ ಧಾರವಾಡ ಪುಟ ೩೦೦ ಬೆಲೆ ರೂ. ೨॥.

ಇದೊಂದು ಕಾದಂಬರಿ. ಇಲ್ಲಿಯ ದೇವತಾ ಮನುಷ್ಯನು ಸರಕಾರಕ್ಕೆ ತಿಳಿಯದಂತೆ ಆಸ್ತಿ ಸಂಗ್ರಹಿಸಿ ... ಹೊಗಳುಭಟ್ಟನಾದ ಸೆಟ್ಟಿಯ ಆಪೇಕ್ಷೆ ... ಸುಮ್ಮನೆ ಕುಳಿತುಕೊಂಡ ಬೃಹಸ್ಪತಿ. ... ಚೋರಾಗ್ರೇಸರ ಚಕ್ರವರ್ತಿ. ... ಪದಪ್ಪಗಳಲ್ಲಿ ಚಾಡಪ್ಪನೊಬ್ಬ ಹಳ್ಳಿಯಿಂದ ಮುದ್ರಿತವಾ...

ರಸಿಕ; ಅವನು ಸ್ವಲ್ಪ ನಗೆ ಬರುವಂತೆ ರಸಿಕತೆ ಪ್ರದರ್ಶಿಸುತ್ತಾನೆ. ಕಥಾಕೌತುಕ ಅಪ್ಪಟ್ಟಕ್ಟೇ!

ಪೊರಕೆ

ಬರೆದವರು ಶ್ರೀ ಅ. ನ. ಕೃಷ್ಣರಾಯರು ಪ್ರಕಾಶಕರು ಪ್ರಗತಿಶೀಲ ಲೇಖಕರ ಸಂಘ, ಬೆಂಗಳೂರು. ಪುಟ ೮೦ ಬೆಲೆ ರೂ. ೧.

ಇದರಲ್ಲಿ ೧೬ ಹರಟೆಗಳಿವೆ. ಸಾಧಾರಣ ಓದಬಹುದೆನ್ನಿಸುವಂತಿವೆ.

ಸಂಪಿಗೆ

ಬರೆದವರು ಶ್ರೀ ಕುಲಕರ್ಣಿ ಶ್ರೀನಿವಾಸರು, ಪ್ರಕಾಶಕರು ಸಾಹಿತ್ಯ ಭಾಂಡಾರ ಹುಬ್ಬಳ್ಳಿ. ಪುಟ ೪೫ ಬೆಲೆ ೧೦ ಆಣೆ.

ಇದರಲ್ಲಿ ೬ ಮಣ್ಣಾಟಗಳಿವೆ. ಅವೆಲ್ಲ ಸಾಧಾರಣ ಚೆನ್ನಾಗಿವೆಯೆನ್ನಬಹುದು; ಓದಿ ನೋಡಬಹುದು.

ಅಸ್ಥಿ ಪಂಜರ

ಬರೆದವರು ಶ್ರೀ ಅರ್ಚಿಕ ವೆಂಕಟೇಶ ಪ್ರಕಾಶಕರು ಉಷಾ ಸಾಹಿತ್ಯಮಾಲೆ, ಮೈಸೂರು. ಪುಟ ೨೩೪, ಬೆಲೆ ರೂ. ೩

ಇದೊಂದು ಸಾಮಾಜಿಕ ಕಾದಂಬರಿ. ಇದರಲ್ಲಿ ವಿದ್ಯಾರ್ಥಿಯೊಬ್ಬನ ಗುರುಪ್ರೇಮ, ಅವನಪ್ಪ ಅವನಿಗಿತ್ತ ಕಷ್ಟಕಾರ್ಪಣ್ಯ, ಅಪ್ಪನ ಮೂರ್ಖತ್ವ, ಅವನ ಗೆಳೆಯನ ಸೌಹಾರ್ದ, ಅವನ ಶತ್ರುಗಳ ಕಪಟ ಕಾರಸ್ಥಾನ, ಗುರುವಿನ ಶಿಷ್ಯಪ್ರೇಮ ಇವು ವರ್ಣಿತವಾಗಿವೆ. ಪತ್ರಿಕಾಲಯಗಳ ಅಧಿಕಾರಿಗಳ ಅಹಂಕಾರ, ಅತ್ಯೋತ್ತಮ ಭಾವಗಳೂ ಪಂಡಿತರ ಪರಸ್ಪರ ಅಸೂಯೆ ಅಸಹಿಷ್ಣುತೆಗಳೂ, ಕಥಾನಾಯಕನಾದ ವಿದ್ಯಾರ್ಥಿಯ ಕವಿಪ್ರೇಮ ಕಲಾಪರತೆಗಳೂ ಅವನ ದಟ್ಟದಾರಿದ್ರ್ಯ, ಸಂಸಾರ ಕಲಹಗಳೂ, ಉದ್ಯೋಗದಲ್ಲಿಯ ಕಷ್ಟನಷ್ಟಗಳೂ ಅತಿಕ್ರಮ ರೋಗ ರುಜೆಗಳೂ ಚಿತ್ರಿಸಲ್ಪಟ್ಟಿವೆ. ಇದು ಬಹುಶಃ ಗ್ರಂಥ ಕರ್ತರ ಆತ್ಮಚರಿತ್ರೆಯೇನೋ? ಎನ್ನಿಸದಿರದು. ಅದು ಹೇಗೂ ಇರಲಿ, ಇಂದಿನ ಪ್ರಸಿದ್ಧ ಸಾಹಿತಿಗಳಲ್ಲೊಬ್ಬರಾದ ಶ್ರೀ ಅ. ನ. ಕೃಷ್ಣರಾಯರನ್ನು ಅಪಾದಮಸ್ತಕ ಹೊಗಳಿದ್ದು ಕಂಡು ಬರುತ್ತದೆ. ಇದೇ ಇದರ ವೈಶಿಷ್ಟ್ಯ. ಒಟ್ಟಿನ ಮೇಲೆ ಪುಸ್ತಕ ಓದಲರ್ಹವಾಗಿದೆಯೆಂದು ಹೇಳಬಹುದು.

ಆಗಸ್ಟ ಒಂಬತ್ತು

ಬರೆದವರು ಶ್ರೀ ಬಸವರಾಜ ಕಟ್ಟೀಮನಿ ಪ್ರಕಾಶಕರು ಪ್ರಭಾತ ಸಾಹಿತ್ಯ ಮಲ್ಲೇಶ್ವರ ಬೆಂಗಳೂರು. ಪುಟ ೧೧೪, ಬೆಲೆ ರೂ- ೧॥.

ಇದೊಂದು ಕಥಾ ಸಂಗ್ರಹ. ಇದರಲ್ಲಿ ೭ ಕಥೆಗಳಿವೆ. ಪ್ರತಿಯೊಂದರಲ್ಲೂ ಭಾರತದ ಬಹುಸಂಖ್ಯಾಕರ ಮನೆಯಲ್ಲಿಯ ಲಕ್ಷ್ಮೀಸಹೋದರಿಯ (ದರಿದ್ರ್ಯಲಕ್ಷ್ಮಿಯ) ಲೀಲೆಯನ್ನೂ ಸ್ವಾತಂತ್ರ್ಯ ಸಮರದಲ್ಲಿ ಕುಟಾರ ನ್ಯಾಯದಿಂದ ವರ್ತಿಸಿದ ಹಿಂದೀ ಪೋಲೀಸರ ಪಾಶವೀ ಪ್ರವೃತ್ತಿಯನ್ನೂ ಕಾಂಗ್ರೆಸ್ಸಿಗರ ಅಚಲವಾದ ದೇಶಪ್ರೇಮ, ರಾಷ್ಟ್ರನಿಷ್ಠೆ, ದೃಢಸಂಕಲ್ಪ, ಕರ್ತವ್ಯ ಶ್ರದ್ಧೆ ಸಹನಾಶಕ್ತಿಗಳನ್ನೂ ಮನಕರಗುವಂತೆ ವರ್ಣಿಸಲಾಗಿದೆ. ಇಲ್ಲಿ ಪಾತ್ರಪರಿಚಯಕ್ಕಿಂತ ಸಾಮೂಹಿಕ ಹೋರಾಟದ ಸನ್ನಿವೇಶಕ್ಕೇ ಹೆಚ್ಚು ಪ್ರಾಧಾನ್ಯ ಕೊಡಲಾಗಿದೆ, ಅದುದರಿಂದ ಇದರಲ್ಲಿ ಕಥಾನಾಯಕ ಪಟ್ಟವು ಇಡೀ ಜನತೆಗೆ ದೊರೆತಂತಾಗಿದೆ. ಈ ಕಾರಣದಿಂದ ಇಲ್ಲಿ ಐತಿಹಾಸಿಕ ಚಿತ್ರ ಸಿಗುತ್ತದೆಯಲ್ಲದೆ ವ್ಯಕ್ತಿ ಜೀವನದ ವಿವರ ದೊರೆಯಲಿಕ್ಕಿಲ್ಲ. ಒಟ್ಟಿನ ಮೇಲೆ ಪುಸ್ತಕ ಸ್ವಾಗತಾರ್ಹವಾಗಿದೆ; ದೇಶಪ್ರೇಮಿಗಳಿಗೆ ರಸಗವಳವೆನಿಸುವಂತಾಗಿದೆ.

ಪ್ರಕಾಶ (ಹೊಸ ಮಾಸಿಕ)

ಸಂಪಾದಕ ಮತ್ತು ಪ್ರಕಾಶಕರು ಶ್ರೀ ಯು. ವ್ಯಾಸರಾಯರು, ಪ್ರಕಾಶ ಕಾರ್ಯಾಲಯ, ಉಡುಪಿ. ಪುಟಗಳು ೩೦. ಬೆಲೆ ೬ ಆಣೆ.

ಇದೊಂದು ಹೊಸ ಮಾಸಪತ್ರಿಕೆ. ಶ್ರೀ ಕೃಷ್ಣಧಾಮವಾದ ಉಡುಪಿಯಿಂದ ಹೊರಡುತ್ತಿದೆ. ಇದರ ಪ್ರಥಮ ಸಂಚಿಕೆ ಸಾಧಾರಣ ಚೆನ್ನಾಗಿ ಪ್ರಕಟವಾಗಿದೆ. ಕತೆ, ಕವಿತೆ, ಪ್ರಬಂಧಗಳನ್ನು ವಿವಿಧ ಲೇಖಕರು ಬರೆದುಕೊಟ್ಟಿದ್ದಾರೆ, ಇನ್ನು ಮುಂದೆಯೂ ಬರೆದು ಕೊಡುವರಂತೆ. ಕನ್ನಡದಲ್ಲಿ ಮೂಡಿ ಮುಳುಗಿದ ಮಾಸ ಪತ್ರಿಕಾ ಕಾರರ ಗಳು ಸಂಖ್ಯೆಯಲ್ಲಿ ಕಡಿಮೆಯಿಲ್ಲ. ಆರಂಭಶೂರತ್ವ ತೋರಿ ದಿನ ಹೋದ ಹಾಗೆ ರಾಯರ ಕುದುರೆಯ ಕಿವಿ ಉದ್ದವಾಗುತ್ತ ಹೋದಂತೆ ನಾನಾವಿಧ ಕಾರ್ಪಣ್ಯಗಳಿಂದ, ಹಳಸಿ ಹೋಗಿ ಜೀವ ಬಿಡುತ್ತಿರುವವೂ ಎಷ್ಟೋ ಇವೆ. ಅವುಗಳಂತಾಗದೆ ಸಧ್ಯದ ಮಾಸಿಕಗಳಿಗಿಂತ ಉತ್ತಮ ರೀತಿಯಿಂದ, ಕುಂದದ ಅಜಸ್ರಧಾರೆಯ ಉತ್ಸಾಹದಿಂದ 'ಪ್ರಕಾಶ' ಸಾಗುವುದೆಂದು ಆಶಿಸುತ್ತೇವೆ. 'ಕ್ಷೀರಸಾಗರ ಭಟ್ಟ, ಮನೆಯಲ್ಲಿ ಮಜ್ಜಿಗೆಗೆ ಗತಿಯಿಲ್ಲ'ವೆಂಬಂತಹ ನಾಮಧಾರಿ ಪತ್ರಿಕೆಗಳಂತಾಗದೆ ಕನ್ನಡ ನಾಡಿನ ಅಷ್ಟದಿಕ್ಕುಗಳಲ್ಲಿ ಜನಪ್ರಿಯವಾಗಬೇಕೆಂಬ ಆದರ್ಶದಿಂದ ದುಡಿದರೆ 'ಪ್ರಕಾಶ' ಸಾರ್ಥಕತೆ ಪಡೆದೀತೆಂಬುದರಲ್ಲಿ ಸಂದೇಹವಿಲ್ಲ. 'ಪ್ರಕಾಶ'ಕ್ಕೆ ಸ್ವಾಗತ.

India's Insoluble Hunger

by John Fischer, Publishers Vora & Co. 3-4 Round Building Bombay 2. Price Re. 1 only.

ಅಮೇರಿಕೆಯ ಪ್ರಸಿದ್ಧ ಗ್ರಂಥಕರ್ತರಾದ ಜಾನ ಫಿಶರರು ೧೯೪೩—೪೪ ರಲ್ಲಿ ಹಿಂದುಸ್ತಾನಕ್ಕೆ ಬಂದು ಒಂದು ವರ್ಷದಷ್ಟು ಕಾಲವನ್ನು ಇಲ್ಲಿ ಕಳೆದು ಇಲ್ಲಿನ ಪರಿಸ್ಥಿತಿಯನ್ನು ಕಣ್ಣಾರೆ ಕಂಡಿರುವರು. ಹಿಂದುಸ್ತಾನದಂಥ ವಿಶಾಲ ದೇಶದಲ್ಲಿ ಆಹಾರ ಪರಿಸ್ಥಿತಿ ಅತ್ಯಂತ ಬಿಕ್ಕಟ್ಟಿನದಾಗಿ ಬಂಗಾಲದಲ್ಲಿ ಲಕ್ಷಗಟ್ಟಲೆ ಜನರು ಬರಗಾಲದ ಬಾಧೆಗೆ ತುತ್ತಾಗಿ ಪ್ರಾಣವನ್ನು ಕಳೆದುಕೊಂಡುದನ್ನು ಲೇಖಕರುಹೃದಯಕರವಾಗುವಂತೆಚಿತ್ರಿಸಿದ್ದಾರೆ. ಹಿಂದುಸ್ತಾನದ ಒಕ್ಕಲತನದ ಮೇಲೆ ಬೀಳುತ್ತಿರುವ ಈ ಭಾರವನ್ನು ಕಡಮೆ ಮಾಡದಿದ್ದರೆ ಬಂಗಾಲದಲ್ಲಿ ಕಳೆದ ಬರಗಾಲದ ಕಾಲಕ್ಕೆ ಬಂದ ದುರಂತ ಪರಿಸ್ಥಿತಿ ಹಿಂದುಸ್ತಾನಕ್ಕೆ ಬಾರದಿರದೆಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ. ಈ ಬಗೆಯ ದುರಂತ ಪರಿಸ್ಥಿತಿಯನ್ನು ತಪ್ಪಿಸುವ ಉಪಾಯಗಳಿಲ್ಲವೇ ಎಂದು ಲೇಖಕರು ಪ್ರಶ್ನಿಸಿದ್ದಾರೆ. ಸದ್ಯದಲ್ಲಿಯೂ ಹಿಂದುಸ್ತಾನ ಆಹಾರ ದುಸ್ಥಿತಿಯಿಂದ ಕೊರಗುತಿರುವದು. ಈ ಸಮಯದಲ್ಲಿ ಫಿಶರರಂಥ ಅನುಭವಿಕ ಲೇಖಕರು ಮಾಡಿದ ಸೂಚನೆಗಳತ್ತ ಗಮನಿಸುವದು ಅಪ್ರಸ್ತುತವಾಗಲಾರದು. ವೋರಾ ಕಂಪನಿಯವರು ಸಕಾಲದಲ್ಲಿ ಈ ಪುಟ್ಟ ಪುಸ್ತಕವನ್ನು ಪ್ರಸಿದ್ಧ ಮಾಡಿ ಪ್ರಶಂಸನಾರ್ಹರಾಗಿರುವರು.

Little Known Facts About Wellknown People.

by D... ...egie Published by Vora ... Ltd 3 Round Building ... Kalbadevi Road Bombay ... ... 1/8 250 P. P.

ಪ್ರಸಿದ್ಧ ಗ್ರಂಥಕರ್ತರಾದ ಡೇಲ ಕಾರ್ನೇಜಿಯವರು ಜಗತ್ತಿನಲ್ಲಿ ಪ್ರಸಿದ್ಧ ಪುರುಷರ ಸಾರವಾದ ಚರಿತ್ರವನ್ನು ಈ ಪುಟ್ಟ ಪುಸ್ತಕದಲ್ಲಿ ಸಂಗ್ರಹಿಸಿದ್ದಾರೆ. ಅಯಾ ... ಗಳು ಅಷ್ಟೊಂದು ಪ್ರಸಿದ್ಧಿಗೆ ಬರುವದಕ್ಕೆ ಅಂಥ ಗುಣಗಳು ಅವರಲ್ಲಿದ್ದುದಾದರೂ ಏನು ... ಬುದನ್ನು ತಿಳಿದುಕೊಳ್ಳುವದು ... ಕೌತುಕವನ್ನುಂಟು ಮಾಡುವಂತಹದು. ... ನ ಪುರುಷರ ಬಾಲ್ಯ, ಆಗ ಅವರ ... ಅವು ಹೇಗೆ ಅಭಿವೃದ್ಧಿ ಹೊಂದಿ ... ಮುಂತಾದವುಗಳನ್ನೆಲ್ಲ ಅಭ್ಯಸಿಸುವುದು ... ಸಂಗವಾಗದಿರಲಾರದು. ವಿಶೇ... ನಾಗರಿಕರಾಗಬಯಸುವವರು ... ಪುರುಷರಲ್ಲಿಯ ಗುಣಗಳ ... ಬೆಂಬುವನ್ನು ತಿಳಿದುಕೊಳ್ಳುವುದು ... . ಎಷ್ಟೋ ಪ್ರಸಿದ್ಧ ಪುರುಷರು ... ದರು, ಅಸಂಖ್ಯಾತ ... ಹೋರಾಟಗಳಲ್ಲಿ ಆಸಕ್ತರಾಗಿದ್ದರೂ ಅವರಲ್ಲಿ ಸುಪ್ತವಾಗಿದ್ದ ಶ್ರೇಷ್ಠ ಅಂಶವು ಹೇಗೆ ವಿಕಾಸ ಹೊಂದಿ ಅವರು ಹೇಗೆ ಮಾನವಶ್ರೇಷ್ಠರಾದರೆಂಬುದನ್ನು ಅಭ್ಯಸಿಸುವದು ಹೃದಯಂಗಮವಾಗದಿರಲಾರದು. ಪ್ರಸ್ತುತ ಲೇಖಕರು ಇಂದಿನ ಶ್ರೇಷ್ಠ ೪೦ ಪುರುಷರಲ್ಲಿಯ ಯಾರಿಗೂ ಸಾಮಾನ್ಯವಾಗಿ ಗೊತ್ತಿರದ ಇಲ್ಲವೆ ವಿವರವಾಗಿ ಗೊತ್ತಿರದ ಗುಣಗಳ ಅಂತರವನ್ನೆತ್ತಿ ಅವರು ಹೇಗೆ ಇಂದು ಶ್ರೇಷ್ಠ ವ್ಯಕ್ತಿಗಳಾಗಿರುವರೆಂಬುದನ್ನು ಚಿತ್ರಿಸಿದ್ದಾರೆ.

ಇದರಲ್ಲಿ ಮಹಾತ್ಮಾಗಾಂಧಿ ಹೈದರಾಬಾದ ನಿಜಾಮ ಸಾಹೇಬರುಇವರಚರಿತ್ರಗಳೂಬಂದುದು ಭಾರತೀಯರಿಗೆ ಅಭಿಮಾನದ ಸಂಗತಿಯಾಗಿದೆ. ಆಂಗ್ಲಭಾಷಾಭಿಜ್ಞರು ಇದರ ಉಪಯೋಗ ಪಡೆಯಬೇಕಾಗಿ ಸೂಚಿಸುತ್ತೇವೆ.

ಮೂಗೂರಿನಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಮಹಿಮೆ

ಗ್ರಂಥಕರ್ತರು ಕೀರ್ತನಾಚಾರ್ಯ ಬೇಲೂರು ಕೇಶವದಾಸರು. ಪುಸ್ತಕ ದೊರೆಯುವ ಸ್ಥಳ ಕಲ್ಯಾಣಮಂಟಪ ಮೂಗೂರು ಜಿಲ್ಲಾ ಮೈಸೂರು ಮತ್ತು ಹರಿಮಂದಿರ ವಾಣಿ ವಿಲಾಸ ಮೊಹಲ್ಲಾ ಮೈಸೂರು ಡೆಮಿ ಅಷ್ಟಪತ್ರದ ೯೬ ಪುಟಗಳು ಬೆಲೆ ೧—೮—೦. ಅಂಚೆ ವೆಚ್ಚ ಪ್ರತ್ಯೇಕ.

ಮೂಗೂರಿನಲ್ಲಿ ಕಳೆದ ಆರು ವರುಷ... ಶ್ರೀ ನರಸಿಂಹ ಮೂರ್ತಿಯವರಲ್ಲಿ ಶ್ರೀ ... ವೇಂದ್ರ ಸ್ವಾಮಿಗಳು ಆವಿಷ್ಟರಾಗಿ ಅಪಾರ ಮಹಿಮೆಯನ್ನು ತೋರಿಸುತಿರುವುದು ಸರ್ವಶ್ರುತ. ಈಗಾಗಲೆ ಈ ಸಂಬಂಧದಲ್ಲಿ ಎರಡು ಪುಸ್ತಕಗಳು ಪ್ರಕಟವಾಗಿದ್ದು ಇದು ಮೂರನೆಯ ಪುಸ್ತಕ. ಕೀರ್ತನಾಚಾರ್ಯ ಬೇಲೂರು ಕೇಶವದಾಸರು ಸ್ವತಃ ಮೂಗೂರಿಗೆ ಹೋಗಿ ಎಲ್ಲವನ್ನೂ ಕಣ್ಣಾರೆ ಕಂಡು ಅನುಭವಿಸಿ ವಿಮರ್ಶಿಸಿ ಬರೆದ ಪುಸ್ತಕವಿದು'. ಅತಿಶಯೋಕ್ತಿಯೊಂದನ್ನು ಬರೆಯುತ್ತಿಲ್ಲ. ಕಂಡದ್ದನ್ನು ಬರೆದಿಟ್ಟಿದೆ. ಬರೆದಿಟ್ಟದ್ದನ್ನು ಇದ್ದಕ್ಕಿದ್ದ ಹಾಗೆ ಪ್ರಸಿದ್ಧಿಸುತಿದೆ. ಈಗಲೂ ಇಂಥ ಮಹಿಮೆಯನ್ನು ಶ್ರೀ ಗುರುಗಳು ಮೂಗೂರಿನಲ್ಲಿ ತೋರಿಸುತಿರುವರು. ಶ್ರೀ ಕೃಷ್ಣಮೂರ್ತಿಯವರು ತಾವು ನಿರಂತರ ಅಭ್ಯಸಿಸುತಿರುವ ಮನೋವಿಜ್ಞಾನದ ಒರೆಗಲ್ಲಿಗೆ ಹಚ್ಚಿ ಇದನ್ನೆಲ್ಲ ಪರಿಶೀಲಿಸಿರುವರು. ಅನೇಕರು ಈ ಅಪಾರ ಮಹಿಮೆಯನ್ನು ಕೇಳಿ ಸ್ವತಃ ಅಲ್ಲಿಗೆ ಬಂದು ಎಲ್ಲವನ್ನು ನೋಡಿಕೊಂಡು ಸೇವೆಮಾಡಿ ಉದ್ದಿಷ್ಟವನ್ನು ಸಾಧಿಸಿಕೊಂಡು ಹೋದದ್ದುಂಟು. ರೋಗಾರ್ತರು ರೋಗಮುಕ್ತರಾದರು. ಜೀವನ ಸಂಗ್ರಾಮಕ್ಕೆ ಬೇಸತ್ತವರು ಜೀವನವನ್ನು ದೊರಕಿಸಿರುವರು. ಇದೆಲ್ಲವು ನಡೆದ ಕತೆ. ಕನಸಿನ ಕಂತೆಯಿಲ್ಲ. ಈ ಅಪಾರ ಮಹಿಮೆಯನ್ನು ಈ ಪುಸ್ತಕದಲ್ಲಿ ಬಣ್ಣಿಸಲಾಗಿದೆ. ಶ್ರೀ ರಾಘವೇಂದ್ರ ಸ್ವಾಮಿಗಳ ಭಕ್ತರು ಈ ಪುಸ್ತಕದ ಉಪಯೋಗ ಮಾಡಿಕೊಂಡು ಅಪಾರ ಮಹಿಮೆಯನ್ನು ತಿಳಿದುಕೊಂಡು ಅವರಲ್ಲಿ ಅನನ್ಯ ಭಕ್ತಿಯನ್ನು ಇಟ್ಟು ಪುರುಷಾರ್ಥಗಳನ್ನು ಪಡೆಯಬೇಕೆಂದು ಸೂಚಿಸದಿರಲಾರೆವು.

ಸಂಪಾದಕೀಯ ಟೀಕೆಟಿಪ್ಪಣಿಗಳು

ಭಾಷಾನ್ವಯ ಪ್ರಾಂತರಚನೆ

ಕರ್ನಾಟಕವು ತನ್ನ ಧ್ಯೇಯವಾದ ಸ್ವತಂತ್ರ ಪ್ರಾಂತದ ರಚನೆಗಾಗಿ ಇದೇ ತಿಂಗಳು ನಾಲ್ಕು ಮತ್ತು ಐದನೆಯ ತಾರೀಕುಗಳಲ್ಲಿ ಸಭೆ ಸೇರಿಸಿ ನಿರ್ಣಯಗಳನ್ನು ಸ್ವೀಕರಿಸಿದ್ದುಂಟು. ಮೊದಲನೆಯ ದಿನ ಕರ್ನಾಟಕ ಏಕೀಕರಣ ದಿನವನ್ನು ಕನ್ನಡಿಗರು ಆಚರಿಸಿದರೆ, ಎರಡನೆಯ ದಿನ ಆಂಧ್ರ ತಮಿಳ ಕೇರಳದವರ ಜೊತೆಗೆ ಭಾಷಾನ್ವಯ ಪ್ರಾಂತ ರಚನೆಯ ದಿನವನ್ನಾಚರಿಸಿದರು. ಕನ್ನಡಿಗರು ಸ್ವತಂತ್ರ ಪ್ರಾಂತಕ್ಕಾಗಿ ಕಳೆದ ೨೫—೩೦ ವರುಷಗಳಿಂದ ಒಂದೇ ಸವನೆ ಪ್ರಯತ್ನ ಮಾಡುತಿದಾರೆ. ಅದರ ಫಲವಾಗಿಯೆ ಕಾಂಗ್ರೆಸ್ಸಿನ ಆಡಳಿತದಲ್ಲಿ ಅದಕ್ಕೆ ಸ್ವತಂತ್ರಸ್ಥಾನ ಸಿಕ್ಕು ಅದರ ಮುಖಾಂತರ ಕನ್ನಡ ನಾಡಿನ ಕೀರ್ತಿ ದೇಶದಲ್ಲೆಲ್ಲ ಹರಡಿದೆ. ದೇಶದಲ್ಲಿಯ ಬಹುಶಃ ಎಲ್ಲ ಪಕ್ಷಪಂಗಡಗಳ ಧುರೀಣರು ಈ ತತ್ವವನ್ನೊಪ್ಪಿದ್ದಾರೆ. ಆದರೆ ವ್ಯಾವಹಾರಿಕ ತೊಡಕುಗಳು ಹಲವು ಈವರೆಗೆ ಉಪಸ್ಥಿತವಾದ್ದರಿಂದ ಈ ಪ್ರಶ್ನೆ ಸ್ವಲ್ಪ ವಿಲಂಬಿಸಹತ್ತಿದೆ. ಅದರೀಗ ಅದಕ್ಕೆ ಸುಮುಹೂರ್ತ ಬಂದಿದ್ದರಿಂದ ಕನ್ನಡಿಗರು ವಿಶೇಷ ಪ್ರಯತ್ನ ಮಾಡಿ ಅದನ್ನು ಸಾಧಿಸಿಕೊಳ್ಳುವರೆಂಡು ಬಲವಾದ ಆಸೆಯಿದೆ. ಸ್ವತಂತ್ರ್ಯ ಮಸೂದೆ ಸ್ವೀಕೃತವಾಗುವ ಮೊದಲು ಇದ್ದ ಪ್ರತ್ಯಕ್ಷ ಅಪ್ರತ್ಯಕ್ಷ ಅಡಚಣೆಗಳು ಇಲ್ಲದಂತಾಗಿವೆಯೆಂದು ಘಟನಾ ಸಮಿತಿಯಲ್ಲಿಯ ಪ್ರಾಂತೀಯಮುಖಂಡರು ಅರ್ಥಾತ್ ಈ ನಾಲ್ಕು ಪ್ರಾಂತಿಕ ಸಮಿತಿಗಳ ಸದಸ್ಯರು ಅಭಿಪ್ರಾಯಪಡುತಿದ್ದುದು ನಿಜವಾಗಿದೆ. ಆದುದರಿಂದ ಘಟನಾ ಸಮಿತಿಯವರು ಬೇಗ ಈ ಬಗ್ಗೆ ನಿರ್ಣಯವೊಂದನ್ನು ತೆಗೆದುಕೊಂಡು ಸೀಮಾ ನಿರ್ಣಯ ಸಮಿತಿಯನ್ನು ನೇಮಿಸಬೇಕೆಂದು ಸೂಚಿಸುತ್ತೇವೆ. ಶ್ರೀ ಅಚ್ಯುತ ಪಟವರ್ಧನರಂಥ ಸಂದೇಹರಾಯರ ಆಕ್ಷೇಪಗಳು ಹುರುಳಿಲ್ಲವವಾಗಿವೆಯಲ್ಲದೆ ಇಂಥ ಆಕ್ಷೇಪಗಳಿಗೆ ಸದ್ಯಕ್ಕೆ ಅವಕಾಶವೆ ಇಲ್ಲ. ಸ್ವತಂತ್ರ ಪ್ರಾಂತದಿಂದ ಜನತೆಯ ಮತ್ತು ದೇಶದ ಸಾರ್ವತ್ರಿಕ ಉದ್ಧಾರವಾಗುವದೆಂದು ಬೇರೆ ಹೇಳಬೇಕಿಲ್ಲ. ಸ್ವತಂತ್ರ ಪ್ರಾಂತ ನಿರ್ಮಾಣದಿಂದ ಕೇಂದ್ರದ, ಆರ್ಥಿಕ ಭದ್ರತೆ ಕಡಿಮೆಯಾಗುವದೆಂದು ಹೇಳುವದೂ ಸಮಂಜಸವಲ್ಲ. ಆದುದರಿಂದ ಅಚ್ಯುತ ಪಟವರ್ಧನರಂಥವರು ಜನತೆಯಲ್ಲಿ ಅನವಶ್ಯಕ ಪ್ರಕ್ಷೋಭೆ ಏಳುವಂಥ ಸಮಸ್ಯೆಗಳನ್ನು ಉದ್ಭವಿಸಬಾರದು. ಹಿಂದುಸ್ತಾನದ ಹೊಸ ಘಟನೆ ಸಿದ್ಧವಾಗುವ ಈ ಸಮಯಕ್ಕಿಂತ ಬೇರೆ ಯಾವ ಸಮಯವು ಭಾಷಾನ್ವಯ ಪ್ರಾಂತ ರಚನೆಗೆ ಯೋಗ್ಯವಾದುದು? ಇದೆಲ್ಲವನ್ನು ವಿಚಾರ ಮಾಡಿಯೆ ಘಟನಾ ಸಮಿತಿಯ ಹಿಂದೀ ಒಕ್ಕೂಟ ಮತ್ತು ಪ್ರಾಂತೀಯ ಸಂಯುಕ್ತ ಸಮಿತಿಯವರು ಇದಕ್ಕೆ ಮನ್ನಣೆ ಕೊಟ್ಟದ್ದುಂಟು. ಜನರು ಇಂಥ ಆಕ್ಷೇಪಗಳಿಂದ ರೊಚ್ಚಿಗೇಳದೆ, ಖತಿಗೊಳ್ಳದೆ ಉದ್ದಿಷ್ಟ ಕಾರ್ಯವನ್ನು ನಡೆಸಬೇಕು.

ಅಶಾಂತಿ, ಅಸಹನೆ ಸಲ್ಲದು

ಹೊಸ ಪ್ರಾಂತಗಳ ನಿರ್ಮಾಣವು ಶಾಂತ ರೀತಿಯಿಂದ ಸಾಗತಕ್ಕದ್ದು. ಗಡಿಗಳನ್ನು ನಿರ್ಣಯಿಸಿಕೊಳ್ಳುವಾಗ ಕೂಡ ವಿಶೇಷ ತಿಕ್ಕಾಟವೇಳದಂತೆ ನೋಡಿಕೊಳ್ಳುವುದು ಅವಶ್ಯಕವಾಗಿದೆ. ಈ ಪ್ರಶ್ನೆ ಇನ್ನೂ ಬಹಳ ದೂರವಿರುವಾಗ ಜನರು ನಿರರ್ಥಕವಾಗಿ ರೊಚ್ಚಿಗೆದ್ದು ಸಲ್ಲದ ರೀತಿಯಿಂದ ವರ್ತಿಸುವದು ಅತ್ಯಂತ ವಿಷಾದಕರವು. ೪ನೆಯ ಮತ್ತು ೫ ನೆಯ ತಾರೀಕಿನ ದಿನಾಚರಣೆಯ ಕಾಲಕ್ಕೆ ಅಲ್ಲಲ್ಲಿ ಈ ಬಗೆಯ ತಿಕ್ಕಾಟ ಸಂಭವಿಸಿದ ಸುದ್ದಿಗಳು ಪ್ರಸಿದ್ಧವಾಗಿವೆ. ಒತ್ತಾಯದಿಂದ ಜನತೆಯನ್ನು ಹರತಾಳ ಮಾಡಹಚ್ಚುವುದು, ಸಾಲೆ ಕಾಲೇಜ ವಿದ್ಯಾರ್ಥಿಗಳನ್ನು ಒತ್ತಾಯದಿಂದ, ಬಲಾತ್ಕಾರದಿಂದ ಹೊರಗೆ ತರುವದು ಇಲ್ಲವೆ ಅವುಗಳ ಕಟ್ಟಡಗಳ ಮೇಲೆ ಇಲ್ಲವೆ ಶಿಕ್ಷಕರಿಗೆ ಕಲ್ಲು ಮುಂತಾದವುಗಳನ್ನು ಒಗೆಯುವದು ಯಾವ ರೀತಿಯಿಂದಲೂ ಸಲ್ಲದು. ಇವೆಲ್ಲ ಅಸಂಸ್ಕೃತ, ಅಶಿಕ್ಷಿತ ಹುಂಬರ ಕೆಲಸವು. ಅದೇ ರೀತಿಯಾಗಿ ಬೇರೆ ಪ್ರಾಂತದವರಿಗೆ ಇಲ್ಲವೆ ಭಾಷೆಯವರಿಗೆ ಅಪಮಾನಕರ ಘೋಷಣೆಗಳನ್ನು ಮಾಡುವುದು, ಭಾಷಣಗಳಲ್ಲಿ ಅಂಥ ಶಬ್ದಗಳನ್ನು ಉಚ್ಚರಿಸುವದು ಯಾವ ಬಗೆಯಿಂದಲೂ ಇಷ್ಟವಲ್ಲ. ಲಾಠಿ ಮುಂತಾದವುಗಳನ್ನು ಉಪಯೋಗಿಸುವದಂತೂ ಅತ್ಯಂತ ನಿಂದ್ಯವಾದುದು. ಬಾಗಲಕೋಟೆ ಬೆಳಗಾವಿಗಳಲ್ಲಿ ನಡೆದ ಈ ಅಕ್ರಮ ವರ್ತನೆಗಳಿಂದ ಉದ್ದಿಷ್ಟವೆಂದಿಗೂ ಸಾಧ್ಯವಾಗದು. ಕರ್ನಾಟಕ ಏಕೀಕರಣ ಪ್ರಶ್ನೆಯಲ್ಲಿ ತಾವೇ ಒಳ್ಳೆ ನಿಷ್ಠೆಯಿಂದ ಕೆಲಸ ಮಾಡುತಿರುವೆವೆಂದು ಯಾರೊಬ್ಬರೂ ಜಂಬ ಕೊಚ್ಚಿಕೊಳ್ಳಬಾರದು. ಸ್ವತಂತ್ರಪ್ರಾಂತಕ್ಕಾಗಿ ಕನ್ನಡಿಗರು ಜಾತಿ ಮತಪಂಥಗಳೆನ್ನದೆ ಆತುರರಾಗಿರುವರು. ಈ ಪರಿಸ್ಥಿತಿಯಲ್ಲಿ ನಿರರ್ಥಕವಾಗಿ ಅನ್ಯರ ಮೇಲೆ ಹರಿಹಾಯಬಾರದು. ಅಲ್ಪಸಂಖ್ಯಾಕರ ಬೇಡಿಕೆಗಳನ್ನು ಅಲಕ್ಷಿಸಬಾರದು ಇಲ್ಲವೆ ತುಚ್ಛವೆಂದು ಗ್ರಹಿಸಬಾರದು. ಕನ್ನಡಿಗರು ಮತ್ತು ಮರಾಠಿಗರು ಇದನ್ನೆಲ್ಲ ನೆನೆದುಕೊಂಡು ಪುಂಡಾಟಿಕೆಗೆ ಅವಕಾಶ ದೊರೆಯದಂತೆ ನೋಡಿಕೊಳ್ಳಬೇಕೆಂದು ಆಗ್ರಹದಿಂದ ಸೂಚಿಸುತ್ತೇವೆ. ಘಟನಾ ಸಮಿತಿಯಲ್ಲಿ ಪ್ರಾಂತೀಕರಣ ಪ್ರಶ್ನೆಗೆ ಮನ್ನಣೆ ದೊರೆತು ಗಡಿ ನಿರ್ಣಯ ಸಮಿತಿ ನೇಮಿಸಲ್ಪಡುವವರೆಗೆ ಭಾಷಾನ್ವಯ ಪ್ರಾಂತ ರಚನೆಯ ಈ ಒಕ್ಕೊರಲಿನ ಬೇಡಿಕೆಯನ್ನು ಸಮಾಧಾನಕರವಾಗಿ ಮಂಡಿಸೋಣ. ಗಡಿ ನಿರ್ಣಾಯಕ ಸಮಿತಿಯ ಮುಂದೆ ತಮ್ಮ ಹಕ್ಕು ಬಾಧ್ಯತೆಗಳನ್ನು ಪುರಾವೆ ಸಹಿತವಾಗಿ ಶಾಂತ ರೀತಿಯಿಂದ ಆಯಾ ಭಾಷೆಯವರು ಮತ್ತು ವರ್ಗದವರು ಮಂಡಿಸಿ ನ್ಯಾಯ್ಯವಾಗಿ ಅದನ್ನು ಸಾಧಿಸಿಕೊಳ್ಳತಕ್ಕದ್ದು. ಈ ರಾಜಮಾರ್ಗವನ್ನು ಬಿಟ್ಟುಗೊಟ್ಟು ಪ್ರಾಂತದಲ್ಲಿ ಅಶಾಂತತೆ ಹುಟ್ಟುವಂಥ ಧೋರಣವನ್ನು ವಹಿಸುವದು ಯಾವ ರೀತಿಯಿಂದಲೂ ಇಷ್ಟವಲ್ಲ—ಸಂಬಂಧಿಸಿದವರೆಲ್ಲ ಇತ್ತ ಗಮನಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಉದ್ದೇಶ ಪೂರ್ಣ ಸಫಲವಾಗದು

ಬ್ರಿಟಿಶರು ನೂರೈವತ್ತು ವರುಷಗಳಿಂದ ಭಾರತದಲ್ಲಿ ಆಡಳಿತೆಯನ್ನು ಸಾಗಿಸಿದರೂ ನೂರಕ್ಕೆ ೬ಕ್ಕಿಂತ ಹೆಚ್ಚು ಜನರನ್ನು ಸಾಕ್ಷರರನ್ನಾಗಿ ಮಾಡುವದು ಅವರಿಂದ ಆಗಲಿಲ್ಲ. ಸ್ವತಂತ್ರಭಾರತವಿಂದು ಆ ಕಾರ್ಯವನ್ನು ಕೈಕೊಂಡು ಜನತೆಯನ್ನೆಲ್ಲ ಸಾಕ್ಷರ ಮಾಡಬೇಕಾಗಿದೆ. ಈ ಬಗ್ಗೆ ಆಯಾ ಪ್ರಾಂತೀಯ ಸರಕಾರಗಳು ಕಾಯಿದೆಗಳನ್ನು ಮಾಡಿಕೊಳ್ಳಹತ್ತಿವೆ. ಮುಂಬಯಿ ಸರಕಾರದವರೂ ಈ ಸಂಬಂಧದಲ್ಲಿ ಪ್ರಾಥಮಿಕ ಶಿಕ್ಷಣ ಕಾಯದೆಯ ತಿದ್ದುಪಡಿ ಮಸೂದೆಯೊಂದನ್ನು ಮಂಡಿಸಿರುತ್ತಾರೆ. ಅದೀಗ ಪರಿಶೀಲಕ ಸಮಿತಿಯ ಅವಗಾಹನೆಯಲ್ಲಿ ಇದೆ. ಪ್ರಾಥಮಿಕ ಶಿಕ್ಷಣ ಕಾಯದೆಯಲ್ಲಿ ಸ್ಕೂಲಬೋರ್ಡುಗಳಿಗೆ ಕೊಡಲ್ಪಟ್ಟ ಅಧಿಕಾರದಿಂದ ಶಿಕ್ಷಣವು ಸುಸೂತ್ರವಾಗಿ ಸಾಗಲೊಲ್ಲದೆಂಬ ಅನುಭವ ಬಂದದ್ದರಿಂದ ಸ್ಕೂಲಬೋರ್ಡುಗಳ ಅಧಿಕಾರ ಕಡಿಮೆ ಮಾಡುವ ತಿದ್ದುಪಡಿಗಳನ್ನು ಈಗ ಸೂಚಿಸಲಾಗಿದೆ. ಪ್ರಾಥಮಿಕ ಶಿಕ್ಷಣದ ನೂರಕ್ಕೆ ೯೬ ರಷ್ಟು ವೆಚ್ಚವನ್ನು ಪ್ರಾಂತೀಯ ಸರಕಾರವೆ ಹೊರುವದರಿಂದ ಸರಕಾರವು ತನ್ನ ಅಂಕೆಯಲ್ಲಿ ಅದನ್ನೆಲ್ಲ ಇಟ್ಟುಕೊಳ್ಳುವದು ಕ್ರಮಪ್ರಾಪ್ತವು. ಆ ಉದ್ದೇಶದಿಂದಲೆ ಹೊಸ ತಿದ್ದುಪಡಿಗಳನ್ನು ಸೂಚಿಸಲಾಗಿದೆ ಆದರೆ ಶಿಕ್ಷಣಮಂತ್ರಿಗಳು ಸ್ಕೂಲಬೋರ್ಡುಗಳಲ್ಲಿ ಈ ವರೆಗೆ ಹಸ್ತಕ್ಷೇಪ ಮಾಡುತಿದ್ದವರ ಮುರುವತ್ತಿಗಾಗಿಯೊ ಇಲ್ಲವೆ ಒಮ್ಮೆಲೆ ಎಲ್ಲ ಅಧಿಕಾರಗಳನ್ನು ಕಸಿದುಕೊಳ್ಳಬಾರದೆಂಬ ಉದ್ದೇಶದಿಂದಲೊ ಇದರಲ್ಲಿ ಒಳ್ಳೆ ಧೈರ್ಯದಿಂದ ಮುಂದಡಿಯಿಡದಿದ್ದದ್ದು ವಿಷಾದಕರವಾಗಿದೆ. ಹೊಸ ತಿದ್ದುಪಡಿಯನ್ವಯ ಶಿಕ್ಷಕರನ್ನು ನೇಮಿಸುವ ಅಧಿಕಾರ ಬೋರ್ಡಿನ ಕೈಯಲ್ಲಿ ನೋಕರರ ನ್ನಾರಿಸುವದಕ್ಕಾಗಿ ನೇಮಕವಾಗುವ ಪ್ರತ್ಯೇಕ ಮಂಡಲವೊಂದು ಆ ಕೆಲಸವನ್ನು ಮಾಡುವದು ಜಿಲ್ಹಾ ಲೋಕಲ್ ಬೋರ್ಡುಗಳು ೧೨ ರಿಂದ ೧೬ ಜನರ ವರೆಗೆ ಸದಸ್ಯರುಳ್ಳ ಸ್ಕೂಲಬೋರ್ಡುಗಳನ್ನು ಆರಿಸಿಕೊಡುವ ಕಾರ್ಯವನ್ನಷ್ಟು ಮಾಡಬೇಕು. ಸರಕಾರದವರು ಎರಡರಿಂದ ಮೂರರ ವರೆಗೆ ಸದಸ್ಯರನ್ನು ನೇಮಿಸುವರು. ಸಾಮಾನ್ಯ ಸದಸ್ಯರ ಕನಿಷ್ಠ ಅರ್ಹತೆ ಮುಲಕಿಪರೀಕ್ಷೆ ಪಾಸಾದವರಿರಬೇಕು ಮೊದಲಾದ ತಿದ್ದುಪಡಿಗಳನ್ನು ಈಗ ಸೂಚಿಸಲಾಗಿದೆ. ಸ್ಕೂಲಬೋರ್ಡುಗಳ ವಿಸರ್ಜನೆಗೆ ಬಹಳ ಜನರ ವಿರೋಧಬಂದದ್ದರಿಂದ ಅವರನ್ನು ಸಮಾಧಾನ ಪಡಿಸುವದಕ್ಕಾಗಿ ಹೀಗೆ ಮಾಡಿರಬಹುದೆಂದು ತೋರುತ್ತದೆ. ಆದರೆ ಅವರ ಕೈಯಲ್ಲಿ ಶಿಕ್ಷಕರ ನೇಮಕ ವರ್ಗಾವರ್ಗಿ ಮೊದಲಾದ ವಿಶಿಷ್ಟ ಅಧಿಕಾರಗಳೆ ಇಲ್ಲದಿರುವಾಗ ಅವನ್ನು ಇಟ್ಟಾದರೂ ಪ್ರಯೋಜನವೇನು? ಅವರಿಗೂ ಅದರಿಂದ ಸಮಾಧಾನವಿಲ್ಲ ಸರಕಾರದವರು ಅಪೇಕ್ಷಿಸಿದ ಉದ್ದೇಶವೂ ಪೂರ್ಣ ಸಫಲವಾಗದು. ಆದುದರಿಂದ ಪರಿಶೀಲಕ ಸಮಿತಿಯವರು ಇದೆಲ್ಲವನ್ನು ಕೂಲಂಕಷ ವಿಚಾರ ಮಾಡಿ ಸ್ಕೂಲಬೋರ್ಡುಗಳನ್ನು , ಪೂರ್ಣ ರದ್ದುಮಾಡಿ ಬಿಡುವದೇ ಯುಕ್ತವಾಗಿದೆ.

ಸ್ತುತ್ಯ ನಿರ್ಧಾರ

ಸ್ವತಂತ್ರ ಭಾರತವಿಂದು ಆಡಳಿತ ಸೂತ್ರಗಳನ್ನು ವಹಿಸಿಕೊಂಡು ಪರಕೀಯ ಸರಕಾರವು ಮಾಡಿದ ತಪ್ಪುತಡಿಗಳನ್ನೆಲ್ಲ ಸರಿಪಡಿಸಿಕೊಳ್ಳುವ ಪ್ರಯತ್ನ ನಡೆಸಿರುವಾಗ ಹೊಸ ಹೊಸ ಪ್ರಶ್ನೆಗಳನ್ನು ಉದ್ಭೂತ ಮಾಡುವದು ಸರಿಯಾಗಲಾರದು. ಪಾಕಿಸ್ತಾನ ಪ್ರದೇಶದಲ್ಲಿ ಮತ್ತು ಇತರ ಹಲವು ಭಾಗಗಳಲ್ಲಿ ಶಾಂತತೆಯಿಲ್ಲದ್ದರಿಂದಲೆ ಸರಕಾರ ಬಹಳ ವಿವಂಚನೆಯಲ್ಲಿ ಬಿದ್ದುಕೊಂಡು ಹಗಲು ರಾತ್ರಿ ದೇಶದ ಶಾಂತತೆಗಾಗಿಯೆ ಪ್ರಯತ್ನಿಸುತಿದೆ. ಈ ಬಗೆಯ ಪರಿಸ್ಥಿತಿಯನ್ನರಿತುಕೊಂಡು ರೇಲ್ವೆ ಕೆಲಸಗಾರರು ಸದ್ಯಕ್ಕೆ ಸಂಪಿನ ಸಂಬಂಧದಲ್ಲಿ ಮತಗಣನೆ ತೆಗೆದುಕೊಳ್ಳುವದನ್ನು ಮುಂದಕ್ಕೆ ಹಾಕಿದ್ದು ಅತ್ಯಂತ ಅಭಿನಂದನೀಯ ಸಂಗತಿಯಾಗಿದೆ. ಸರಕಾರಕ್ಕೆ ಶಾಂತರೀತಿಯಿಂದ ಉಸಿರಾಡಿಸಲಿಕ್ಕಾದರೂ ಸ್ವಲ್ಪ ಸಮಯವನ್ನು ಕೊಡುವದು ಪ್ರತಿಯೊಬ್ಬ ಸರಕಾರೀ ನೋಕರನ ಕರ್ತವ್ಯವಾಗಿದೆ. ಜೀವನ ನಿರ್ವಾಹದ ಸಮಸ್ಯೆಯು ದಿನ ದಿನವೂ ಬಿಕ್ಕಟ್ಟಗಿಳಿಯುತ್ತ ಬಂದಿದುಂಟು ಅದನ್ನು ಸರಿಪಡಿಸುವದಕ್ಕಾಗಿ ಸರಕಾರದವರೂ ಇತರರೂ ಪ್ರಯತ್ನಿಸುವದು ಕರ್ತವ್ಯವಾಗಿದೆ. ಆದರೆ ಅದಕ್ಕಾಗಿ ಸಂಪು ಮುಂತಾದವುಗಳನ್ನು ಹೂಡುವದು ಯಾವ ರೀತಿಯಿಂದಲೂ ಯೋಗ್ಯವಾಗಲಾರದು. ಸಂಪಿನಿಂದ ಎಷ್ಟೊಂದು ಅನರ್ಥಗಳು ಸಂಭವಿಸುತಿವೆಯೆಂಬುದು ಸರ್ವವಿದಿತವು. ಅದು ಕೊನೆಯ ಅಸ್ತ್ರವಾಗಿದ್ದು ಉಳಿದ ಎಲ್ಲ ಉಪಾಯಗಳು ನಿರರ್ಥಕವಾದಾಗ ಮಾತ್ರ ಆ ಬ್ರಹ್ಮಾಸ್ತ್ರವನ್ನು ಹಿರಿಯತಕ್ಕದ್ದು. ಅದನ್ನು ಬಿಟ್ಟುಗೊಟ್ಟು ಸಣ್ಣ ಪುಟ್ಟ ಬೇಡಿಕೆಗಳಿಗಾಗಿ ಸಂಪುಗಳನ್ನು ಹೂಡುತ್ತ ನಡೆದರೆ ಎಲ್ಲೆಲ್ಲಿಯೂ ಗೊಂದಲವೆದ್ದು ನಾಗರಿಕ ಜೀವನ ನಿರ್ವಾಹಕ್ಕೆ ಅವಶ್ಯವಾದ ಅನುಕೂಲತೆಗಳೇ ಇಲ್ಲದಂತಾಗುವವು. ಇದನ್ನೆಲ್ಲ ಮನದಂದು ಸುಜ್ಞ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ರೇಲ್ವೆ ಕೆಲಸಗಾರರು ಸಂಪಿನ ವಿಚಾರವನ್ನು ಸದ್ಯಕ್ಕೆ ಬಿಟ್ಟುಗೊಟ್ಟದ್ದು ದೇಶಹಿತಕರವಾಗಿದೆ. ಸರಕಾರದವರಾದರೋ ಸಂಬಳ ಸಮಿತಿಯವರ ಸೂಚನೆಗಳು ಜಾರಿಯಲ್ಲಿ ಬರುವ ಮಧ್ಯಂತರ ಅವಧಿಯಲ್ಲಿ ಕೆಲ ತರಗತಿಯ ನೋಕರರಿಗೆ ೫೦ ರೂಪಾಯಿ ಆಗಾವು ಹಣವನ್ನು ಕೊಡಬೇಕೆಂದು ನಿರ್ಧರಿಸಿದ್ದಾರೆ. ತಮ್ಮ ನೋಕರರ ಜೀವನ ಪ್ರಶ್ನೆಯು ಲೋಕಪ್ರಾತಿನಿಧಿಕ ಸರಕಾರಕ್ಕೆ ಪೂರ್ಣವಾಗಿ ಗೊತ್ತಿದ್ದು ಅದನ್ನು ಸಮಾಧಾನಕರವಾಗಿ ಬಿಡಿಸಲು ಅದು ಖಂಡಿತ ಪ್ರಯತ್ನಿಸುವದೆಂಬುದನ್ನು ನಂಬಿ ರೇಲ್ವೆ ಕೆಲಸಗಾರರು ಮತ್ತು ಉಳಿದ ನೋಕರರು ರಾಷ್ಟ್ರಕ್ಕೆ ತಮ್ಮ ಸೇವೆಯನ್ನು ಸಲ್ಲಿಸುತ್ತ ಹೋಗಬೇಕೆಂದು ಸೂಚಿಸುತ್ತೇವೆ.

ಸಕಾಲಿಕ ಎಚ್ಚರಿಕೆ

ಜಗತ್ತಿನ ಆಹಾರ ಪರಿಸ್ಥಿತಿಯಿಂದು ಕುಸಿದು ಬೀಳಹತ್ತಿದೆ. ಎಲ್ಲಿ ನೋಡಿದಲ್ಲಿ ಆಹಾರ ಪರಿಸ್ಥಿತಿ ಹದಗೆಡಹತ್ತಿದೆ. ಸಕಾಲದಲ್ಲಿ ಇವನ್ನು ಸರಿಪಡಿಸದಿದ್ದರೆ ಜಗತ್ತಿಗೇ ಭಯಂಕರ ವಿಪತ್ತು ಬರುವ ಭೀತಿಯನ್ನು ತಜ್ಞರು ವ್ಯಕ್ತಪಡಿಸಹತ್ತಿರುವರು. ಜಾಗತಿಕ ಆಹಾರ ಮತ್ತು ಒಕ್ಕಲತನ ಸಂಸ್ಥೆಯ ಪ್ರಧಾನ ಸಂಚಾಲಕರಾದ ಸರ್ ಜಾನ್ ಬಾಯ್ಡರು ಇದೇ ಬಗೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು ಅದನ್ನು ಬೇರೆ ಕಡೆ ಕೊಟ್ಟದ್ದೇವೆ. ಹಿಂದೆ ಯಾವ ಯುದ್ಧದಲ್ಲಿಯೂ ಬಾಂಬ ದಾಳಿಯಲ್ಲಿಯೂ ಸತ್ತವರಿಗಿಂತ ಹೆಚ್ಚು ಜನ ಇನ್ನು ಮುಂದಿನ ೧೨ ತಿಂಗಳುಗಳಲ್ಲಿ ಏಶಿಯ ಯುರೋಪುಗಳಲ್ಲಿ ಆಹಾರ ಕೊರತೆಯ ಪ್ರತ್ಯಕ್ಷ ಅಪ್ರತ್ಯಕ್ಷ ಪರಿಣಾಮಗಳಿಂದ ಸಾಯುವರೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಇದನ್ನು ನೆನೆದರೆ ಪ್ರತಿಯೊಂದು ಸರಕಾರ ಪ್ರತಿಯೊಬ್ಬ ಹೊಣೆಗಾರ ನಾಗರಿಕ ಅತ್ಯಂತ ವಿವಂಚನೆಗೊಳಗಾಗುವದು ಸ್ವಾಭಾವಿಕ. ಅಂತೆಯೆ ಜಾಗತಿಕ ರಾಜಕಾರಣದ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಕ್ಕಿಂತ ಈ ಆಹಾರ ಸಮಸ್ಯೆಯನ್ನೇ ಕೈಯಲ್ಲಿ ತೆಗೆದುಕೊಂಡು ಯುಕ್ತ ರಾಷ್ಟ್ರ ಸಂಘದವರು ಅದನ್ನು ಯಶಸ್ವಿಯಾಗಿ ಬಿಡಿಸುವತ್ತ ತಮ್ಮ ಸರ್ವ ಪ್ರಯತ್ನಗಳನ್ನು ನಡೆಸಬೇಕೆಂದು ಬಾಯ್ಡ್‌ರು ಸ್ಪಷ್ಟ ಅಭಿಪ್ರಾಯ ಪಟ್ಟಿದ್ದಾರೆ. ದುರ್ಬಲ ರಾಷ್ಟ್ರಗಳನ್ನು ಎಂತು ಬಲೆಯಲ್ಲಿ ಕೆಡುಹಬೇಕು, ತಮ್ಮ ವ್ಯಾಪಾರೋದ್ಯೋಗಗಳಿಗೆ ಪೇಟೆಯಲ್ಲಿ ಸಿಕ್ಕುವುದು ಮೊದಲಾದ ಸ್ವಾರ್ಥಮಯ ಪ್ರಯತ್ನಗಳಲ್ಲಿ ಆಯಾ ಪ್ರಬಲ ರಾಷ್ಟ್ರಗಳು ವೇಳೆಗಳೆಯದೆ ಜಗತ್ತಿಗೇ ಕ್ಷೇಮಕರವಾದ ಆಹಾರ ಸಮಸ್ಯೆಯನ್ನು ಬಿಡಿಸುವಲ್ಲಿಯೆ ತಮ್ಮ ಎಲ್ಲ ಶಕ್ತಿ ಉತ್ಸಾಹ, ಜಾಣತನವನ್ನು ತೋರಿಸಬೇಕು. ಇಡೀ ಜಗತ್ತೇ ಒಂದು ಘಟಕವೆಂದು ಭಾವಿಸಿಕೊಂಡು ಜಗತ್ತಿನಲ್ಲಿ ಎಲ್ಲೆಲ್ಲಿ ಆಹಾರ ಕೊರತೆಯಿದೆಯೊ ಅಲ್ಲಲ್ಲಿಗೆ ಆಹಾರ ಪದಾರ್ಥಗಳನ್ನು ಕಳಿಸುವಂತೆ ಯೋಜಿಸಬೇಕು. ಎರಡು ಯುದ್ಧಗಳಿಂದ ಸಾಕಷ್ಟು ಅನರ್ಥ ಸಂಭವಿಸಿಲ್ಲೇನೋ ಎನ್ನುವಂತೆ ಮೂರನೇ ಯುದ್ಧದ ಮಾತುಗಳನ್ನೂ ಆಯಾ ರಾಷ್ಟ್ರಗಳು ಆಡಹತ್ತಿವೆ. ಇದಕ್ಕೆಲ್ಲ ಆಯಾ ರಾಷ್ಟ್ರಗಳು ಸ್ವಾರ್ಥ, ಅಧಿಕಾರ ಲಾಲಸೆ, ಮಹತ್ವಾಕಾಂಕ್ಷೆ ಮೊದಲಾದದ್ದೆ ಕಾರಣವೆಂಬುದನ್ನು ಬೇರೆ ಹೇಳಬೇಕಿಲ್ಲ. ಆಯಾ ರಾಷ್ಟ್ರಗಳು ವಿಶೇಷತಃ ಪ್ರಬಲ ರಾಷ್ಟ್ರಗಳು ಇದನ್ನೆಲ್ಲ ಬಿಟ್ಟುಗೊಟ್ಟು ಆಹಾರ ಕೊರತೆಯನ್ನು ಹಿಂಗಿಸುವದಕ್ಕಾಗಿ ಸರ್ವವಿಧ ಪ್ರಯತ್ನ ಮಾಡಬೇಕು. ಆಹಾರ ಕೊರತೆಯನ್ನು ಹಿಂಗಿಸಬೇಕಾದರೆ ಆಹಾರ ಪದಾರ್ಥಗಳನ್ನು ಹೆಚ್ಚಿಗೆ ಬೆಳೆಯುವಂತೆ ರೈತರಿಗೆ ಎಲ್ಲ ಬಗೆಯ ಅನುಕೂಲತೆಗಳನ್ನು ಕಲ್ಪಿಸಿ ಕೊಡಬೇಕು. ಅದರ ಜೊತೆಯಲ್ಲಿಯೆ ಆಹಾರ ಪದಾರ್ಥಗಳು ನಾಶವಾಗದಂತೆಯೂ ನೋಡಿಕೊಳ್ಳಬೇಕು. ಅಂದರೆ ಮಾತ್ರ ಉದ್ದೇಶ ಸಫಲವಾಗಬಲ್ಲುದು.

ರಾಷ್ಟ್ರದ್ರೋಹಿಗಳ ಒಳಸಂಚು

ಬ್ರಿಟಿಶರು ಅಧಿಕಾರ ತ್ಯಾಗ ಮಾಡಿಹೋಗಿದ್ದರೂ ಹಾಗೆ ಮಾಡುವಾಗ ಕೆಲವೊಂದು ಸಮಸ್ಯೆಗಳನ್ನು ಹಿಂದುಸ್ತಾನದಲ್ಲಿ ಉಂಟುಮಾಡಿ ಹೋಗಿರುವರು. ಪಾಕಿಸ್ತಾನವನ್ನು ಕೊಟ್ಟದ್ದು, ಸಂಸ್ಥಾನಗಳಿಗೆ ಸಾರ್ವಭೌಮ ಅಧಿಕಾರವಿದೆಂದು ಸಾರಿದ್ದು ಈ ತೊಡಕುಗಳಲ್ಲಿ ಮುಖ್ಯವಾದವುಗಳು. ಅಲ್ಲದೆ ಜನತೆಯಲ್ಲಿಯೂ ದ್ವೇಷಾಗ್ನಿಯ ಬೀಜವನ್ನು ಆಳವಾಗಿ ಬಿತ್ತಿದ್ದರಿಂದ ಅವುಗಳ ಕಹಿ ಫಲಗಳನ್ನು ಎಲ್ಲರೂ ಈಗ ಉಣ್ಣಬೇಕಾಗಿದೆ. ಸರಕಾರೀ ನೋಕರರಲ್ಲಿಯೂ ಇದರ ಪ್ರಸಾರವಾಗಿದೆ. ಆಯಾ ಭಾಗಗಳಲ್ಲಿಯ ಜನರು ಶಸ್ತ್ರಾಸ್ತ್ರಗಳನ್ನು, ಮದ್ದು ಗುಂಡುಗಳನ್ನು ಅಕ್ರಮವಾಗಿ ಸಂಗ್ರಹಿಸಿದ್ದು ಅಲ್ಲಲ್ಲಿ ಈಗ ಹೊರಬಿದ್ದಿದೆ. ಇವುಗಳ ಸಹಾಯದಿಂದಲೆ ಪುಂಡರು ಪುಂಡಾಟಿಕೆ ನಡೆಸಿದ್ದೆಂಬದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಕಲಕತ್ತೆಯಲ್ಲಿ, ದಿಲ್ಲಿಯ ಮಸೀದೆಗಳಲ್ಲಿ, ಮತ್ತು ನೆರೆಯ ಮನೆಗಳಲ್ಲಿ ಜಬ್ಬಲಪುರದಲ್ಲಿ ಇಂಥ ಅದ್ಭುತ ಅಸ್ತ್ರಗಳು ಶೋಧಿಸಲ್ಪಟ್ಟಿವೆ. ಕೈಬಾಂಬುಗಳು ಕಾಡತೂಸುಗಳು ಟ್ಯಾಂಕುಗಳನ್ನು ಹಾರಿಸುವ ಸುರಂಗಗಳು, ಅಸಂಖ್ಯ ಖಡ್ಗಗಳು, ಮದ್ದು ಗುಂಡುಗಳು ಮೊದಲಾದವುಗಳು ದೊರೆತವೆ. ಇಷ್ಟೊಂದು ಸಾಮಗ್ರಿಗಳು ದೊರೆಯಬೇಕಾದರೆ ಸೈನ್ಯ ಖಾತೆಯ ಅಧಿಕಾರಿಗಳ ಮತ್ತು ಶಸ್ತ್ರಾಸ್ತ್ರ ಕಾರಖಾನೆಗಳ ಮೇಲ್ವಿಚಾರಕರ ಹಸ್ತಕ್ಷೇಪವೂ ಇರಲಿಕ್ಕೆ ಬೇಕೆಂದು ತರ್ಕಿಸುವದು ತಪ್ಪಾಗಲಾರದು. ಯುದ್ಧ ಕಾಲದಲ್ಲಿ ಇಂಥ ಶಸ್ತ್ರಾಸ್ತ್ರಗಳ ಸಂಗ್ರಹ ಬೇಕಾದಷ್ಟು ಮಾಡಲಾಗಿತ್ತು ಅದೆಲ್ಲ ಖಾಸಗಿ ಜನರ ಕಡೆಗೆ ಹೇಗೆ ಹೋಯಿತೊ ಎಂಬುದು ಮಹತ್ವದ ಸಮಸ್ಯೆಯಾಗಿದೆ. ಇದನ್ನೆಲ್ಲ ಹುಡುಕಿ ತೆಗೆದು ಅಪರಾಧಿಗಳ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವದು ಸರಕಾರದ ಕರ್ತವ್ಯವಾಗಿದೆ. ಇತ್ತೀಚೆ ದೇಶದಲ್ಲಿ ನಡೆಯುತ್ತಿರುವ ಪುಂಡಾಟಿಕೆಗೆ ಇಂಥ ಶಸ್ತ್ರಾಸ್ತ್ರಗಳ ಕಳ್ಳ ಸಂಗ್ರಹವೆ ಸಹಾಯಕವೆಂಬದನ್ನು ಪ್ರತ್ಯೇಕ ಹೇಳಬೇಕಿಲ್ಲ. ಆದುದರಿಂದ ಇವನ್ನೆಲ್ಲ ಪೂರ್ಣ ಹುಡುಕಿ ರಾಷ್ಟ್ರದ್ರೋಹಿಗಳನ್ನು ಮತ್ತು ಸಮಾಜ ದ್ರೋಹಿಗಳನ್ನು ಉಗ್ರವಾಗಿ ದಂಡಿಸಬೇಕು. ಇದಕ್ಕೆ ಕಾರಣರಾದವರು ಯಾರೇ ಇರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಭಾರತ ಸರಕಾರ ನಡೆಸಿದ ಈ ಕಾರ್ಯದಲ್ಲಿ ಪಾಕಿಸ್ತಾನ ಸರಕಾರವೂ ಸಹಾಯವನ್ನು ಸಲ್ಲಿಸಬೇಕಾದುದು ಕರ್ತವ್ಯವಾಗಿದೆ. ಈ ಸಂಬಂಧದಲ್ಲಿ ಭಿನ್ನಾಭಿಪ್ರಾಯವನ್ನು ಬಿಟ್ಟುಗೊಟ್ಟು [illegible] ಸಂಚನ್ನು ಸಂಪೂರ್ಣ ನಾಶಮಾಡಿ ದೇ[illegible] ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲಿಕ್ಕೆ ಪರಸ್ಪರರು ಸಹಕಾರದಿಂದ ಕಾರ್ಯ ಮ[illegible]

ಭರತಖಂಡದ ನಾಗರಿಕರ ಇಂದಿನ ಕರ್ತವ್ಯ

ಭಾರತದ ಮುಸ್ಲಿಮರಿಗೆ ಹಿತೋಪದೇಶ- ಹಿಂದುಸ್ತಾನದ ಪ್ರಜೆಗಳಿಗೆ ಜವಾಹರರ ಸದುಕ್ತಿ- ಪಾಕಿಸ್ತಾನ ಸರಕಾರದ ಅಪ್ರಯೋಜಕ ಆತ್ಮಸಮರ್ಥನೆ-

ಭಾರತದಲ್ಲಿಯ ಮುಸಲ್ಮಾನರ ಕರ್ತವ್ಯ

ಸಂಯುಕ್ತ ಪ್ರಾಂತದ ಶ್ರೀ ಇತ್ತಿಹಾಶೀಮ ಮಹಮ್ಮದ ಅಲಿ ಎಂ. ಎಲ್. ಏ. ಅವರು ಒಂದು ಪ್ರಕಟನೆ ಹೊರಡಿಸಿ ಭಾರತ ಒಕ್ಕೂಟದಲ್ಲಿ ನೆಲೆಸಿರುವ ೪೫ ಕೋಟಿ ಮುಸಲ್ಮಾನರು ನಿರಪರಾಧಿ ಮುಸಲ್ಮಾನರನ್ನು ತಪ್ಪು ಮಾರ್ಗಕ್ಕೆ ಎಳೆಯುತ್ತ ಅವರ ಜೀವಿತಗಳನ್ನು ಗಂಡಾಂತರಕ್ಕೆ ಗುರಿ ಮಾಡುತ್ತಿರುವ ಮುಸ್ಲಿಂ ಲೀಗನ್ನು ಬಹಿರಂಗವಾಗಿ ಖಂಡಿಸಲು ಮುಂದೆ ಬರಬೇಕೆಂದು ಹೇಳಿದ್ದು ಅತ್ಯಂತ ಸಮಯೋಚಿತವಾಗಿದೆ. ಈ ಬುದ್ಧಿ ಇಲ್ಲಿಯ ಮುಸಲ್ಮಾನರಿಗೆ ಈ ಮೊದಲೇ ಬಂದಿದ್ದರೆ ಇಂದು ಸಂಭವಿಸಿದ ಜನ ಧನಗಳ ಅಪಾರ ಹಾನಿ ಭರತಖಂಡದಲ್ಲಿ ಸಂಭವಿಸುತ್ತಿರಲಿಲ್ಲ. ಆದರೆ ಕೆಟ್ಟ ಮೇಲಾದರೂ ಸದ್ಬುದ್ಧಿ ತಲೆದೋರಿದ್ದು ಅಭಿನಂದನೀಯವೆಂದು ಹೇಳದಿರಲಾಗದು. ಮುಸ್ಲಿಂ ಲೀಗಿನ ಕುತಂತ್ರಗಳನ್ನು ಖಂಡಿಸಲು ಧೈರ್ಯ ಮಾಡಿರುವ ಓಡಿಸ್ಸ ಶಾಸನಸಭೆಯ ಮುಸ್ಲಿಂ ಲೀಗ ಧುರೀಣರಾದ ಲತೀಫುರ್ ರಹಮಾನರೂ ಅಭಿನಂದನಾರ್ಹರೆಂದೇ ಹೇಳಬೇಕು. ಇದಲ್ಲದೆ ಮುಂಬಯಿಯ ೯ ಜನ ಮುಸಲ್ಮಾನ ಮುಖಂಡರು ಒಂದು ಪ್ರಕಟನೆಯನ್ನು ಹೊರಡಿಸಿ ಅದರಲ್ಲಿ ಹಿಂದುಸ್ತಾನ ಸರಕಾರಕ್ಕೆ ವಿಧೇಯರಾಗಿರುವುದೇ ಮುಸಲ್ಮಾನರಿಗೆ ಅಭಿಮಾನಾಸ್ಪದವೆಂದು ಹೇಳಿದ್ದಾರೆ. ಈ ಪ್ರಕಟನೆಗೆ ಮುಂಬಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಶ್ರೀ ಎಸ್. ಏ. ಬ್ರೆಲವಿ, ಎಂ. ವೈ. ನೂರಿ, ಅಬೀದಲ್ಲಿ ಜಾಫರಭಾಯ್, ಶ್ರೀಮತಿ ಸೋಫಿಯಾಖಾನ್, ಡಾ. ಹಮೀದ್, ಎಸ್. ಏ. ಖಾದರ ಮುಂತಾದವರು ಸಹಿ ಹಾಕಿದ್ದಾರೆ.

ಭಾರತದ ಮುಸಲ್ಮಾನರ ವಿಚಾರ ಶಕ್ತಿ ಸ್ವಲ್ಪ ಮಟ್ಟಿಗಾದರೂ ಇಂದು ಕೆರಳಿರುವುದು ಶುಭೋದಯವೆಂದು ಹೇಳದಿರಲಾಗದು. ಮುಸ್ಲಿಂ ಲೀಗಿನ ಕೇಂದ್ರ ಚೊಕ್ಕಸದಿಂದ ಹಿಂದುಸ್ತಾನದಲ್ಲಿಯ ಮುಸ್ಲಿಂ ಲೀಗುಗಳಿಗೆ ಒಂದು ಕಾಸನ್ನು ಕೊಡ ಕೊಡಲು ಬ್ಯಾ. ಜಿನ್ನಾರು ಸಿದ್ಧರಿಲ್ಲೆಂಬುದನ್ನರಿತು ಕೆಲವು ಮುಸ್ಲಿಂ ಲೀಗ ಸಂಸ್ಥೆಗಳು ಕೇಂದ್ರ ಸಂಸ್ಥೆಯ ಮೇಲೆ ದಾವೆ ಹೂಡಲಿರುವುವಂತೆ. ಬ್ಯಾ. ಜಿನ್ನಾ ಮತ್ತು ಅವರ ಎಡಬಲಗೈಗಳಂತಿದ್ದ ಮುಖಂಡರ ಮಾತನ್ನು ವೇದ ವಾಕ್ಯವೆಂದು ನಂಬಿ ಅಂಧ ಬುದ್ಧಿಯಿಂದ ಅವರಿಗೆ ಬೆಂಬಲವಿತ್ತ ಭಾರತದ ಮುಸ್ಲಿಮರಿಗಿದು ಕಣ್ಣು ತೆರೆಯಿಸದಿರದು. ಮುಂಬಯಿ ಪ್ರಾಂತೀಯ ಲೀಗಿನ ಕಾರ್ಯ ಸಮಿತಿಯ ಅವಸರದ ಸಭೆಯು ಪುಣೆಯಲ್ಲಿ ತಾ. ೫ ರಂದು ಕೂಡಿ ಭಾರತದಲ್ಲಿ ಸಂಪೂರ್ಣ ನಿಷ್ಠೆಯನ್ನು ವ್ಯಕ್ತಮಾಡಿತಲ್ಲದೆ ಭಾರತದಿಂದ ಪಾಕಿಸ್ತಾನಕ್ಕೆ ಮುಸಲ್ಮಾನರು ಗುಡಿಬಾಪೆಕಟ್ಟಿಕೊಂಡು ಹೋಗಕೂಡದೆಂದೂ ಶಾಂತಿ ಸುವ್ಯವಸ್ಥೆಗಳನ್ನು ಕಾಯ್ದುಕೊಳ್ಳುವಲ್ಲಿ ಎಲ್ಲ ಮುಸಲ್ಮಾನರೂ ಸರಕಾರದೊಡನೆ ಸಹಕರಿಸಬೇಕೆಂದೂ ಪ್ರತಿಪಾದಿಸಿದ್ದು ಮುಸಲ್ಮಾನರಿಗೆ ಪರಿಸ್ಥಿತಿಯ ದರ್ಶನವಾಗಿ ಕರ್ತವ್ಯದ ಅರಿವಾದದ್ದರ ಮತ್ತೊಂದು ನಿದರ್ಶನವಾಗಿದೆ. ಇದರ ಮೇಲೆ ಮಹಾತ್ಮಾ ಗಾಂಧಿಯವರು ತಮ್ಮ ಪ್ರಾರ್ಥನೋತ್ತರ ಭಾಷಣಗಳಲ್ಲೂ ಉಭಯ ಸಾಮಂತ ರಾಜ್ಯಗಳ ಮುಖ್ಯ ಪ್ರಧಾನರು ಸಾರ್ವಜನಿಕ ಸಭೆ ಹಾಗು ಆಕಾಶವಾಣಿಗಳ ಭಾಷಣಗಳಲ್ಲೂ ಮೇಲಿಂದ ಮೇಲೆ ಸ್ಪಷ್ಟೋಕ್ತಿಯಿಂದ ಭಾರತದ ಮುಸ್ಲಿಮರಿಗೆ ರಾಷ್ಟ್ರನಿಷ್ಠೆಯನ್ನು ಬೋಧಿಸಿದ್ದಾರೆ.

ಸಂಯುಕ್ತ ಪ್ರಾಂತದ ಮುಖ್ಯಮಂತ್ರಿಗಳಾದ ಪಂಡಿತ ಗೋವಿಂದ ವಲ್ಲಭಪಂತರು ತಾ, ೮ರಲ್ಲಿ ಪುರುಷೋತ್ತಮದಾಸ ಪಾರ್ಕಿನಲ್ಲಿ ಭಾಷಣ ಮಾಡುತ್ತ, ಮುಸಲ್ಮಾನ ಅಲ್ಪಸಂಖ್ಯಾಕರಿಗೆ ಸಂರಕ್ಷಣೆಯ ಆಶ್ವಾಸನ ಕೊಟ್ಟರಲ್ಲದೆ ಹಿಂದೀ ಒಕ್ಕೂಟದಲ್ಲಿ ನಿಷ್ಠೆ ತೋರಿಸುವವರಿಗಷ್ಟೆ ಇಲ್ಲಿ ಸ್ಥಳವಿದೆಯೆಂದು ಸಾರಿದ್ದು ಕರ್ತವ್ಯಬೋಧಕವಾಗಿದೆ. "ಒಂದು ವೇಳೆ ಪಾಕಿಸ್ತಾನವು ನಮ್ಮ ವಿರುದ್ಧ ದಂಡೆತ್ತಿ ಬಂದರೆ ಪಾಕಿಸ್ತಾನ ಸೈನಿಕರ ಸಂಗಡ ಯುದ್ಧ ಮಾಡಿ ಭಾರತವನ್ನು ರಕ್ಷಿಸಲು ಮುಸಲ್ಮಾನರು ಮುಂದೆ ಬರುವರೋ? ಅವರು ಇದರಂತೆ ಮುಂದೆ ಬಂದರೆ ಮಾತ್ರ ಅವರಿಗೆ ಭಾರತದಲ್ಲಿ ನಿಜವಾದ ಶ್ರದ್ಧೆಯಿದೆಯೆಂಬುದು ವ್ಯಕ್ತವಾಗುವುದು" ಎಂದು ಪಂತರು ಕೊಟ್ಟ ಆಶ್ವಾಸನೆ [illegible] ಮಾರ್ಮಿಕವಾಗಿದೆ. ಭಾರತದ ವಿಭಜನೆ [illegible] ಮುಸಲ್ಮಾನರ ಪಾಪಕೃತ್ಯವೇ ಕಾರಣ [illegible] ಕರ್ನಾಟಕ [illegible] ರಕ್ಷಣೆಗಾಗಿ ಅವರೇ ಪ್ರಯತ್ನಿಸ [illegible] ಸರಕಾರದ ಪರಿಹಾರ ಮಂತ್ರಿಗಳಾದ ಶ್ರೀ [illegible] ಬಂದ ಮುದ್ರಿತ.

ಶ್ರೀ ಅಬ್ದುಲ್ ಲತೀಫ ಅನ್ಸಾರಿಯವರು ಹೇಳಿದ್ದು ಮನನೀಯವಾಗಿದೆ. ರಾಷ್ಟ್ರ ನಿಷ್ಠರಾಗಿ ಉಳಿಯಲು ಇನ್ನಾದರೂ ಭಾರತದ ಮುಸಲ್ಮಾನರು ಪ್ರಯತ್ನಿಸಬೇಕಲ್ಲದೆ ರಾಷ್ಟ್ರದ ಸುಖಶಾಂತಿಗಳ ಬಗ್ಗೆ ಹಗಲಿಗೆ ಹಗಲು ಕೊಟ್ಟು ಮುಸ್ಲಿಮೇತರ ಸಹೋದರರೊಡನೆ ದುಡಿಯಲು ಸಿದ್ಧರಾಗಬೇಕೆಂಬುದು ಮೋಲಿನ ನೀತಿಯಿಂದ ಸ್ಪಷ್ಟವಾಗುತ್ತದೆ. ಈ ಪ್ರಕಾರ ನಮ್ಮ ಮುಸಲ್ಮಾನ ಸಹೋದರರು ನಡೆದುಕೊಂಡು ಭಾರತದ ಅಭಿಮಾನಿ ಪ್ರಜೆಗಳೆನಿಸಿಕೊಳ್ಳುವರೆಂದು ಹಾರೈಕೆ.

ಆಗಾಖಾನರ ಸದುಪದೇಶ

ಮಾರ್ಸೇಲ್ಸಿನಿಂದ ಆಗಾಖಾನರು ಹಿಂದುಸ್ತಾನದಲ್ಲಿದ್ದ ತಮ್ಮ ಅನುಯಾಯಿಗಳಿಗೆ 'ಎಲ್ಲೆಡೆ ಸರಕಾರದ ಸಲುವಾಗಿ ಪ್ರಾರ್ಥನೆ ನಡೆಯಬೇಕು, ಸರಕಾರಕ್ಕೆ ಎಲ್ಲರೂ ಏಕನಿಷ್ಠರಾಗಿರಬೇಕು, ಕಲಕತ್ತದಲ್ಲಿ ಕೊಟ್ಟಂತೆ ಎಲ್ಲೆಡೆಯೂ ಕಾಂಗ್ರೆಸ್ ಗವರ್ನರರಿಗೆ ಏಕನಿಷ್ಠೆಯ ಆಶ್ವಾಸನ ಕೊಡಿರಿ ಎಂದು ತಂತಿಯಮೂಲಕ ತಿಳಿಸಿದ್ದು ಭಾರತದಲ್ಲಿರುವ ಮುಸ್ಲಿಮರಿಗೊಂದು ಪಾಠವಾಗಿದೆಯೆನ್ನಬಹುದು. ಹೀಗೆ ರಾಷ್ಟ್ರ ನಿಷ್ಠೆಯನ್ನು ಮುಖಂಡರು ಉಪದೇಶಿಸಿರುವದಲ್ಲದೆ ಸರಕಾರದಲ್ಲಿ ಅಧಿಕಾರಸ್ಥರಾಗಿರುವ ಮಾನ್ಯರೂ ಬಾರಿ ಬಾರಿ ಬೋಧಿಸುತ್ತಿರುವದು ನಾಗರಿಕರಲ್ಲಿ ಕರ್ತವ್ಯ ಬುದ್ಧಿಯನ್ನು ಹುಟ್ಟಿಸದಿರದೆಂದು ನಂಬಬಹುದಾಗಿದೆ.

ಜವಾಹರರ ಹಿತೋಕ್ತಿ

ಹೊಸದಿಲ್ಲಿಯಲ್ಲಿ ತಾ ೬ ರಂದು ಹಿಂದುಸ್ತಾನದ ಮುಖ್ಯ ಪ್ರಧಾನರಾದ ಪಂಡಿತ ಜವಾಹರಲಾಲರು ಒಂದು ಸಾರ್ವಜನಿಕ ಭಾಷಣದಲ್ಲಿ, ಜನರು ಶಾಂತತೆಗೆ ಭಂಗವನ್ನುಂಟುಮಾಡತೊಡಗಿದರೆ ಸರಕಾರದ ಕಾರ್ಯದಲ್ಲಿ ಅವರೇ ವಿಘ್ನಗಳನ್ನುಂಟುಮಾಡಿದಂತಾಗುವದು; ನಮ್ಮ ವೈರಿಗಳು ನಮ್ಮ ಕಾರ್ಯದಲ್ಲಿ ವಿಘ್ನಗಳನ್ನು ತಂದೊಡ್ಡಿದರೆ ಒಂದುವೇಳೆ ಚೆಂದಕಾಣಬಹುದಾದರೂ ನಮ್ಮ ಮಿತ್ರರೇ ನಮ್ಮ ಕಾರ್ಯದಲ್ಲಿ ವಿಘ್ನ ತರುತ್ತಿರುವದು ಸರ್ವಥಾ ಯೋಗ್ಯವಲ್ಲ; ಎಲ್ಲರೂ ತಮ್ಮ ಕೈಯಲ್ಲಿ ಅಧಿಕಾರ ತೆಗೆದುಕೊಂಡು ಮನಬಂದಂತೆ ವರ್ತಿಸಿದರೆ ಅರಾಜಕತೆಯುಂಟಾಗುವದು, ಪಾಪಕ್ಕೆ ಪ್ರತಿ ಪಾಪವನ್ನು ಮಾಡಕೂಡದು-ಎಂದು ಮುಂತಾಗಿ ಪಾಕಿಸ್ತಾನದಲ್ಲಿಯ ಮುಸ್ಲಿಮೇತರರ ಹಿಂಸೆಗೆ ಪ್ರತೀಕಾರಮಾಡಹೋಗ ಕೂಡದೆಂಬುದನ್ನು ಒತ್ತಿ ಹೇಳಿ ಹಿಂದುಸ್ತಾನದ ನಾಗರಿಕರಿಗೆ ಸದುಪದೇಶ ವಿತ್ತರು. ಗಾಂಧೀಜಿಯೇ ಒಮ್ಮೆ ಹೇಳಿದಂತೆ ನಾಗರಿಕರು ಸ್ವಚ್ಛಂದವೃತ್ತಿಗಾರಂಭಿಸಿದರೆ ಸರಕಾರದ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಕೊಡುವ ನೈತಿಕ ಸಾಮರ್ಥ್ಯವನ್ನು ಕುಂದಿಸಿದಂತಾಗುವುದೆಂಬುದು ಸ್ವತಃ ಸಿದ್ಧವೇ ಸರಿ. ನೆಹರು ತಮ್ಮ ಭಾಷಣದಲ್ಲಿ ಇದಕ್ಕೂ ಮುಂದೆ ಹೋಗಿ ಅರಾಜಕತೆಗೆ ಜನ ಎಡೆಗೊಟ್ಟರೆ ಮೊಗಲ ಸಾಮ್ರಾಜ್ಯದ ಅಂತ್ಯವಿಧಿ ಜರುಗಿಸಲು ಆ ಗೊಂದಲದ ಕಾಲದಲ್ಲಿ ವಿದೇಶೀಯರು ಬಂದಂತೆ ನಮ್ಮ ದೌರ್ಬಲ್ಯದ ಲಾಭವನ್ನು ಈಗಲಾದರೂ ಪಡೆಯಲು ಯತ್ನಿಸದಿರರೆಂದು ಎಚ್ಚರಿಕೆ ಕೊಟ್ಟುದು ಪ್ರತಿಯೊಬ್ಬ ರಾಷ್ಟ್ರಭಕ್ತನ ಮನದಲ್ಲೂ ಯುಕ್ತ ಪರಿಣಾಮವನ್ನು ಮಾಡದಿರದು.

ಲಿಯಾಖತರ ಭಾಷಣ

ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಘರ್ಷಣೆ ಸಂಭವಿಸಿದರೆ ಉಭಯ ರಾಷ್ಟ್ರಗಳಿಗೆ ಘಾತಕವೆಂಬುದು ತುಸು ರಾಜಕೀಯ ಜ್ಞಾನವಿದ್ದವರೂ ತಿಳಿದುಕೊಳ್ಳಬಹುದಾಗಿದೆಯೆಂದು ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ ಲಿಯಾಖತ ಅಲ್ಲಿಖಾನರು ಪಾಕಿಸ್ತಾನದ ಆಕಾಶವಾಣಿಯಿಂದ ತಾ. ೬ ರಲ್ಲಿ ಸಾರಿದರು.

ಅರಾಜಕತೆಯು ಹುಟ್ಟಡಗಿಸಬೇಕು, ರಾಷ್ಟ್ರದ ಶಾಂತಿಮಯ ಪ್ರಗತಿಗೆ ಅಧಿಕಾರಿಗಳಿರಲಿ, ಇನ್ನಾವ ಪ್ರತಿಷ್ಠಿತರಿರಲಿ, ಅವರನ್ನು ಉಗ್ರವಾಗಿ ದಂಡಿಸಲಾಗುವುದು ಎಂದು ತಮ್ಮ ಭಾಷಣದಲ್ಲಿ ಹೇಳಿದರು. ಇದೇನೋ ಸ್ತುತ್ಯವಾಗಿದೆ, ಮುಕ್ತ ದ್ವಿತನದ ಮಾತಾಗಿದೆ. ಆದರೆ ಮುಂಬರಿಯುತ್ತ ಅವರು, "ಹೆಚ್ಚು ತಪ್ಪು ನಮ್ಮದಲ್ಲವೆಂಬದನ್ನು ಇಡೀ ಜಗತ್ತೇ ಅರಿತಿದೆ; ಆದರೂ ಪಾಕಿಸ್ತಾನದ ಕೆಲವೆಡೆಗಳಲ್ಲಿ ಬಹುಸಂಖ್ಯಾಕರು ಅಲ್ಪಸಂಖ್ಯಾಕರನ್ನು ರಕ್ಷಿಸದಿದ್ದುದು ಅಪಮಾನಕರವೆಂದು ನಾನು ಭಾವಿಸಿದ್ದೇನೆ" ಎಂದು ತಮ್ಮ ಸುಭಗಾಚಾರವನ್ನೂ ವಿನಯ ಸಂಪನ್ನತೆಯನ್ನೂ ಪ್ರದರ್ಶಿಸ ಹೊರಟದ್ದು ಕೇವಲ ಹಾಸ್ಯಾಸ್ಪದವೆಂಬುದನ್ನು ಜಗತ್ತೇ ಬಲ್ಲುದು. "ಪಾಪವನು ಹಳಿಯುತ್ತ ಪಾಪವಾಳ್ಪವನ ಸ್ವರೂಪವನು ಕಂಡು ನಗಲದೇ ಸಾಕನ್ಯ ಶಾಪವೇ ಬೇಡ ಕಾಮರ್ಜ್ಞ" ಎಂಬ ಮಾತು ಇಲ್ಲಿ ನೆನಪಾಗದಿರದು. ಸೂಳೆ ಗರತಿತನವನ್ನು ಬೋಧಿಸಹೊರಟಂತೆ, ಕಳ್ಳ ದಾನಧರ್ಮಗಳ ಮೇಲೆ ಉಪನ್ಯಾಸ ಕೊಡುವಂತೆ, ಸುಳ್ಳುಗಾರ ಸತ್ಯನಾರಾಯಣ ವ್ರತ ಮಾಡಿದಂತೆ ಪಾಕಿಸ್ತಾನಿಗಳ ಆತ್ಮಸಮರ್ಥನೆ, ಹಿತೋಪದೇಶಗಳು ಸತ್ಯಸ್ಥಿತಿಯ ವಿಡಂಬನವಲ್ಲದೆ ಬೇರಾಗದು. ಲಿಯಾಖತರು, "ಪಾಕಿಸ್ತಾನಿಗಳಾದ ನಾವು ಸೇಡು ತೀರಿಸಿಕೊಳ್ಳುವ ಬುದ್ಧಿಯಿಂದ ನಮ್ಮ ಕೈಯೆತ್ತಿಲ್ಲವೆಂದು ಹೇಳಬಹುದೆ? ಹಾಗೆಂದಿಗೂ ಹೇಳಲಾರೆವು. ನಮ್ಮಲ್ಲಿಯ ಕೆಲ ದುಷ್ಟಬುದ್ಧಿಗಳು ಹಾಗೆ ಅನಾಚಾರಕ್ಕಿಳಿದುದುಂಟು." ಎಂದುದು ಮಾತ್ರ ಹಗಲಿನಷ್ಟು ಸ್ಪಷ್ಟವಿದೆ. ಈ ಮಾತು ಅವರ ಹೃದಯದಿಂದ ಬಂದುದಾಗಿದ್ದಾರೆ, ಮತ್ತು ಅವರ ಅನುಯಾಯಿಗಳ ಹೃದಯದ ಯಾವುದಾದರೊಂದು ಭಾಗವನ್ನು ಮುಟ್ಟಬಲ್ಲುದಾದರೆ ಪಾಕಿಸ್ತಾನ ಒಂದು ರಾಜ್ಯವಾಗಿ ಬಾಳೀತು. ಇಲ್ಲದಿದ್ದರೆ ಮಂಗನ ಕೈಯಲ್ಲಿಯ ಮಾಣಿಕ್ಯದಂತೆ ಅದು ಚೆಲ್ಲಿ ಹೋದೀತು. ಅಲ್ಪನಿಗೆ ಐಶ್ವರ್ಯ ಬಂದಾಗ ಅರ್ಧರಾತ್ರಿಯಲ್ಲಿ ಕೊಡೆ ಹಿಡಿದಂತೆ ಅಲ್ಪನಿಗಧಿಕಾರ ಸಿಕ್ಕಿದರೆ ಅನರ್ಥ ಮಾಡಹೋಗದಿರನು. ಅಲ್ಪತ್ವ ಬಿಟ್ಟು ಪಾಕಿಸ್ತಾನಿಗಳು ಉದಾರನೀತಿ ತಳೆದು ಇನ್ನಾದರೂ ಬಾಳಿಬದುಕುವ ಹಾದಿ ಹಿಡಿವವರೆಂದು ಆಶಿಸಲಾಗಿದೆ.

ಶ್ರೀ ದೇವರ ಹೇಳಿಕೆ

"ಪಂಜಾಬ, ಸಿಂಧ, ಗಡಿನಾಡು ಪ್ರಾಂತಗಳ ಅತ್ಯಾಚಾರಗಳು ನಮ್ಮ ಮುಕ್ಸದ್ದಿತನಕ್ಕೆ ಆಹ್ವಾನ ಕೊಡುತ್ತಿವೆ" ಎಂದು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ ದೇವರು ತಾ ೭ ರಲ್ಲಿ ಸೊಲ್ಲಾಪುರ ನಗರ ಸಭೆಯ ಮಾನಪತ್ರಕ್ಕೆ ಉತ್ತರ ಕೊಡುತ್ತ ಹೇಳಿದರು. ಮುಂಬರಿದು ಅವರು- ಚೀನದಂತೆ ಭಾರತವಿಂದು ಇಂಥ ಅರಾಜಕತೆಯನ್ನು ಎದುರಿಸುವುದಾದರೆ ನಮ್ಮ ರಾಷ್ಟ್ರ ಪುನರ್ರಚನೆಯ ಯೋಜನೆಗಳೆಲ್ಲ ಮಣ್ಣುಪಾಲಾದಂತೆಯೇ ಸರಿ. ಕೇಂದ್ರದಲ್ಲಿ ಹಿಂದು ಸರಕಾರ ತಲೆಯೆತ್ತಿತೆಂದರೆ ೩೦ ಕೋಟಿ ಪ್ರಜೆಗಳ ಸಲುವಾಗಿ ಪ್ರಜಾಸತ್ತಾತ್ಮಕ ರಾಷ್ಟ್ರವನ್ನು ನಿರ್ಮಿಸುವ ನಮ್ಮ ಆದರ್ಶವು ಎಂದೂ ಸಾಧಿಸದು. ಮೇಲಾಗಿ ಹಿಂದು ರಾಜ್ಯ ಸ್ಥಾಪನೆಯಿಂದ ಪಾಕಿಸ್ತಾನದ ವಿರುದ್ಧ ಯುದ್ಧ ಸಾರಿದಂತಾಗದಿರದು. ಇದರ ಅನಾಹುತಗಳನ್ನೆಣಿಸಿದರೆ ಮೈಜುಮ್ಮೆನ್ನುವುದು- ಎಂದು ಹಿಂದು ಮಹಾಸಭೆಯ ಇತ್ತೀಚಿನ ಹುಯಿಲನ್ನು ಅಲ್ಲಗಳೆದುದು ಕಾಲೋಚಿತವೂ ರಾಷ್ಟ್ರೋಚಿತವೂ ಆಗಿದೆಯೆನ್ನದಿರಲಾರೆವು. ಹಿಂದುಸ್ತಾನದ ಕಾಂಗ್ರೆಸ್ ಸರಕಾರದ ಈ ಆದರ್ಶವೆತ್ತ, ಪಾಕಿಸ್ತಾನದ ಮಾರ್ಜಾರ ಸನ್ಯಾಸಿತ್ವದ ಮಾತುಗಳೆತ್ತ! ಈ ಧ್ರುವಾಂತರ ವ್ಯತ್ಯಾಸದಿಂದ ಸದ್ಯದ ಪರಿಸ್ಥಿತಿಯಲ್ಲಿ ತಾತ್ಕಾಲಿಕವಾಗಿ ಹಿಂದುಸ್ತಾನವು ಹಲವು ವಿಧದ ಕಷ್ಟನಷ್ಟಗಳಿಗೀಡಾಗಬೇಕಾಯಿತು. ಆದರೆ ಸೈನ್ಯ ಬಲದೊಂದಿಗೆ ನೀತಿಬಲವಿದ್ದರೆ ಜಗತ್ತಿನಲ್ಲಿ ಹಿಂದುಸ್ತಾನವೊಂದು ಆದರ್ಶರಾಷ್ಟ್ರವೆನಿಸದಿರದೆಂಬುದು ಖಂಡಿತ.

ಜುನಾಗಡದ ಸಮಸ್ಯೆ

ಜುನಾಗಡದ ನವಾಬಸಾಹೇಬರು ಪಾಕಿಸ್ತಾನಕ್ಕೆ ಸೇರಿದ್ದು ಹೊಸ ಸುದ್ದಿಯಲ್ಲ. ಆದರೆ ರಾಜಕೋಟದಿಂದ ಹಿಂದೀ ಸೈನ್ಯದ ವಿಭಾಗಗಳು ಜುನಾಗಡದ ಹತ್ತಿರದ ಬಾಂಟ್ವಾ ಮತ್ತು ಸರದಾರಗಡ ತಾಲೂಕಿನತ್ತ ಹೋದುದು ಹೊಸ ಸಂಗತಿ. ಆ ತಾಲೂಕುದಾರರೇ ಸೈನ್ಯವನ್ನು ಕೇಳಿ ತರಿಸಿಕೊಂಡುದಾಗಿ ತಿಳಿಯುತ್ತದೆ. ಅದಲ್ಲದೆ ಕಾಠೆವಾಡ ಸಂಸ್ಥಾನಗಳ ಬಿನ್ನಹದ ಮೇರೆಗೆ ಒಂದು ಚಿಕ್ಕ ಸೈನ್ಯವನ್ನು ಹಡಗಿನಲ್ಲಿ ಕಳುಹಲಾಗಿದ್ದು ಅದು ಪೋರಬಂದರಿನಲ್ಲಿ ಇಳಿಯುವುದೆಂದು ಹಿಂದುಸ್ತಾನದ ಮುಖ್ಯಮಂತ್ರಿಗಳ ಕಚೇರಿ ಪ್ರಕಟಿಸಿದೆ. ಇದರ ಮೇಲೆ ಜುನಾಗಡ ನವಾಬರು ಪಾಕಿಸ್ತಾನದಲ್ಲಿ ಸೇರಿದ್ದಾಗಿ ಸಾರಿದ್ದರೂ ಅವರ ಏಕತಂತ್ರ ನಿರ್ಣಯವನ್ನು ಹಿಂದುಸ್ತಾನ ಸರಕಾರವು ಒಪ್ಪಲಾರದೆಂದು ಹಿಂದುಸ್ತಾನ ಸರಕಾರ ಪ್ರಕಟನೆ ಹೊರಡಿಸಿದೆ. ಆ ಪ್ರಕಟನೆಯಲ್ಲಿ ಬಾಬರಿವಾಡ ಮತ್ತು ಮಂಗ್ರೋಲಗಳು ಹಿಂದುಸ್ತಾನ ಒಕ್ಕೂಟದಲ್ಲಿ ಸೇರಿವೆ; ಅದುದರಿಂದ ಜುನಾಗಡ ಸರಕಾರವು ಈ ಸಂಸ್ಥಾನಗಳಲ್ಲಿ ಸೈನ್ಯಪಡೆ ತಂದಿಟ್ಟು ಅನವಶ್ಯಕವಾಗಿ ಉದ್ರೇಕಕಾರಕ ಕೃತ್ಯಮಾಡಿ ಹಿಂದುಸ್ತಾನ ಸರಕಾರದ ಭೂಪ್ರದೇಶದ ಮೇಲೆ ಆಕ್ರಮಣ ನಡೆಸಿದೆ" ಎಂದು ಹಿಂದುಸ್ತಾನ ಸರಕಾರ ತಿಳಿದಿರುವುದಾಗಿ ಹೇಳಿದೆ. ಗೊಂಡಾಳದ ಮಹಾರಾಜರು ಭೌಗೋಲಿಕ ದೃಷ್ಟಿಯಿಂದ ಜುನಾಗಡ ಪಾಕಿಸ್ತಾನಕ್ಕೆ ಸೇರಿದ್ದು ಖಂಡನೀಯವೆನಿಸುವುದೆಂದೂ ಸುತ್ತುಮುತ್ತಲಿನ ಕಾಠೆವಾಡದ ಸಂಸ್ಥಾನಗಳ ಶಾಂತಿಗೆ ಅದರಿಂದ ಅಪಾಯ ಸಂಭವಿಸಿದೆಯೆಂದೂ ಪ್ರಕಟನೆ ಹೊರಡಿಸಿದ್ದಾರೆ. ಯಥಾರ್ಥ ಹೀಗಿರುವಾಗ, ಹಿಂದುಸ್ತಾನದಲ್ಲಿ ಬ್ರಿಟಿಶರ ವರಿಷ್ಠಾಧಿಕಾರ ಕೊನೆಗಂಡ ಬಳಿಕ ಸಂಸ್ಥಾನಗಳ ಸ್ಥಿತಿಗತಿಗಳ ಬಗ್ಗೆ ಮಂತ್ರಿತ್ರಯದ ೧೯೪೬ ನೆಯ ಮೇ ೧೨ ರ ಪ್ರಕಟನೆಯಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ; ಇದರನ್ವಯ ವರಿಷ್ಠಾಧಿಕಾರ ಕೊನೆಗೊಂಡ ಬಳಿಕ ಹಿಂದುಸ್ತಾನದ ಪ್ರತಿಯೊಂದು ಸಂಸ್ಥಾನವೂ ಸ್ವತಂತ್ರ ಹಾಗೂ ಸಾರ್ವಭೌಮವಾಗುವುದು; ಅದಕೆ ಹಿಂದುಸ್ತಾನ ಇಲ್ಲವೆ ಪಾಕಿಸ್ತಾನಕ್ಕೆ ಸೇರಲು ಪೂರ್ಣ ಅಧಿಕಾರವಿರುವುದು— ಎಂದು ಪಾಕಿಸ್ತಾನ ಸರಕಾರವು ಕಾಯದೆ ಖರ್ಜು ಮಾ[illegible] ಹಿಂದುಸ್ತಾನ ಸರಕಾರಕ್ಕೆ ಉತ್ತ[illegible] ಕೊಟ್ಟಿದೆ. ಆದರೆ ಉಭಯ ಸಾಮಂತರಾಜ್ಯಗಳೊಳಗೆ ಸ್ನೇಹ ಸಂಬಂಧವಿರುವುದವಶ್ಯವೆಂದೊಪ್ಪಿಕೊಂಡು ಈ ವಿಷಯದಲ್ಲಿ ತಾನು ಹಿಂದುಸ್ತಾನ ಸರಕಾರದೊಡನೆ ವಿಚಾರವಿನಿಮಯಕ್ಕೆ ಸಿದ್ಧವಿರುವುದಾಗಿ ಹೇಳಿದ್ದಲ್ಲದೆ ಸಂಸ್ಥಾನಗಳು ಒಕ್ಕೂಟ ಸೇರುವ ವಿಷಯದಲ್ಲಿ ಸಾರ್ವಜನಿಕ ಮತಗಣನೆ ಮಾಡುವುದಾದರೆ ಅದನ್ನು ಹೇಗೆ ಮತ್ತು ಯಾವಾಗ ತೆಗೆದುಕೊಳ್ಳಬೇಕೆಂಬುದನ್ನು ಚರ್ಚಿಸಲು ಪಾಕಿಸ್ತಾನ ಸರಕಾರ ಸಿದ್ಧವಿದೆಯೆಂದು ಹಿಂದುಸ್ತಾನ ಸರಕಾರಕ್ಕೆ ಉತ್ತರವಾಗಿ ಹೊರಡಿಸಿದ ಪ್ರಕಟನೆಯಲ್ಲಿ ವಿಸ್ತರಿಸಲಾಗಿದೆ. ಇದರಲ್ಲಿ ಬ್ರಿಟಿಶರು ಅಧಿಕಾರ ತ್ಯಾಗ ಮಾಡಿದ ಕಾಲದಲ್ಲಿ ಬಿತ್ತಿಹೋದ ಕುತಂತ್ರದ ಬೀಜ ಮೊಳಕೆಯೊಡೆದುದನ್ನು ಕಾಣಬಹುದು. ಪಾಕಿಸ್ತಾನ ಸರಕಾರವು ಕೇವಲ ಕಾಯದೆಯನ್ನೇ ಹೇಳುತ್ತ ಕಾಠೇವಾಡದ ಸಂಸ್ಥಾನಗಳ ಶಾಂತಿಗೆ ಭಂಗಬರುವಂತೆ ಜುನಾಗಡಕ್ಕೆ ಹಿಂದುಸ್ತಾನದಧಿಕಾರದೊಳಗಿನ ಸುತ್ತುಮುತ್ತಲಿನ ಭೂಜಲವಾಯು ಪ್ರದೇಶಗಳನ್ನು ದಾಟ ಗುಪ್ತವಾ[illegible] ಇಲ್ಲವೆ ಪ್ರಕಟವಾಗಿ ಸೈನ್ಯ ಕಳುಹಲು ಪ್ರಯತ್ನಿಸಿದರೆ ಅದಕ್ಕಿಂತ ಹೆಚ್ಚು ಮೂರ್ಖತನವಿಲ್ಲ. ಅದರಿಂದಲೇ ಬಹುಶಃ ತನ್ನ ಕಾನೂನಿನ ಬ್ಯಾಸ್ಟರಗಿರಿಯನ್ನು ಮೊದಲು ಪ್ರದರ್ಶಿಸಿದರೂ ಕೊನೆಯಲ್ಲಿ ಜನಮತ ಗಣನೆಯಂತೆ ಆ ಪ್ರಶ್ನೆಯನ್ನು ಇತ್ಯರ್ಥಪಡಿಸಲು ತಾನು ಸಿದ್ಧವಾಗಿರುವುದಾಗಿಯೂ ಆ ವಿಷಯದಲ್ಲಿ ಹಿಂದುಸ್ತಾನಸರಕಾರದೊಡನೆ ಚರ್ಚಿಸಲು ತಯಾರಿರುವುದಾಗಿಯೂ ಹೇಳಿರಬಹುದೆಂದು ಯಾರೂ ಊಹಿಸಬಹುದಾಗಿದೆ. ಇಂತಹ ಸಂದರ್ಭಗಳಲ್ಲಿ ಪಾಕಿಸ್ತಾನವು ತನ್ನ ಇತಿಮಿತಿಯನ್ನು, ಬಲ ಪ್ರತಿಷ್ಠೆಗಳನ್ನು, ನ್ಯಾಯನೀತಿಗಳನ್ನು ಅರಿತು ಹೆಜ್ಜೆ ಇಡದಿದ್ದಲ್ಲಿ ಅದೊಂದು ನೀರಮೇಲಿನ ಗುಳ್ಳೆಯಾಗಿ ಹೋದೀತು! ಲಕ್ಷಾಂತರ ಮುಸಲ್ಮಾನರ ಕೊಲೆಗೆ ಹಿಂದುಸ್ತಾನ ಸರಕಾರದ ಅಧಿಕಾರಿಗಳೇ ಕಾರಣರೆಂದು ಸಂಯುಕ್ತ ರಾಷ್ಟ್ರ ಸಂಘದ ಕಾನೂನು ಸಮಿತಿಯಲ್ಲಿ ಪಾಕಿಸ್ತಾನ ಪ್ರತಿನಿಧಿಯು ಬೊಬ್ಬೆಯಿಟ್ಟು ತನ್ನ ಮೂರ್ಖತನವನ್ನು ಅಷ್ಟದಿಕ್ಕುಗಳಲ್ಲಿ ಪ್ರತಿಧ್ವನಿಸುವಂತೆ ಮಾಡಿರುವದೇ ಪಾಕಿಸ್ತಾನದ ಮೂಲಕ್ಕೆ ಕುಠಾರಾಘಾತವೆನಿಸಿದೆ. ಅದರ ಜೊತೆಗೆ ಸಂಸ್ಥಾನ ಸಮಸ್ಯೆಯನ್ನು ಜಟಿಲಮಾಡಿ ಹಿಂದುಸ್ತಾನದ ತಾಳ್ಮೆಯನ್ನು ಪರೀಕ್ಷೆಗೆ ಗುಂಪಿಸ ಹೋದರೆ ಜಿನ್ನಾಸಾಹೇಬರ ಬ್ಯಾರಿಸ್ಟರ ಬುದ್ಧಿಗೆ "ಕಿರೀಟ" ವಿಟ್ಟಂತಾಗದೇ?

ಅಂತರರಾಷ್ಟ್ರೀಯ

ಏಶಿಯ ಯುರೋಪುಗಳ ಅನ್ನಾಭಾವ

ಸಂಯುಕ್ತ ರಾಷ್ಟ್ರಸಂಘದ ಆರ್ಥಿಕ ಸಮಿತಿಯಲ್ಲಿ ಮಾತನಾಡುತ್ತ ಆಹಾರ ಕೃಷಿಸಂಸ್ಥೆಯ ಡೈರೆಕ್ಟರ್ ಜನರಲ್ಲರಾದ ಸರ್ ಜಾನ್‌ಬಾಯ್ಡರವರು ಏಶಿಯ ಮತ್ತು ಯುರೋಪುಗಳ ಆಹಾರ ಪರಿಸ್ಥಿತಿ ತೀರ ಕೆಟ್ಟಿದೆಯೆಂದೂ ಹಿಂದೆ ಯುದ್ಧದಲ್ಲಿ ಇಲ್ಲವೆ ಬಾಂಬುದಾಳಿಯಲ್ಲಿ ಮಡಿದವರಿಗಿಂತ ಹೆಚ್ಚು ಜನರು ಈ ಖಂಡಗಳಲ್ಲಿ ಮುಂದಿನ ೧೨ ತಿಂಗಳಲ್ಲಿ ಆಹಾರಾಭಾವದ ಪ್ರತ್ಯಕ್ಷಾಪ್ರತ್ಯಕ್ಷ ಪರಿಣಾಮಗಳಿಂದ ಸಾಯುವರೆಂದೂ ಹೇಳಿದರು. ಸುಗ್ಗಿ ಕೈಗೆ ಬಂದರೂ ಬಿಕ್ಕಟ್ಟು ಬಗೆಹರಿಯಲಾರದು. ಈ ಬಗ್ಗೆ ಎಲ್ಲರೂ ಎಚ್ಚರ ತೆಗೆದುಕೊಳ್ಳಬೇಕು. ಸಂ. ರಾ. ಸಂಘದ ಸಾಮಾನ್ಯಸಭೆಯ ವಿಷಯಪಟ್ಟಿಯಲ್ಲಿ ಜಾಗತಿಕ ಆಹಾರ ಮತ್ತು ಅರ್ಥಗಳ ಹೆಸರೆತ್ತಿಲ್ಲ. ಸದಸ್ಯರಾಷ್ಟ್ರಗಳು ಇನ್ನಾದರೂ ಕಣ್ಣುತೆರೆದು ಬರಿದೆ ಹಗಲೂ ರಾತ್ರಿಯೂ ರಾಜಕೀಯ ವಿಚಾರವನ್ನು ತಲೆಯಲ್ಲಿ ತುಂಬಿಕೊಂಡು ತಲೆ ಕೆಡಿಸಿಕೊಳ್ಳುವುದನ್ನು ಬಿಟ್ಟು ಯುರೋಪು ಮತ್ತು ಅದರಷ್ಟೇ ಅಸಹಾಯಸ್ಥಿತಿಯಲ್ಲಿರುವ ಏಶಿಯ ಈ ಎರಡು ಖಂಡಗಳ ಆಹಾರ ಮತ್ತು ಆರ್ಥಿಕ ಸಮಸ್ಯೆಗಳತ್ತ ಹೆಚ್ಚು ಲಕ್ಷ್ಯಕೊಡುವುದವಶ್ಯವೆಂದು ಅವರು ಅಭಿಪ್ರಾಯ ಪಟ್ಟರು. ಲಂಕೆಗೆ ಬೆಂಕಿ ಬಿದ್ದಾಗ ರಾವಣೇಶ್ವರನು ಸೀತಾದೇವಿಯನ್ನೊಲಿಸಿಕೊಳ್ಳಲು ಅಶೋಕವನದಲ್ಲಿ ಶೃಂಗಾರ ಭಾಷಣ ಮಾಡುತ್ತಿದ್ದಂತೆ ಅನ್ನಾಭಾವದಿಂದ ಜನ ಸಾಯುತ್ತಿರುವ ಕಾಲದಲ್ಲಿ ರಾಷ್ಟ್ರಗಳ ಹಿರಿಯಹುದ್ದೆಗಳು ಸಂ. ರಾ. ಸಭೆಯಲ್ಲಿ ತಾತ್ವಿಕವಾದ ಇಲ್ಲವೆ ಸದ್ಯಕ್ಕೆ ಅನವಶ್ಯಕ ಅಥವಾ ಅಮುಖ್ಯವಾದುವೆನಿಸುವ ವಿಷಯಗಳನ್ನು ಚರ್ಚಿಸುತ್ತ ಕುಳಿತುಕೊಂಬುದು ಎಷ್ಟು ಅಪಾಯಕರವೆಂಬುದನ್ನು ಡೈರೆಕ್ಟರ ಜನರಲ್ಲರ ಮಾತಿನಿಂದ ತಿಳಿದುಕೊಂಡು ಜಾಗೃತರಾಗಿ ಅಧಿಕ ಆಹಾರೋತ್ಪಾದನಕ್ಕೆ ಅಗತ್ಯವಾದ ಯೋಜನೆಗಳನ್ನು ರಾಷ್ಟ್ರಗಳು ಕೈಕೊಳ್ಳುವಂತೆ ಪ್ರಯತ್ನಿಸುವುದು ಅತ್ಯಂತ ಮಹತ್ವದ ಹಾಗೂ ಅನಿವಾರ್ಯವಾದ ಕರ್ತವ್ಯವಾಗಿದೆ.

ಟ್ರೂಮನ್ನರ ಉಚಿತೋಪದೇಶ

ಅಮೇರಿಕದ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾದ ಟ್ರೂಮನ್ನರು ಆಕಾಶವಾಣಿಯಿಂದ ಮಾತನಾಡುತ್ತ ಅಮೇರಿಕನ್ನರು ಮಂಗಳವಾರ ಮಾಂಸವನ್ನೂ ಗುರುವಾರ ಕೋಳಿ ಅಥವಾ ತತ್ತಿಗಳನ್ನೂ ತಿನ್ನಕೂಡದೆಂದು ಬಿನ್ನವಿಸಿದ್ದಾರೆ. ಇದರಿಂದ ನಮ್ಮ ಏಕಾದಶಿಯ ಕತೆ ನೆನಪಾಗುತ್ತದೆ. ಅನ್ನದಾತನಾದ ಪರಮೇಶ್ವರನು, ಬ್ರಹ್ಮನು ಚರಾಚರಗಳನ್ನು ಮನ್ವಂತರದಾದಿಯಲ್ಲಿ ಸೃಷ್ಟಿಸಿದ ಕೂಡಲೆ, ನಂದಿಯನ್ನು ಕುರಿತು ಹದಿನೈದುದಿನಗಳಿಗೊಂದು ಊಟವೆಂದು ಜಗತ್ತಿಗೆ ಸಾರಿಬಾಯೆಂದು ಹೇಳಿದನಂತೆ- ನಂದಿಹೋಗಿ ಹದಿನೈದು ದಿನಗಳಿಗೊಮ್ಮೆ ಒಂದು ಉಪವಾಸ ಎಂದು ಸಾರಿಬಂದ. ಅದರಿಂದ ಸಿಟ್ಟಾಗಿ ನೀನೇ ದುಡಿದು ಜಗತ್ತಿಗೆ ಆಹಾರ ಪೂರಯಿಸೆಂದು ಪರಮೇಶ್ವರ ಶಾಪವಿತ್ತ. ಅಂದಿನಿಂದ ಬಸವ ನೊಗಕ್ಕೆ ಹೆಗಲುಕೊಡಬೇಕಾಯಿತಂತೆ. ವಾರಕ್ಕೆರಡುದಿನ ಮೇಲೆ ಹೇಳಿದ ಒಂದೊಂದು ಪದಾರ್ಥವನ್ನು ಬಿಡಬೇಕೆಂದು ಅಧ್ಯಕ್ಷರು ಮನವಿಮಾಡಿಕೊಂಡರೆ ಜಗತ್ತಿನ ಪರಿಸ್ಥಿತಿಯನ್ನು ಕಂಡರಿಯದ ಅಲ್ಲಿಯವರು ವಾರಕ್ಕೆರಡು ಸಾರೆ ವಿಶೇಷ ಭೋಜನವನ್ನೇರ್ಪಡಿಸ ಹೊರಡದಿದ್ದರೆ ಅದೇ ಪುಣ್ಯವೆನ್ನಬೇಕಾಗಿದೆ. ಹಾಗೇನಾದರೂ ಮಾಡಿದರೆ ಬಸವನಂತೆ ಅವರೇ ಜಗತ್ತಿಗೆ ದುಡಿದು ಹಾಕಬೇಕಾದೀತು.- ಅರ್ಥಾತ್ ಜಗತ್ತು ಬಂಡೆದ್ದು ಅಮೇರಿಕದಲ್ಲಿಯ ಆಹಾರವನ್ನು ಕಸಿದುಕೊಳ್ಳಬಹುದಾದ ಪರಿಸ್ಥಿತಿ ಒದಗಬಹುದು. ಅದು ಹೇಗೂ ಇರಲಿ, ತಮ್ಮ ಜನತೆಗೆ ಟ್ರೂಮನ್ನರು ಉಚಿತೋಪದೇಶ ಕೊಟ್ಟಿದ್ದು ಸ್ತುತ್ಯವಾಗಿದೆ. ಆದರೆ ಅವರ ಉಪದೇಶ, ಅದರ ಆಚರಣೆ, ಅದರಿಂದಾಗುವ ಲಾಭ ಇವುಗಳನ್ನು ನಂಬಿ ಜಗತ್ತಂತೂ ಈಗಿನ ವೇಗದಲ್ಲೇ ಆಹಾರೋತ್ಪಾದನ ಸಾಗಿಸುತ್ತ ನಡೆದರೆ ಭಯಂಕರ ಸನ್ನಿವೇಶ ಉಂಟಾಗದಿರದು. ಪ್ರತಿಯೊಂದು ಕೊರತೆಯ ರಾಷ್ಟ್ರವೂ ಶಕ್ತಿಮೀರಿ ಉತ್ಪಾದನೆಯನ್ನು ಹೆಚ್ಚಿಸಲು ಅಹೋರಾತ್ರ ಶ್ರಮಿಸಬೇಕು. ಇನ್ನು ಅಮೇರಿಕನ್ನರಾದರೂ ಕೇವಲ ಉಳಿಸುವದಲ್ಲದೆ ಹೆಚ್ಚು ಬೆಳೆಸಿ ಜಗತ್ತಿನ ಸಂತ್ರಸ್ತ ರಾಷ್ಟ್ರಗಳಿಗೆ ನೀಡುವದು ಅವರ ರಾಷ್ಟ್ರಬಾಂಧವ್ಯಕ್ಕೆ ಕಿರೀಟ ಪ್ರಾಯವಾದೀತು. ಹಾಗೆ ಎಚ್ಚತ್ತು ಜಗತ್ತಿನ ಅನ್ನದಾತೃತ್ವ ವಹಿಸಿ ಪರಮೇಶ್ವರನ ಕಾರ್ಯವನ್ನು ನಿರ್ವಹಿಸಲು ಸಕಾಲದಲ್ಲಿ ಅಮೇರಿಕನ್ನರು ಕಾರ್ಯಾಸಕ್ತರಾಗಲೆಂದು ಆಶಿಸುತ್ತೇವೆ.

ಚಿಯಾಂಗರ ಭಗೀರಥ ಪ್ರಯತ್ನ

ಬೆಟ್ಟದ ನದಿಗಳು ಕಣಿವೆಗೆ ಧುಮುಕುವಂತೆ ಚಿಯಾಂಗರ ಸೈನ್ಯ, ಶಸ್ತ್ರ, ಸಾಮುಗ್ರಿಗಳು ಮಂಚೂರಿಯಾದಲ್ಲಿ ನುಗ್ಗಿದವೆಂದು ತಿಳಿಯುತ್ತದೆ. ಇದಕ್ಕೆ ಸಮಾಜವಾದಿ ಸೈನ್ಯದ ಹೆಚ್ಚುತ್ತಿರುವ ಕ್ರಾಂತಿಕಾರಕ ಚಟುವಟಿಕೆಗಳೇ ಕಾರಣವೆಂದು ಹೇಳಲಾಗಿದೆ. ಅವರು ಸರಕಾರೀ ಸೈನ್ಯದ ಅತ್ಯಂತ ಮಹತ್ವದ ಜೀವನಾಡಿಯ ಸಾಲನ್ನೇ ಭೇದಿಸಲು ಹೊಂಚು ಹಾಕಿರುವರೆಂದು ಸೈನಿಕ ನೀರೀಕ್ಷಕರು ಅಭಿಪ್ರಾಯಪಡುತ್ತಾರೆ. ಅಧ್ಯಕ್ಷ ಚಿಯಾಂಗ್‌ಕೈಶೇಕರು ಸ್ವತಃ ಪೀಪಿಂಗಿನಲ್ಲಿ ತಾತ್ಕಾಲಿಕವಾಗಿ ತಮ್ಮದೊಂದು ಕೇಂದ್ರವನ್ನು ಸ್ಥಾಪಿಸಿ ತಾವೇ ಸಮರ ನೇತೃಗಳಾಗಿ ದಿಗ್ದರ್ಶನ ಕೊಡುವರೆಂಬ ಸುದ್ದಿಯೂ ಉಂಟು. ಇದರಿಂದ ಚೀನದ ಯಾದವೀ ಕಲಹವು ಯಾವ ಸ್ವರೂಪವನ್ನು ತಾಳಿದೆಯೆಂಬುದು ಸ್ಫುಟವಾಗಿ ಪ್ರಕಾಶವಾಗುತ್ತದೆ. ಸಾಮ್ರಾಜ್ಯವಾದಿ ಅಮೇರಿಕದ ಕೈಗೊಂಬೆಯಾದ ಚಿಯಾಂಗರ ಬಲಗೆಲ್ಲುವುದೋ ಜಗತ್ತಿನಲ್ಲಿಂದು ದಾವಾನಲನಂತೆ ಹಬ್ಬುತ್ತಿರುವ ಸಮಾಜವಾದಿಬಲ ಗೆಲ್ಲುವುದೋ ಎಂಬುದನ್ನು ಪರಿಣಾಮದಿಂದಲೇ ತಿಳಿಯಬೇಕಾಗಿದೆ. ಸರಕಾರದ ಜಯದ ಸಂಭವ ಹೆಚ್ಚೆಂಬುದೂ ಚೀನ ಅಮೇರಿಕದ ದಾಸ್ಯತ್ವಕ್ಕಿಳಿಯುವುದೆಂಬುದೂ ಹರಳಿನಷ್ಟು ಸ್ಪಷ್ಟ ಪ್ರಕಾಶವುಳ್ಳ ಸಂಗತಿ. ಹಾಗಲ್ಲದೆ ಸಮಾಜವಾದಿಗಳಿಗೆ ವಿಜಯದೊರೆತರೆ ಚೀನದಿಂದ ಅಮೇರಿಕದ ವರ್ಚಸ್ಸಿಗೆ ಆತ್ಯಂತಿಕ ಬಹಿಷ್ಕಾರ ಸಂಭವಿಸಿ ಅದೊಂದು ಬಲವಾದ ಸಮಾಜವಾದಿ ರಾಷ್ಟ್ರವಾಗಿ ಸುತ್ತುಮುತ್ತಣ ರಾಜ್ಯಗಳಲ್ಲಿ ಸಮಾಜವಾದದ ಕೈಯನ್ನು ಚಾಚದಿರದು. ಹೇಗೇ ಆಗಲಿ, ಪಾಕಿಸ್ತಾನ ಹಿಂದುಸ್ತಾನಗಳಲ್ಲಿಯ ಕಲಹಕ್ಕಿಂತಲೂ ಘೋರ ಪರಿಣಾಮವನ್ನುಂಟು ಮಾಡಲಿರುವ ಚೀನದ ಈ ಕುರುಕ್ಷೇತ್ರ ಕಾಂಡವು ಏಶಿಯದ ಏಳಿಗೆಗೆ ಕುಠಾರಪ್ರಾಯವಾಗಿದೆಯೆಂದು ವಿಷಾದ ಪೂರ್ವಕ ಹೇಳಬೇಕಾಗಿದೆ. ಪಾಶ್ಚಾತ್ಯರ ಪ್ರಭಾವದಿಂದ ತಪ್ಪಿಸಿಕೊಳ್ಳಲು ನಾನಾಮುಖದಿಂದ ಹೆಣಗಿ ಭಾರತ ಮೊದಲುಗೊಂಡು ಏಶಿಯದ ವಿವಿಧ ರಾಷ್ಟ್ರಗಳು ಜಯಶೀಲರಾದ ಹಾಗೂ ಇಂಡೊನೇಶಿಯ ಮುಂತಾದ ರಾಷ್ಟ್ರಗಳು ತೀವ್ರ ಪ್ರಯತ್ನದಲ್ಲಿ ಅಹೋರಾತ್ರ ಹೋರಾಡುತ್ತಿರುವ ಈ ಕಾಲದಲ್ಲಿ ಚೀನದಂತಹ ೫೫ ಕೋಟಿ ಜನಸಂಖ್ಯೆಯುಳ್ಳ ಏಶಿಯದ ಮಧ್ಯದಲ್ಲಿರುವ ಮಹಾರಾಷ್ಟ್ರವು ಹೀಗೆ ಅಂತಃಕಲಹದಿಂದ ತನ್ನ ಶಕ್ತಿಯನ್ನು ಕಳೆದುಕೊಂಡು ದಾಸ್ಯ ಪಾತಾಳದತ್ತ ಹೆಜ್ಜೆಯಿಡುತ್ತಿರುವುದು ಸೋದರರಾಷ್ಟ್ರವಾದ ಭಾರತಕ್ಕೆ ಬಹಳ ತೀಕ್ಷ್ಣ ವ್ಯಥೆಯನ್ನುಂಟು ಮಾಡುವುದು ಸಹಜವಾಗಿದೆ. ಇದೊಂದು ದೈವ ದುರ್ವಿಪಾಕವೆಂದೇ ಹೇಳಬೇಕಲ್ಲದೆ ಮತ್ತೇನೆಂದೂ ಹೇಳಬರದು.

ಅಮೇರಿಕದ ವಿರುದ್ಧ ಸಮಾಜವಾದಿ ರಾಷ್ಟ್ರಗಳ ಸಂಘಟನೆ

ಯುಕ್ರೇನ್, ಜೆಕೊಸ್ಲೋವೇಕಿಯ, ಹಂಗೆರಿ, ಇಟಲಿ, ಫ್ರಾನ್ಸ್, ಜರ್ಮನಿ (ಕಡೆಯ ೩ ದೇಶಗಳ ಕಮ್ಯುನಿಸ್ಟ ಪಕ್ಷಗಳು) ಮುಂತಾದ ೯ ಐರೋಪ್ಯ ರಾಷ್ಟ್ರಗಳು ಅಕ್ಟೋಬರ ೫ ರಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನದ ನೇತೃತ್ವದಲ್ಲಿ ವೃದ್ಧಿ ಹೊಂದುತ್ತಿರುವ ಪ್ರಜಾ ಪ್ರಭುತ್ವಕ್ಕೆ ವಿರುದ್ಧವಾದ ಸಾಮ್ರಾಜ್ಯವಾದಿಗಳ ಬಲಕ್ಕೆ ಪ್ರತಿಯಾಗಿ ಅಂತರ್ರಾಷ್ಟ್ರೀಯ ಸಮಾಜವಾದಿಗಳ ಕೂಟವನ್ನು ಪುನಃ ತೆರೆಯುವುದಾಗಿ ಪ್ರಕಟಿಸಿವೆ. ಇದರ ಚರ್ಚೆಗಾಗಿ ಕಳೆದ ತಿಂಗಳು ಪೋಲೆಂಡಿನಲ್ಲಿ ಗುಪ್ತ ಸಭೆ ಸೇರಿ ಈ ರಾಷ್ಟ್ರಗಳು ಮೇಲಿನ ನಿರ್ಣಯಕ್ಕೆ ಬಂದಿವೆಯೆಂದು ತಿಳಿಯುತ್ತದೆ. ಪಶ್ಚಿಮ ಯುರೋಪು ಮತ್ತು ಅಮೇರಿಕಗಳ ಆಕ್ರಮಣವೃತ್ತಿಯ ಯೋಜನೆಗಳನ್ನು ನಿರಸನಗೊಳಿಸುವುದೇ ಕೂಟದ ಉದ್ದೇಶವೆಂದು ಹೇಳಲಾಗಿದೆ. ಈ ಕೂಟವನ್ನು ಯುದ್ಧ ಕಾಲದಲ್ಲಿ ೧೯೪೩ ನೆಯ ಮೇ ೧೫ ರಲ್ಲಿ ವಿಸರ್ಜಿಸಲಾಗಿತ್ತು. ಪುನಃ ಅದನ್ನೀಗ ತೆರೆಯಲು ಗ್ರೀಸು ತುರ್ಕಿ ಮುಂತಾದ ರಾಜ್ಯಗಳಲ್ಲಿ ಅಮೇರಿಕ ತನ್ನ ವರ್ಚಸ್ಸನ್ನು ಹೆಚ್ಚಿಸುವ ಯೋಜನೆಗಳನ್ನು ಕೈಕೊಂಡಿರುವುದೇ ಕಾರಣವೆಂಬುದು ಸ್ವತಃಸಿದ್ಧವಾಗಿದೆ. ಈ ಕೂಟದ ಪ್ರಕಟನೆ ಯುರೋಪಿನ ಬಲ ಪಕ್ಷದ ಸಾಮ್ಯವಾದಿಗಳನ್ನು ಸಾಮ್ಯವಾದ ದ್ರೋಹಿಗಳೆಂದು ಕ್ರೂರವಾಗಿ ಟೀಕಿಸಿದೆ. ರಶಿಯದ ಸುಪ್ರಸಿದ್ಧ ಪತ್ರಿಕೆಯಾದ "ಪ್ರವ್ದ" ದಲ್ಲಿ, ಇನ್ನೂ ಹೆಚ್ಚು ನಿಶ್ಚಿತವಾಗುತ್ತಿರುವ ಬಂಡವಾಲಶಾಹಿಯ ಬಿಕ್ಕಟ್ಟನ್ನ, ಬಂಡವಾಲಶಾಹಿಯ ಶಕ್ತಿಯನ್ನು ಕುಗ್ಗಿಸುತ್ತಿರುವ ಮತ್ತು ಸಾಮ್ಯವಾದ ಹಾಗೂ ಪ್ರಜಾ ಶಕ್ತಿಗಳನ್ನು ಬಲಪಡಿಸಲಾಗುತ್ತಿರುವ ವಾತಾವರಣದಲ್ಲಿ ಇಂದು ಸಾಮ್ರಾಜ್ಯವಾದಿ ಹಾಗೂ ಸಾಮ್ರಾಜ್ಯ ವಿರುದ್ಧವಾದಿ ಶಿಬಿರಗಳ ನಡುವಣ ಹೋರಾಟ ಸಾಗುತ್ತಿದೆ" ಎಂದು ಹೇಳಲಾಗಿದೆ. ಜಾಗತಿಕ ಸಮಾಜವಾದಿ ಆಂದೋಲನವನ್ನು ಗುರಿಯಾಗಿಟ್ಟುಕೊಂಡಿರುವ ಉಕ್ತ ಸಂಘಟನೆಯು ಜಗತ್ತಿನ ಭವಿಷ್ಯವೇನೆಂಬುದನ್ನು ಸ್ಥೂಲವಾಗಿಯಾದರೂ ಘೋರವಾದ ನೋಟದಿಂದ ಸೂಚಿಸುತ್ತದೆ; ಸಂಯುಕ್ತ ರಾಷ್ಟ್ರ ಸಂಘದ ಅಡಿಪಾಯದ ಕೆಳಗೆ ಕಂದರವನ್ನಗೆದು 'ಡೈನಾಮೈಟ್' ಇಡುತ್ತದೆ! ಭಾವೀ ಕಾಲದ ಪೂರ್ವ ಪಶ್ಚಿಮಾರ್ಧ ಗೋಲಗಳ ನಡುವಣ ಅಭೂತಪೂರ್ವವೆನಿಸಬಹುದಾದ ಘನಘೋರ ಸಂಗ್ರಾಮಕ್ಕೆ ಈ ಸಂಘಟನೆ ಶಕುನ ಹೇಳುತ್ತದೆ. ಬಲದ ಮಾತೇ ನ್ಯಾಯವೆಂಬ ಪ್ರಾಕೃತ ತತ್ವ ಅಜರಾಮರವಾದುದು; ಅಷ್ಟೇ ಅಮರತ್ವವುಳ್ಳ ಇನ್ನೊಂದು ತತ್ವವೆಂದರೆ, ದೈವೀ ಬಲಕ್ಕೇ ಆತ್ಯಂತಿಕ ಜಯದ ಮೇಲೆ ಅಧಿಕಾರ ಎಂಬುದು. ಈ ಪ್ರಕಾರ ರಶಿಯ ಅಮೇರಿಕಗಳ ಕ್ರಿಯೆ ಪ್ರತಿಕ್ರಿಯೆಗಳನ್ನವಲೋಕಿಸುವ ಕಾಲ ಬರುವುದರೊಳಗೆ ಹಿಂದುಳಿದ ಏಶಿಯದ ರಾಷ್ಟ್ರಗಳು ಮಾತ್ರ ಶತಪ್ರಯತ್ನದಿಂದ ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಭರದಿಂದ ಸಿದ್ಧತೆ ನಡೆಸಬೇಕಾಗಿದೆ.

ಭಾರತ ಆಸ್ಟ್ರೇಲಿಯಗಳ ವ್ಯಾಪಾರ

ಭಾರತ ಆಸ್ಟ್ರೇಲಿಯಗಳ ನಡುವಣ ವ್ಯಾಪಾರದ ಬೆಲೆಯನ್ನು ಪರಿಶೀಲಿಸಿದಾಗ ೧೯೩೯ಕ್ಕಿಂತ ನೂರಕ್ಕೆ ೪೭೭ ರಷ್ಟು ಹೆಚ್ಚಾಗಿದೆಯೆಂದು ಕಂಡು ಬಂದಿದೆ. ಆಸ್ಟ್ರೇಲಿಯಕ್ಕೆ ಕಳುಹಿದ ಪದಾರ್ಥಗಳಿಂದ ಅಲ್ಲಿಂದ ಭಾರತಕ್ಕೆ ತರಿಸಿಕೊಂಡ ಪದಾರ್ಥಗಳೇ ಹೆಚ್ಚೆಂದು ಗೊತ್ತಾಗುತ್ತದೆ. ಆದರೂ ವ್ಯಾಪಾರ ಲಾಭವು ಭಾರತಕ್ಕನುಕೂಲವಾಗಿಯೇ ಉಳಿದಿದೆ. ಆಸ್ಟ್ರೇಲಿಯಕ್ಕೆ ಸರಕು ಕಳುಹುವಲ್ಲಿ ಇಂಗ್ಲೆಂಡು ಅಮೇರಿಕಗಳನ್ನುಳಿದರೆ ಭಾರತವೇ ಮೊದಲ ರಾಷ್ಟ್ರವೆಂದು ನಿರ್ಯಾತ ಮಾನದಿಂದ ಹೇಳಬಹುದಾಗಿದೆ. ಜೂನ ೧೯೪೭ ರಲ್ಲಿ ಮುಗಿದ ವರ್ಷದಲ್ಲಿ ಭಾರತದಿಂದ ಕಳುಹಿದ ಮಾಲುಗಳ ಬೆಲೆ ೧,೫೨,೪೨,೦೮೦ ಪೌಂಡುಗಳು; ಭಾರತ ತರಿಸಿಕೊಂಡ ಸರಕುಗಳ ಬೆಲೆ ೧,೦೩,೯೧,೨೦೦ ಪೌಂಡುಗಳು. ೧೯೩೯ಕ್ಕಿಂತ ಭಾರತದ ನಿರ್ಯಾತದಲ್ಲಿ ನೂರಕ್ಕೆ ೪೭೭ ರಷ್ಟು ಏರಿಕೆಯಾದರೆ ಆಸ್ಟ್ರೇಲಿಯದಿಂದ ಭಾರತಕ್ಕೆ ಬಂದ ವಸ್ತುಗಳ ಬೆಲೆಯಲ್ಲಿ ನೂರಕ್ಕೆ ೫೬೧ ರಷ್ಟು ಉತ್ಕರ್ಷ ಉಂಟಾಗಿದೆ.

ಅಫಗನರ ವಿರುದ್ಧ ಮತ

● ಸಂ. ರಾ. ಸಂಘಕ್ಕೆ ಪಾಕಿಸ್ತಾನವನ್ನು ಸೇರಿಸಬೇಕೆಂಬ ಠರಾವನ್ನು ಮತಕ್ಕೆ ಹಾಕಲಾಗಿ ಎಲ್ಲ ಸದಸ್ಯ ರಾಷ್ಟ್ರ ಪ್ರತಿನಿಧಿಗಳ ನಡುವೆ ಅಫ್ಘನರ ಪ್ರತಿನಿಧಿಯೊಬ್ಬನೇ ವಿರುದ್ಧ ಮತಕೊಟ್ಟುದು ಎಲ್ಲರನ್ನೂ ಅಚ್ಚರಿಗೊಳಿಸಿದೆಯೆಂದು ಹೇಳಲಾಗುತ್ತದೆ. ಇತ್ತೀಚಿನ ಅಫ್ಘನರ ಧೋರಣವನ್ನು ಪರಿಶೀಲಿಸಿದರೆ ಅಂತಹ ಆಶ್ಚರ್ಯಕ್ಕೇನೂ ಕಾರಣವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಗಡಿನಾಡನ್ನು ಸ್ವತಂತ್ರ ಪ್ರಾಂತವಾಗಿ ಉಳಿಸಬೇಕೆಂಬುದಕ್ಕೆ ಹಿಂದುಸ್ತಾನ ಮಾತನಾಡಲಿಲ್ಲ; ಆದರೆ ಪಾಕಿಸ್ತಾನ ವಿರೋಧಿಸಿತು. ಅದು ಸ್ವತಂತ್ರವಾಗಿದ್ದರೆ ಅಫ್ಗಾನಿಸ್ತಾನದ ಪಠಾನರೊಡನೆ ಅವ್ಯಾಹತ ಮಿತ್ರತ್ವದಿಂದ ನಡೆದುಕೊಳ್ಳಲು ಅವಕಾಶ ಉಂಟಾಗುತ್ತಿತ್ತೆಂಬುದು ಸ್ಪಷ್ಟ. ಆ ಸವಲತ್ತು ಸಿಗದಂತೆ ಅಡ್ಡಬಂದ ಪಾಕಿಸ್ತಾನದ ಬಗ್ಗೆ ಸ್ವಾಭಾವಿಕವಾಗಿ ಅಫಗಾನಿಸ್ತಾನಕ್ಕೆ ಸಹಾನುಭೂತಿಯಿಲ್ಲದಾಗಿದೆ. ಅಫಗನರ ಸ್ವಾರ್ಥಕ್ಕೆ ವಿಘ್ನವೊಡ್ಡಿದ್ದರಿಂದಲೇ ಪಾಕಿಸ್ತಾನಕ್ಕೆ ಅವರ ಮತ ದೊರೆಯಲಿಲ್ಲ. ಮುಂದಾದರೂ ಪಾಕಿಸ್ತಾನವು ಅಫಗನರನ್ನೊಲಿಸಿಕೊಳ್ಳದಿದ್ದರೆ ಅವರ ಭದ್ರತೆಗೇ ಭಂಗಬರಬಹುದಾಗಿದೆ.

ಪಾಲಿಸ್ತಾನ ಮುಸ್ಲಿಮರಿಗೆ ಬ್ರಿಟಿಶರ ಸ್ನೇಹ ಹಸ್ತ

ಪಾಲಿಸ್ತಾನ ಮತ್ತು ಜಪಾನುಗಳಿಂದ ಬ್ರಿಟಿಶರು ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡುದು ಅತ್ಯಂತ ದೂರದರ್ಶಿತ್ವದ ಸಾಮ್ರಾಜ್ಯರಕ್ಷಣಾತಂತ್ರವೆಂದು ಹೇಳಲಾಗಿದೆ. ಬ್ರಿಟನ್ನು ತಯಾರಿಸಿದ ಮಧ್ಯಪ್ರಾಚ್ಯ ಸಂಬಂಧದ ನೀಲಪತ್ರ (Blue Print)ವು ನಾಳೆ ಕೂಡಲಿರುವ ಚತುರ್ರಾಷ್ಟ್ರ ಸಮ್ಮೇಳನದ ಚರ್ಚಾ ವಿಷಯವಾಗುವುದಂತೆ. ಸಾಮ್ರಾಜ್ಯಕ್ಕೆ ಯೆಹೂದಿಗಳ ಸ್ನೇಹಕ್ಕಿಂತ ಮುಸ್ಲಿಮರ ಸ್ನೇಹ ಅವಶ್ಯವೆನಿಸಿದಾಗ ಪಾಲಿಸ್ತಾನ ಪ್ರಶ್ನೆಯನ್ನು ಅಲಕ್ಷಿಸಬೇಕೆಂದೂ ಅಲ್ಲಿಂದ ಇಜಿಪ್ತದವರೆಗೆ ಸಾಮ್ರಾಜ್ಯ ಸಹಕಾರಿ ರಾಜ್ಯಗಳ ಒಂದು ವೃತ್ತವನ್ನು ನಿರ್ಮಿಸಿ ಇಜಿಪ್ತದ ಹಗೆತನದ ಕಹಿಯನ್ನು ಕಡಿಮೆಮಾಡಬೇಕೆಂದೂ ಬ್ರಿಟಿಶ ಪ್ರತಿನಿಧಿಯಾದ ಸರ್ ನೋಯೆಲ್ ಚಾರ್ಲ್ಸರಿಗೆ ಸೂಚಿಸಲಾಗಿದೆಯೆಂದು ತಿಳಿಯುತ್ತದೆ. ಮೇಲಿನ ನೀಲ ಪತ್ರದ ಪ್ರಕಾರ ಬ್ರಿಟಿಶ ಮುತ್ಸದ್ದಿಗಳು ಬರುವ ೧೦ ವರ್ಷಗಳ ವರೆಗೆ ಜಗತ್ತಿನಲ್ಲಿ ಯುದ್ಧ ಸಂಭವಿಸದೆಂದು ಅಭಿಪ್ರಾಯ ಪಡುವುದಾಗಿ ಬ್ರಿಟಿಶ ವಕ್ತಾರನ ಪ್ರಕಟನೆ ತಿಳಿಸುತ್ತದೆ. ರಾಜತಂತ್ರವೆನ್ನಬೇಕು ಇದಕ್ಕೆ! ಹೋದದ್ದು ಹೋಗಲಿ, ಇದ್ದ ಸಾಮ್ರಾಜ್ಯದ ತುಣುಕುಗಳನ್ನಾದರೂ ಭದ್ರವಾಗಿ ಕಾಯ್ದುಕೊಳ್ಳಬೇಕೆಂಬ ಬ್ರಿಟನ್ನಿನ ಸಾಮ್ರಾಜ್ಯಶಾಹಿಯ ಲೋಭಕ್ಕೆ ಇದಕ್ಕಿಂತ ಹೆಚ್ಚಿನ ಸಾಕ್ಷಿಬೇಡ. ಒಂದೊಮ್ಮೆ ಸಾಮ್ರಾಜ್ಯ ಕೇಂದ್ರವನ್ನು ದ. ಆಫ್ರಿಕಕ್ಕೆ ಸ್ಥಳಾಂತರಿಸಬೇಕೆಂದು ಬ್ರಿಟಿಶರು ಹವಣಿಸಿದ ಸುದ್ದಿಯಿತ್ತು. ಬ್ರಿಟಿಶ ಶಿಪಾಯಿಗಳು ಹೋಗಿ ಪೂರ್ವ ಆಫ್ರಿಕದಲ್ಲಿ ನೆಲೆಸುತ್ತಿದ್ದ ವದಂತಿಹಬ್ಬಿತ್ತು. ಅದರಲ್ಲಿ ತಥ್ಯಾಂಶ ವಿಲ್ಲದಿಲ್ಲ. ಅದೇ ಪ್ರಕಾರ ಕಳೆದುಳಿದ ಸಾಮ್ರಾಜ್ಯ ಭಾಗಗಳನ್ನು ಗಟ್ಟಿಯಾಗಿ ಹಿಡಿಯಲು ಬ್ರಿಟನ್ನು ಇಂದು ನಾನಾಮುಖವಾದ ಪ್ರಯತ್ನ ನಡೆಸುತ್ತಿದೆ. 'ಕೊಟ್ಟರೂ ಪೂರ ಕೊಡದಿಟ್ಟುಕೊಂಬವ ಜಾಣ; ಇಟ್ಟುಕೊಂಡದ್ದ ನಳವಡಿಸಿ ಮುಷ್ಟಿಯಲಿ ಗಟ್ಟಿಸುವ ಜಾಣ ಕಾರ್ಯಜ್ಞ' ಎಂಬ ನೀತಿಯನ್ನು ರಾಜತಂತ್ರವನ್ನು ಕರತಲಾಮಲಕ ಮಾಡಿಕೊಂಡ ಬ್ರಿಟಿಶ ಮುತ್ಸದ್ದಿಗಳು ಅನುಸರಿಸುತ್ತಿರುವುದು ಭಾರತಕ್ಕೊಂದು ಉದಾಹರಣೆಯಾಗಿದೆ. ತನ್ನ ತನ್ನ ಲಾಭಕ್ಕಾಗಿ ಪ್ರತಿಯೊಂದು ವ್ಯಕ್ತಿಯಂತೆ ಪ್ರತಿಯೊಂದು ರಾಷ್ಟ್ರವೂ ಶ್ರಮಿಸುವುದೆಂಬುದು ಇಂದು ನಿನ್ನೆಯ ಮಾತಲ್ಲ. ಆ ಪ್ರಕಾರ ನ್ಯಾಯಾನ್ಯಾಯ ವಿಚಾರವನ್ನು ಬದಿಗಿಟ್ಟು ಸಾಮ್ರಾಜ್ಯ ಸಂರಕ್ಷಣ ಪರವಾದ ಬ್ರಿಟನ್ನಿನ ಕುಟಿಲ ನೀತಿಯನ್ನು ಕಂಡು ಏಶಿಯದ ರಾಷ್ಟ್ರಗಳು ಎಚ್ಚತ್ತು ತಮ್ಮ ತಮ್ಮ ಸುತ್ತುಮುತ್ತಲಿನ ರಾಷ್ಟ್ರಗಳಲ್ಲಿ ಯಾವ ಯಾವ ಪಾಶ್ಚಾತ್ಯರಾಷ್ಟ್ರಗಳು ಕೈಚಾಚುತ್ತಿವೆಯೆಂಬುದನ್ನು ವೈನತೇಯ ದೃಷ್ಟಿಯಿಂದ ಪರಿಶೀಲಿಸಿ ಸ್ವಾನಭದ್ರತೆಗಾಗಿ ಮುಂಜಾಗ್ರತೆ ವಹಿಸುವುದು ರಾಜತಂತ್ರದ ಅನಿವಾರ್ಯ ಆವಶ್ಯಕತೆಯಲ್ಲವೆ?

× × ×

ಲೇಕಸಕ್ಸಸದಲ್ಲಿ ಕೂಡಿದ ಸಂಯುಕ್ತ ರಾಷ್ಟ್ರ ಸಂಘದ ರಾಜಕೀಯ ಸಮಿತಿಯಲ್ಲಿ ರಶಿಯದ ಪ್ರತಿನಿಧಿ ಆ್ಯಂಡ್ರೂ ವಿಶಿನಸ್ಕಿಯವರು ಗ್ರೀಕ್ ಸಮಸ್ಯೆಯ ಬಗ್ಗೆ ಮಾತನಾಡುತ್ತ ತಾ. ೬ ರಲ್ಲಿ ಗ್ರೀಕ್ ಪ್ರಶ್ನೆಯು ಅತಿಮಹತ್ವದ್ದಿದೆಯೆಂದೂ ಅದರಲ್ಲಿ ಜಾಗತಿಕ ಸಮಸ್ಯೆಗಳು ಅಡಕವಾಗಿವೆಯೆಂದೂ ಪ್ರತಿಪಾದಿಸಿದರು.

× + ×

ಬ್ರಿಟನ್ನಿನ ಆರ್ಥಿಕ ಸಮಸ್ಯೆಯನ್ನು ಬಿಡಿಸಲನುಕೂಲವಾಗುವಂತೆ ಮುಖ್ಯ ಮಂತ್ರಿ ಅಟ್ಲಿಯವರು ತಮ್ಮ ಮಂತ್ರಿಮಂಡಲವನ್ನು ಬಲಪಡಿಸಲು ಅದರಲ್ಲಿ ಬಿಸಿನೆತ್ತರಿನ ಯುವಕರನ್ನು ಸೇರಿಸಿಕೊಂಡರೆಂದು ತಿಳಿಯುತ್ತದೆ. ಮಂತ್ರಿಗಳ ಒಟ್ಟು ಸಂಖ್ಯೆಯನ್ನು ೧೯ ರಿಂದ ೧೮ ಕ್ಕೆ ಇಳಿಸಲಾಗಿದೆ.

× + ×

ವೀಟನಾಮ ಪ್ರಜಾರಾಜ್ಯದ ಅಧ್ಯಕ್ಷ ಡಾ. ಹೋಚಿಮಿನ್ನರು ಹಿಂದುಸ್ತಾನದಲ್ಲಿಯ ನೆರೆಯಿಂದ ನಷ್ಟಹೊಂದಿದವರ ಸಹಾಯಕ್ಕಾಗಿ ಹತ್ತು ಲಕ್ಷ ಫ್ರಾಂಕುಗಳನ್ನು ಪಂ. ಜವಾಹರಲಾಲರ ಕಡೆಗೆ ಕಳುಹುವುದಾಗಿ ಆಶ್ವಾಸನ ಕೊಟ್ಟಿರುವರು.

× × ×

೧೯೩೫ ರಲ್ಲಿ ಜರ್ಮನಿಗೆ ಸೇರಿದ್ದ ಸಾರ ಪ್ರಾಂತವು ಆರ್ಥಿಕ ದೃಷ್ಟಿಯಿಂದ ಫ್ರಾನ್ಸಿನೊಡನೆ ಕೂಡಿ ಕೆಲಸಮಾಡಬೇಕೆಂಬ ಫ್ರೆಂಚ ಧೋರಣಕ್ಕೆ ನೂರಕ್ಕೆ ೭೧ ರಷ್ಟು ಮತದಾರರು ಬೆಂಬಲ ಕೊಟ್ಟಿದ್ದಾರೆ.

× × ×

ಕಾಲರಾ ಪೀಡಿತ ನೊಣಗಳನ್ನು ನಾಶಮಾಡಲು ಇಜಿಪ್ತದ ವಿಮಾನಗಳು ಇದೀ ರಾಜಧಾನಿಯ ಮೇಲೆ ಡಿ. ಡಿ. ಟಿ. ಪುಡಿಯನ್ನು ಸಿಂಪಡಿಸಿದವು.

ಹಿಂದುಸ್ತಾನದಲ್ಲಿಯ ಪ್ರಗತಿಕಂಟಕ ಸಂಸ್ಥಾನಗಳು

(ಮೊದಲನೆ ಪುಟದಿಂದ)

ತನಗೆ ಬೇಕಾದವರನ್ನು ಪಟ್ಟಕ್ಕೆ ಕೂಡಿಸಲು ಅಥವಾ ಬೇಡಾದವರನ್ನು ವನವಾಸಕ್ಕಟ್ಟಲು ಅದಕ್ಕೆ ಬಲವಿತ್ತು. ರಾಜಕೀಯ ಶಾಖೆಗೆ ವರಿಷ್ಠಾಧಿಕಾರದ ಬೆಂಬಲವಿದ್ದುದರಿಂದ ಅದಕ್ಕೆ ಅಪರಿಮಿತ ಅಧಿಕಾರಗಳಿದ್ದವು. ಅದರ ರೆಸಿಡೆಂಟರು ಎಲ್ಲ ಸಂಸ್ಥಾನಗಳಲ್ಲಿದ್ದು ಅವುಗಳ ಮೇಲೆ ನಿಯಂತ್ರಣ ನಡೆಸುವವರೂ ಬ್ರಿಟಿಶ ರಾಜ್ಯದ ಗುಪ್ತಚಾರರೂ ಆಗಿದ್ದರು. ಇಂಥ ಪ್ರಭಾವಶಾಲಿ ರಾಜಕೀಯ ಶಾಖೆಯ ಬದಲು ಅದರ ಸ್ಥಳವನ್ನು ಆಕ್ರಮಿಸಿದ ಸಂಸ್ಥಾನ ಶಾಖೆಯ ಕ್ಷೇತ್ರವು ತೀರ ಮರ್ಯಾದಿತವಾಗಿರುವದೆಂದು ಸರದಾರ ಪಟೇಲರು ಹೊರಡಿಸಿದ ಇತಿಹಾಸ ಪ್ರಸಿದ್ಧ ಹೇಳಿಕೆಯಿಂದ ಮತ್ತು ಪ್ರತಿಯೊಂದು ಸಂಸ್ಥಾನದ ಅಂಕಿತವಿರುವ ಪ್ರವೇಶ ಪತ್ರದಿಂದ ಸ್ಪಷ್ಟವಾಗಿ ಕಂಡು ಬರುತ್ತದೆ.

ಸಂಸ್ಥಾನಿಕರ ದುರ್ಮನೀಷೆ

ಸಂಸ್ಥಾನಗಳ ಕ್ಷೇತ್ರ ಮತ್ತು ಆಂತರಿಕಆಡಳಿತದಲ್ಲಿಸಂಸ್ಥಾನಶಾಖೆಗೆ ಎಳ್ಳಷ್ಟೂಬದಲಾವಣೆ ಮಾಡಲು ಅಧಿಕಾರವಿಲ್ಲ. ಒಕ್ಕೂಟ್ಯಸರಕಾರವು ಸಂಸ್ಥಾನಗಳ ಸಂರಕ್ಷಣೆಯ ಹೊಣೆಯನ್ನು ಏನೂ ಪ್ರತಿಫಲವಿಲ್ಲದೆ ತಾನೇ ವಹಿಸಿಕೊಂಡಿದೆ. ಒಕ್ಕೂಟದಲ್ಲಿ ಪ್ರವೇಶಿಸಲಿಚ್ಛಿಸುವ ಸಂಸ್ಥಾನದೊಡನೆ ಮಾಡಿಕೊಂಡ ಯಥಾಸ್ಥಿತಿ ಒಪ್ಪಂದಗಳು ಊರ್ಜಿತದಲ್ಲಿ ಉಳಿಯುವವು. ಒಕ್ಕೂಟದಲ್ಲಿ ಸೇರಲು ಎಷ್ಟೋ ಸಂಸ್ಥಾನಗಳು ಸುಲಭವಾಗಿ ಒಪ್ಪಲಿಲ್ಲ. ಸಂಸ್ಥಾನಿಕರಿಗೆ ಅನಾಯಾಸವಾಗಿ ಸ್ವಾತಂತ್ರ್ಯ ದೊರೆಯಿತು. ಅದಕ್ಕೆ ಪಾತ್ರರಲ್ಲದವರೂ ಅದಕ್ಕಾಗಿ ಕಷ್ಟಪಡದವರೂ ಆದ ಸಂಸ್ಥಾನಿಕರಿಗೆ ತಮಗೆ ಇನ್ನು ಮೇಲೆ ಮನಬಂದಂತೆ ವರ್ತಿಸಲು ಅಧಿಕಾರ ದೊರೆಯಿತು ಎಂಬ ಭಾವನೆಯಾಗಿ ಸಂಸ್ಥಾನಾಧಿಪರ ಕಣ್ಣು ನೆತ್ತಿಗೇರಿದವು. ತಿರುವಾಂಕೂರು ಸಂಸ್ಥಾನವು ಒಕ್ಕೂಟದಲ್ಲಿ ಸೇರಲು ಒಪ್ಪಬೇಕಾದರೆ ಆ ಸಂಸ್ಥಾನದ ಪ್ರಜೆಗಳ ಹಾಗೂ ಒಕ್ಕೂಟ ಸರಕಾರದ ತಾಳ್ಮೆಯ ಪರೀಕ್ಷೆಯಾಗುವಂತಾಯಿತು. ಭೋಪಾಳ ನವಾಬರು ತಮ್ಮದೇ ಆದ ಒಂದು ಸ್ವತಂತ್ರ ಹಂಚಿಕೆಯನ್ನೇ ಹಾಕಿ ಪಾಕಿಸ್ತಾನದ ವರೆಗೆ ಭೋಪಾಳದಿಂದ ಸ್ವತಂತ್ರ ಸಂಸ್ಥಾನಗಳ ಒಂದು ಕೂ[illegible] ಪಟ್ಟಿಯನ್ನೇ ನಿರ್ಮಾಣ ಮಾಡಲು ಇಚ್ಛಿ[illegible] [illegible]ನಾಳ ನವಾಬರು ಮುಸ್ಲಿಂ ಲೀ[illegible] [illegible]ದನ್ನು ಮರೆಯಬಾರದು. ಕಡೆಗೆ ಅವರ ಮನಸ್ಸಿನ ಮಂಡಿಗೆಗಳೆಲ್ಲ ಗಾಳಿಗೋಪುರವಾದ ನಂತರವೇ ಅವರು ಅನಿವಾರ್ಯವಾಗಿ ಒಕ್ಕೂಟದಲ್ಲಿ ಬಂದು ಸೇರಿದರು. ಮೈಸೂರು ಕೂಡ ಒಕ್ಕೂಟದಲ್ಲಿ ಸೇರುವ ಬಗೆಗೆ ಬಹಳ ಹೊಯ್ದಾಟದ ಮತ್ತು ಜಿಪುಣತನದ ಧೋರಣವನ್ನು ವಹಿಸಿತ್ತು. ಅಂತೂ ಕೊನೆಗೆ ಹೈದರಾಬಾದು ಸಂಸ್ಥಾನವೊಂದನ್ನು ಬಿಟ್ಟು ಉಳಿದ ಸಂಸ್ಥಾನಗಳೆಲ್ಲ ಪ್ರವೇಶಪತ್ರಕ್ಕೆ ಸಹಿ ಹಾಕಿ ತಮ್ಮ ಪ್ರತಿನಿಧಿಗಳನ್ನು ಘಟನಾ ಸಮಿತಿಗೆಕಳುಹಿದವು. ಹೈದರಾಬಾದು ಅಪವಾದವಾಗಿ ಉಳಿದ ಒಂದೇ ಒಂದು ಸಂಸ್ಥಾನವಾಗಿದ್ದರೂ ಹಿಂದುಸ್ತಾನ ಒಕ್ಕೂಟದಲ್ಲಿ ಅದು ಬೇಗನೆ ಸೇರದಿದ್ದರೆ ಇಡೀ ಹಿಂದುಸ್ತಾನವನ್ನೇ ಅದು ತೊಡಕಿನಲ್ಲಿ ಸಿಗಿಸಬಹುದು. ದಕ್ಷಿಣ ಹಿಂದುಸ್ತಾನದಲ್ಲಿ ಅದು ಮುಸಲ್ಮಾನ ಪ್ರಭುವಿನ ಒಡೆತನದಲ್ಲಿರುವ ಸಂಸ್ಥಾನವು. ಹೈದರಾಬಾದು ಸಂಸ್ಥಾನದಜನಸಂಖ್ಯೆಯು ೧ ಕೋಟಿ ೨೫ ಲಕ್ಷಕ್ಕೆ ಮಿಕ್ಕಿದೆ. ಅದರಲ್ಲಿ ಮುಸಲ್ಮಾನರ ಸಂಖ್ಯೆ ನೂರಕ್ಕೆ ೧೨ರಷ್ಟು ಮಾತ್ರ ವಿರುವುದಲ್ಲದೆ ಅವರು ಅಶಿಕ್ಷಿತರೂ ಧರ್ಮಾಂಧರೂ ಆಗಿದ್ದಾರೆ. ಸಂಸ್ಥಾನದ ಮುಖಂಡತ್ವವು ಆ ಧರ್ಮಾಂಧರಾದ ಮುಸಲ್ಮಾನರ ಕಡೆಗೆ ಇದ್ದು ಅವರು ನಿಜಾಮರನ್ನು ಸಹ ಹೆದರಿಕಲು ಹಿಂದು ಮುಂದೆ ನೋಡುವದಿಲ್ಲ. ಈ ಮುಸಲ್ಮಾನ ಮುಖಂಡರ ತಂಡವೇ ಪ್ರಗತಿಪರ ವಿಚಾರ, ಉದಾರಧೋರಣೆ ವಹಿಸಿದ ಅಪರಾಧಕ್ಕಾಗಿ ಸರ್ ಮಿರ್ಜಾ ಇಸ್ಮಾಯಿಲರು ಹೈದರಾಬಾದಿನಲ್ಲಿ ಕಾಲೂರಿ ನಿಲ್ಲದಂತೆ ಮಾಡಿ ಓಡಿಸಿದ್ದು. ಹೈದರಾಬಾದು ಒಕ್ಕೂಟದಲ್ಲಿ ಸೇರುವದಾಗಲಿ, ಹೊಣೆಗಾರ ಸರಕಾರ ಕೊಡುವ ಮಾತೆತ್ತುವದಾಗಲಿ, ಕೆಂಡರೆ ಈ ಗುಂಪಿನವರಿಗೆ ಪಿತ್ತಪ್ರಕೋಪವಾಗುವದು. ಈ ಗುಂಪಿನ ಜನರು "ಇಸ್ಲಾಮಕ್ಕೆ ಗಂಡಾಂತರ", "ಹೈದರಾಬಾದ ಸಂಸ್ಥಾನದ ಮುಸಲ್ಮಾನರ ಹಿತಸಂಬಂಧಗಳಿಗೆ ಧಕ್ಕೆ" ಎಂಬ ಹುಯಿಲೆಬ್ಬಿಸಿ ಉಳಿದ ಮುಸಲ್ಮಾನರು ಇವರು ಹಾಕಿದ ತಾಳಕ್ಕೆ ಸರಿಯಾಗಿ ಕುಣಿಯುವಂತೆ [illegible]ಮಾಡುವ ಕಲೆ ಸಾಧಿಸಿಕೊಂಡಿದ್ದಾರೆ. ಬಹುತರ [illegible]ಯೊಬ್ಬ ಮುಸಲ್ಮಾನನೂ ಸಶಸ್ತ್ರನಾಗದ್ದು [illegible] ಸರಕಾರದ, ಪಕೆ ಬುದ್ಧಿ ನಿಜಾಮರ, [illegible] ದ ಪಡ[illegible]ವನೆಂದು ಭಾವಿಸುತ್ತಾನೆ. ಯಾವದೆ.

ತರದ ರಾಜಕೀಯ ಚಟುವಟಿಕೆ ಇರಲಿ, ಅಥವಾ ಸಾಮಾನ್ಯ ನಾಗರಿಕ ಹಕ್ಕಿಗಾಗಿ ಹೋರಾಟವಿರಲಿ, ಕೂಡಲೇ ಅದಕ್ಕೆ ಜಾತೀಯತೆಯ ಸ್ವರೂಪ ಬರುತ್ತದೆ. ಹೀಗಾಗಿ ನೂರಕ್ಕೆ ೮೮ ರಷ್ಟು ಇರುವ ಹಿಂದು ಜನರು ಒಂದು ಬದಿಗೆ, ಕೇವಲ ಉಳಿದ ೧೨ ರಷ್ಟು ಅತೀವ ಧರ್ಮಾಂಧರಾದ ಮುಸ್ಲಿಮರ ಗುಂಪಿನ ವಶವಾದ ನಿಜಾಮರೊಂದು ಬದಿಗೆ ಹೀಗೆ ಹೋರಾಟ ನಡೆದಿದೆ. ಆ ಗುಂಪಿನವರಿಗೆ ಪಾಕಿಸ್ತಾನ ಪ್ರಚಾರಕರ ಸಹಾನುಭೂತಿಯು ಇದೆ ಎಂದು ಕಾಣುತ್ತದೆ. ಅದರಿಂದ ಪರಿಸ್ಥಿತಿಯು ಮತ್ತಷ್ಟು ಭೀಕರವಾಗಿದೆ. ಹೈದರಾಬಾದು ಒಕ್ಕೂಟದಿಂದ ಹೊರಗೆ ಉಳಿದು ಹಿಂದುಸ್ತಾನ ಪಾಕಿಸ್ತಾನಗಳ ಕೂಡ ಸ್ವತಂತ್ರ ಸಂಬಂಧವನ್ನು ಇಟ್ಟುಕೊಳ್ಳುವದೆಂದೂ ತಾನು ಸ್ವತಃ ಸ್ವತಂತ್ರವಾಗಿಯೇ ಉಳಿಯುವದೆಂದೂ ಸಾರಿದೆ.

ವಿಚಿತ್ರ ನ್ಯಾಯ

ಇನ್ನು ಕೇವಲ ಮೂರೇ ೭೦ಯುಕ್ತ ವಿಷಯಗಳ ಬಗ್ಗೆ ಒಕ್ಕೂಟಕ್ಕೆ ಸೇರಿದ ಇತರ ಸಂಸ್ಥಾನಗಳು ಘಟನಾಸಮಿತಿಗೆ ತಮ್ಮ ಪ್ರತಿನಿಧಿಗಳನ್ನು ಕಳಿಸಿವೆ. ಆವಾದರೂ ಯಾವ ಹೊಣೆಯೂ ಇಲ್ಲದೆ ಪ್ರವೇಶ ಪಡೆದುಕೊಂಡಿವೆ. ಹೊಸ ರಾಜ್ಯ ಘಟನೆಯನ್ನು ರಚಿಸುವದರಲ್ಲಿ ಅವು ಭಾಗವಹಿಸುತ್ತಿರುವದೇನೊ ನಿಜ; ಆದರೆ ಸ್ವತಃ ಮನಬಂದಂತೆ ವರ್ತಿಸಲು ಅವರು ಸ್ವತಂತ್ರರಿದ್ದಾರೆ. ಘಟನಾ ಸಮಿತಿಯೋ ಈಗ ಕೇಂದ್ರ ಶಾಸನಸಭೆಯಾಗಿದ್ದು, ಕಾಂಗ್ರೆಸು ಈ ಸಂಸ್ಥಾನೀ ಪ್ರತಿನಿಧಿಗಳಿಗೆ ತಮ್ಮ ಉದಾರ ಧೋರಣೆಯಿಂದ, ಒಕ್ಕೂಟ ವಿಧಿಮಂಡಳದ ಸದಸ್ಯನ ಎಲ್ಲ ಸ್ಥಾನಮಾನಗಳನ್ನು ಕೊಟ್ಟಿದ್ದರೂ ತಾವೆಲ್ಲರೂ ಕೂಡಿಯೇ ಪಾಸು ಮಾಡಿದ ಕಾನೂನಿನಂತೆ, ತಮ್ಮ ಸಂಸ್ಥಾನದಲ್ಲಿ ನಡೆಯಲು ನಿರಾಕರಿಸಲಿಕ್ಕೆ ಅವರು ಸ್ವತಂತ್ರರಿರುವರು! ಇದೊಂದು ವಿಚಿತ್ರ ನ್ಯಾಯ! ಆದರೂ ಅದು ಅನಿವಾರ್ಯ. ಬ್ರಿಟಿಶರು ತಮ್ಮ ಸಾರ್ವಭೌಮತ್ವವನ್ನು ಕೊನೆಗೊಳಿಸುವದಕ್ಕಿಂತ ಮುಂಚೆ ಈ ಹೂಲಿಯನ್ನೆಬ್ಬಿಸಿ ಹಿಂದೀ ಒಕ್ಕೂಟದ ಮುಂದೆ ಈ ಸಂಸ್ಥಾನಗಳ ಬಿಕ್ಕಟ್ಟನ್ನು ಒಡ್ಡಿ ಹೋಗಿದ್ದಾರೆ.

ಸಂಸ್ಥಾನ ಪ್ರಜೆಗಳ ಸ್ಥಿ[illegible] ಬದಲಾವಣೆಯಿಲ್ಲ

ಇಷ್ಟು ಹೊತ್ತಿನ ವರೆಗೆ ಈ ಸಂಸ್ಥಾನಗಳ ಸಮಸ್ಯೆಯನ್ನು ಹಿಂದೀ ಒಕ್ಕೂಟದ ದೃಷ್ಟಿಯಿಂದ ಅಥವಾ ಹಿಂದೀ ಘಟನಾ ಸಮಿತಿಯ ಮತ್ತು ಈಗಿನ ಶಾಸನ ಮಂಡಳದ ದೃಷ್ಟಿಕೋನದಿಂದ ಚರ್ಚಿಸಲಾಯಿತು. ಆದರೆ ಸಂಸ್ಥಾನ ಪ್ರಜೆಗಳಸ್ಥಿತಿಯನ್ನು ತಿಳಿದುಕೊಳ್ಳುವದುಅತ್ಯಂತ ಮುಖ್ಯವಾದ ವಿಷಯ. ಹಾಗೆಹೇಳುವದಾದರೆ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಸಿಗುವಪೂರ್ವದಲ್ಲಿ ಅವರು ಯಾವಸ್ಥಿತಿಯಲ್ಲಿದ್ದರೋಅದೇ ಸ್ಥಿತಿಯಲ್ಲಿಯೇ ಈಗಲೂ ಅವರಿದ್ದಾರೆ. ಗಡಿಯಾಚೆಗಿನಪ್ರತಿಯೊಬ್ಬಭಾರತೀಯನೂ ಸ್ವತಂತ್ರನಾಗಿ ಸ್ವತಂತ್ರ ನಾಗರಿಕನಿಗೆ ಸಲ್ಲತಕ್ಕ ಎಲ್ಲ ಹಕ್ಕುಬಾಧ್ಯತೆಗಳನ್ನು ಪಡೆದಿರುವಾಗ ಎಲ್ಲ ಸಂಸ್ಥಾನದ ಪ್ರಜೆಗಳೂ ಇನ್ನೂ ಅಲ್ಲಿಯ ಹಳೆಯ ನಿರಂಕುಶ ಪ್ರತಿಗಾಮಿ ಆಳಿಕೆಯಲ್ಲಿಯೇ ಕೊಳೆಯುತ್ತಿದ್ದಾರೆ. ಸಂಸ್ಥಾನಪ್ರಜೆಗಳಲ್ಲನೇಕರು ಭಾರತ ಸ್ವಾತಂತ್ರ್ಯದ ಹೋರಾಟದಲ್ಲಿ ನಮ್ಮ ಹೆಗಲಿಗೆ ಹೆಗಲು ಹಚ್ಚಿ ಹೋರಾಡಿದರು. ಅವರ ಸಹಾಯದಿಂದಲೇ ನಮಗೆ ದಾಸ್ಯಶೃಂಖಲೆಯನ್ನು ಕಡಿದೊಗೆಯಲು ಹೆಚ್ಚು ಸುಲಭವಾಯಿತು. ಆದರೆ ಈಗ ಒಂದು ತರದ ರಾಜಕೀಯ ವಿರೋಧಾಭಾಸದಿಂದ ಸಂಸ್ಥಾನಾಧಿಪರೇ ಹೆಚ್ಚು ನಿರಂಕುಶರಾಗಿದ್ದು ಅವರ ಪ್ರಜೆಗಳು ಇನ್ನೂ ಹಾಗೇ ಹಳೆಯ ರಾಡಿಯಲ್ಲಿಯೇ ಕೊಳೆಯುತ್ತಿದ್ದಾರೆ. ಈ ಜನರಿಗೆ ಶಕ್ಯವಿದ್ದ ಎಲ್ಲ ಸಹಾಯವನ್ನು ಕೊಡಲು ಇಂದಿನ ಸ್ವತಂತ್ರ ಭಾರತವೂ ಸ್ವತಂತ್ರವಿಲ್ಲ. ಸಂಸ್ಥಾನಾಧಿಪತಿಗಳು ತಮ್ಮ ನಿರಂಕುಶ ಹಕ್ಕು ಬಾಧ್ಯತೆಗಳನ್ನು ಕಾಯ್ದುಕೊಂಡೇ ಒಕ್ಕೂಟದ ಪ್ರವೇಶ ಪತ್ರಕ್ಕೆ ಸಹಿ ಹಾಕಿರುವರು.

ಆದರೆ ಸಂಸ್ಥಾನೀ ಪ್ರಜೆಗಳು ಪರಿಸ್ಥಿತಿಗೆ ತಲೆಬಾಗದೆ ಹೋರಾಡಲಿ. ಇಂದು ಸ್ವತಂತ್ರ ಭಾರತ ಸರಕಾರಕ್ಕೆ ಸಾಧ್ಯವಿಲ್ಲದಿದ್ದರೂ ಸ್ವತಂತ್ರಭಾರತದ ಪ್ರಜೆಗಳು ತಮ್ಮ ಸಂಸ್ಥಾನ ಬಾಂಧವರನ್ನು ಸದ್ಯದ ನಿರಂಕುಶ ಆಡಳಿತದ ಬಂಧನದಿಂದ ಸಂಪೂರ್ಣವಾಗಿ ಮುಕ್ತ ಮಾಡಲು ಎಲ್ಲ ಸಹಾಯವನ್ನು ಮಾಡುವರು. ಹೈದ್ರಾಬಾದು ಮತ್ತು ಮೈಸೂರು ಸಂಸ್ಥಾನಗಳಲ್ಲಿ ಹೋರಾಟವು ಈಗಾಗಲೇ ಪ್ರಾರಂಭವಾಗಿದ್ದು ಅಲ್ಲಿಯ ಪ್ರಜೆಗಳು ಅತ್ಯಂತ ಧೈರ್ಯದಿಂದ ಅದನ್ನು ಸಾಗಿಸುತ್ತಿದ್ದಾರೆ. ಕೊಚ್ಚಿ ಮುಂತಾದ ಕೆಲವು ಸಂಸ್ಥಾನಗಳನ್ನು ಬಿಟ್ಟರೆ ಸಂಸ್ಥಾನದ ಪ್ರಜೆಗಳಿಗೆ, ಕಷ್ಟನಷ್ಟಗಳನ್ನು ಸಹಿಸಿ ಧೈರ್ಯದಿಂದ ಹೋರಾಡದ ವಿನಾ ಅವರ ಜನ್ಮಸಿದ್ಧಹಕ್ಕಾದ ಹೊಣೆಗಾರ ಸರಕಾರವನ್ನು ದೊರಕಿಸುವದು ದುಸ್ತರವಾಗಿ ಕಾಣುತ್ತದೆ. ಒಂದು ದೃಷ್ಟಿಯಿಂದ ನೋಡಲಾಗಿ ಇದು ಉತ್ತಮವೆ. ಏಕೆಂದರೆ ಪ್ರತಿಗಾಮಿ ಶಕ್ತಿಗಳನ್ನೆಲ್ಲ ಜಯಿಸಿ ಸಂಪಾದಿಸಿದ ಸ್ವಾತಂತ್ರ್ಯವೇ ನಿಜವಾದ ಸ್ವಾತಂತ್ರ್ಯವು. ಆದರೆ ಅತ್ಯುಚ್ಚ ಭಾವನೆಗಳಿಂದ ಪ್ರೇರೇಪಿಸಲ್ಪಟ್ಟ ಪವಿತ್ರ ಉದ್ದೇಶಕ್ಕಾಗಿ ನಿರ್ಮಲ ಹಸ್ತದಿಂದ ಮತ್ತು ಖ್ಯಾತಿವೆತ್ತ ಅಹಿಂಸೆಯ ಅಸ್ತ್ರದಿಂದಲೇ ಇಂಥ ಹೋರಾಟವನ್ನು ಕೈಕೊಳ್ಳಬೇಕು. ಯಶಸ್ಸು ಖಂಡಿತವಾಗಿ ಪ್ರಾಪ್ತಿಯಾಗಬೇಕಾದರೆ ಇದು ಅವಶ್ಯವು. ಸ್ವತಂತ್ರ ಹಿಂದುಸ್ತಾನದ ಪ್ರಜೆಯು ಅದರಲ್ಲಿ ತಾನು ಭಾಗವಹಿಸಬೇಕಾದರೂ ಅದು ಅವಶ್ಯವು. ಹಿಂದೀ ಒಕ್ಕೂಟದ ನೈತಿಕ ಬೆಂಬಲವು ದೊರಕಬೇಕಾಗಿದ್ದರೆ ಅದು ಬೇಕು. ಮತ್ತು ಕಡೆಗೆ, ಹಿಂದುಸ್ತಾನಕ್ಕೂ ಸಂಸ್ಥಾನದ ಪ್ರಜೆಗಳಿಗೂ ಅದರಿಂದ ಏನಾದರೂ ನಿಜವಾದ ಲಾಭವಾಗಬೇಕಾದಲ್ಲಿ ಅದು ಅತ್ಯಂತ ಅವಶ್ಯವು. ಇಂಥ ಹೋರಾಟಗಳು ಬೇರೆ ಬೇರೆ ಸಂಸ್ಥಾನಗಳಲ್ಲಿ ಆರಂಭವಾಗಿ ಸರಿಯಾದ ಮಾರ್ಗದಲ್ಲಿ ನಡೆದರೆ ಸ್ವಲ್ಪ ವರ್ಷಗಳಲ್ಲಿ ಹಿಂದುಸ್ತಾನದ ಪ್ರಜಾರಾಜ್ಯದ ಕೂಡ ಹೆಜ್ಜೆ ಹಾಕಿ ನಡೆಯಲಾರದ ಪ್ರತಿಗಾಮಿ ಸ್ವರೂಪದ ಒಂದಾದರೂ ಸಂಸ್ಥಾನವನ್ನು ಕಾಣುವದು ದುಸ್ತರವಾಗುವದು.

ಸಾದರ ಸ್ವೀಕಾರ

೧. ಮುಗುಳು ನಗೆ

ಲೇಖಕರು— ಜಬಿಚ್ ಪ್ರಕಾಶಕರು— ಶಾರದಾ ಪ್ರಕಟನಾಲಯ ಅರಳೇಪೇಟೆ ಬೆಂಗಳೂರ ನಗರ. ಪುಟಗಳು—೧೦೦ ಬೆಲೆ— ೧-೪-೦

೨. ಋಷ್ಯಶೃಂಗ---ಕರ್ಣ

ಲೇಖಕರು— ರಾ. ಸೊ. ಮಣಿ. ಪ್ರಕಾಶಕರು— ಸಾಹಿತ್ಯ ಮಂದಿರ ಮೈಸೂರ. ಪುಟಗಳು—೫೦ ಬೆಲೆ. ೦-೮-೦.

೩. ಅನ್ನದಾತ (ಶ್ರೀಕೃಷ್ಣಚಂದ್ರರು)

ಲೇಖಕರು— ವೀ. ಚ. ಹಿತ್ತಲಮನಿ. ಪ್ರಕಾಶಕರು—ಮಾಧವ ಬಲ್ಲಾಳ ಬಂಧುಗಳು ಸಾಧನಕೆರೆ, ಧಾರವಾಡ. ಪುಟಗಳು— ೫೦ ಬೆಲೆ. ೧-೪-೦.

೪. ಇಂದ್ರಜಾಲ

ಲೇಖಕರು— ನವಗಿರಿನಂದ ಪ್ರಕಾಶಕರು— ಪ್ರತಿಭಾಗ್ರಂಥಮಾಲೆ, ಧಾರವಾಡ. ಪುಟಗಳು ३६೦ ಬೆಲೆ. ೪-೦.೦.

— ಬ್ರಹ್ಮದೇಶವು ೧೯೪೮ ನೆಯ ಜನವರಿ ೨ ರಲ್ಲಿ ಸ್ವತಂತ್ರವಾಗಬೇಕೆಂದು ಬ್ರಿಟಿಶ ಮಂತ್ರಿಮಂಡ[illegible] ನಿರ್ಧರಿಸಿದೆ.

ಶ್ರಮಜೀವಿಗಳ ಪಾಡು

ಲೇ— ಒಬ್ಬ ಸಂತ್ರಸ್ತ ಶ್ರಮಜೀವಿ

ನಮ್ಮ ಮಾದರಿಯ ಮೈಸೂರಲ್ಲಿ ಅನೇಕ ಕೈಗಾರಿಕೆ ಕಾರಖಾನೆಗಳಿವೆ. ಭದ್ರಾವತಿ ಉಕ್ಕಿನ ಕಾರಖಾನೆ, ಎಲೆಕ್ಟ್ರಿಕ್ ಫ್ಯಾಕ್ಟರಿ, ಪೋರ್ಸಲೈನ್ ಫ್ಯಾಕ್ಟರಿ, ಇಂಡಸ್ಟ್ರಿಯಲ್ ವರ್ಕ ಶಾಪ್, ಇಂಪ್ಲಿಮೆಂಟ ಫ್ಯಾಕ್ಟರಿ, ಪೇಪರ ಮಿಲ್ಸ, ಸಿಮೆಂಟ್ ವರ್ಕ್ಸ, ಪ್ರಿಂಟಿಂಗ ಪ್ರೆಸ್, ಸಿಲ್ಕ ಫ್ಯಾಕ್ಟರಿ, ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ, ಮ್ಯಾಚ್ ಫ್ಯಾಕ್ಟರಿ, ಲ್ಯಾಕ್ ವರ್ಕ್ಸ ಇವೇ ಮುಂತಾದವುಗಳು.

ಒಟ್ಟು ಕಾರಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಸುಮಾರು ३೦೦೦೦ ಮಂದಿ ಎಂದು ಹೇಳಿದರೆ ತಪ್ಪಾಗಲಾರದು. ಪ್ರತಿಯೊಂದು ಕಾರಖಾನೆಯಲ್ಲೂ ಕೆಲಸಗಾರರ ಹಿತ ರಕ್ಷಣೆಗಾಗಿ ಸಂಘಗಳನ್ನು ಏರ್ಪಡಿಸಿಕೊಳ್ಳಲು ಮೇಲಧಿಕಾರಿಗಳು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಈ ಸಂಘಗಳ ಕಾರ್ಯದರ್ಶಿಗಳು ಮತ್ತು ಸದಸ್ಯರು ಕೆಲಸಗಾರರಿಂದ ಚುನಾಯಿತರಾದಾಗ್ಯೂ ಲೇಬರ್ ಕಮೀಶನ್ನರವರ ಅನುಮತಿಯಿಂದ ಸದಸ್ಯತ್ವವನ್ನು ಪಡೆದಿರುವರು. ಈ ಸಂಘಗಳು ಇತರ ಸಂಘಗಳೊಡನೆ ಯಾವ ವಿಧವಾದ ಸಂಪರ್ಕವನ್ನು ಹೊಂದಲೂ ಮತ್ತೊಂದು ಸಂಘದೊಡನೆ ವ್ಯವಹರಿಸಲೂ ಅವಕಾಶವನ್ನೇ ಹೊಂದಿಲ್ಲ. ಹಾಗೇನಾದರೂ ವ್ಯವಹರಿಸಿದ್ದೇ ಆದರೆ ಲೇಬರ್ ಆಕ್ಟಿನ ಬ್ರಹ್ಮಾಸ್ತ್ರವನ್ನು ಉಪಯೋಗಿಸಿ ಸಂಘವನ್ನೇ ಭೂಗತ ಮಾಡಲು ಸರಕಾರದವರು ಉದ್ಯುಕ್ತರಾಗುವರು. ಇದರಿಂದ ಸಂಘಗಳು ಅನೇಕ ತೊಂದರೆಗಳಿಗೀಡಾಗಿವೆ. ಹೇಗೆಂದರೆ ಸಂಘಗಳು ಒಂದರೊಡನೊಂದು ಕಲೆಯುವದರಿಂದಲೂ ಅವುಗಳೊಡನೆ ವ್ಯವಹರಿಸುವುದರಿಂದಲೂ ಸಂಘಗಳ ಅಭಿವೃದ್ಧಿ ಕೆಲಸಗಾರರ ಹಿತಸಂರಕ್ಷಣೆಗಳು ಹೆಚ್ಚು ಸುಸಂಗತವಾಗಿ ನಡೆಯಲು ಅನುದೊರಕುತ್ತದೆ. ಕೆಲಸಗಾರನಿಗೆ ಕೊಡುತ್ತಿರುವ ವೇತನವನ್ನು ೧೯೪೨ ನೇ ಇಸ್ವಿಯೊಂದಿಗೆ ಹೋಲಿಸಿ ನೋಡಿದರೆ ತಲೆಗೆ ವರ್ಷಕ್ಕೆ ಸರಾಸರಿ ೧೦ ರೂ. ಗಳು ಬೀಳುವುವೆಂದು ಹೇಳಿದರೆ ತಪ್ಪಿಲ್ಲ. ಇದು ಎಲ್ಲರಿಗೂ ತಿಳಿದ ವಿಷಯ. ಇದರಿಂದ ಕೆಲಸಗಾರನ ಜೀವನವು ಎಷ್ಟು ಸುಗಮವಾಗಿ ನಡೆಯಬಹುದೆಂಬುದನ್ನು ಸರ್ಕಾರದವರೆ ಊಹಿಸಿಕೊಳ್ಳಬಹುದು. ಈ ಕಾರ್ಮಿಕರು ಯಾವ ಸ್ಥಿತಿಯಲ್ಲಿದ್ದಾರೆಂಬುದನ್ನು ಅವರೇ ತಿಳಿದುಕೊಳ್ಳಬಹುದು.

ಇಂದಿನ ಕೆಲಸಗಾರನೇ ಕೈಗಾರಿಕೆಯ ಕಾರಖಾನೆಯ ಬೆನ್ನು ಮೂಳೆ (Worker is the back bone of industrial concerns) ಇವನಿಗೆ ಜೀವನವನ್ನು ಸಾಗಿಸಲು ಸಾಧ್ಯವಿಲ್ಲದಿರುವಾಗ ದೇಶಕ್ಕಾಗಿ ದುಡಿಯಲು ಹೇಗೆ ತಾನೇ ಪ್ರಯತ್ನಿಸಿ ಯಶಸ್ವಿಯಾದಾನು? ಮೂಗಿಗೆ ಕವಡೆ ಕಟ್ಟಿಕೊಂಡು ३೦ ದಿನದ ಜೀತ ಮಾಡಿದಲ್ಲಿ ಅವನು ಶೇಖರಿಸುವುದೆಷ್ಟು? ಋಣ ಭಾರ ಮತ್ತು ಕಷ್ಟಪರಂಪರೆಗಳ ಸುರಿಮಳೆ! ಸರಕಾರಿ ಉದ್ಯೋಗಸ್ಥರಿಗಾಗಿ ವೇತನ ಸಮಿತಿಯವರು ಒಂದು ಯೋಜನೆಯನ್ನು ಸಿದ್ಧಗೊಳಿಸಿ ಅದನ್ನು ಸರಕಾರೀ ಗೆಜೆಟ್ಟಿನಲ್ಲಿ ಪ್ರಕಟಿಸಿದ್ದಾರೆ. ಈ ಪ್ರಕಟಣೆಯು ವಿದ್ಯಾವಾಣಿಜ್ಯಾದಿ ಅನೇಕ ಇಲಾಖೆಗಳಿಗೆ ಅನ್ವಯಿಸುತ್ತದೆ.

ಆದರೆ ಕೈಗಾರಿಕೆಯ ಕಾರಖಾನೆಗಳ ವಿಷಯವೇ ಅದರಲ್ಲಿಲ್ಲ. ಕೆಲವು ತಿಂಗಳುಗಳ ಹಿಂದೆ ಪೇ ಕಮಿಷನ್ನಿನವರು ಅಪೇಕ್ಷಿಸಿದ್ದಂತೆ ಕೈಗಾರಿಕೆಯ ಕಾರಖಾನೆಗಳ ಅಧಿಕಾರಿಗಳು ಕೈಗಾರಿಕೆಯ ಕೇಂದ್ರಗಳಿಂದ ಕೆಲಸಗಾರರ ಪಟ್ಟಿಯನ್ನು ಎಲ್ಲಾ ಕಾರಖಾನೆಗಳಿಂದಲೂ ಕಳುಹಿಸಿದ್ದರೆಂಬವದಂತಿ. ಈ ವದಂತಿಯನ್ನೇ ಆಧಾರವಾಗಿಟ್ಟುಕೊಂಡು ಪೇ ಕಮಿಷನ್ ವರದಿಯನ್ನು ಹಗಲೂ ರಾತ್ರಿ ಕಣ್ಣಿಗೆ ಎಣ್ಣೆಹಚ್ಚಿಕೊಂಡು ಎದುರು ನೋಡಿದ್ದೂ ನೋಡಿದ್ದೇ— ಕಾದಿದ್ದೂ ಕಾದಿದ್ದೇ! ಆದರೆ ಬಂದದ್ದು ಏನು?

ಕೆಲಸಗಾರರ ಹಿತಚಿಂತನೆಗಾಗಿ, ದೇಶದ ಏಳಿಗೆಗಾಗಿ, ಕೈಗಾರಿಕೆಯ ಅಭಿವೃದ್ಧಿಗಾಗಿ, ಇಂದಿನ ಯೋಜನೆಗಳ ಫಲಕಾರಿತ್ವಕ್ಕಾಗಿ, ಮುಖ್ಯವಾಗಿ ಸರಕಾರದ ಮತ್ತು ಜನತೆಯ ಹಿತಕ್ಕಾಗಿ ಈ ಕೆಳಗೆ ಕಂಡ ಅಂಶಗಳಿಗೆ ಈಗಲಾದರೂ ಸರಕಾರಿ ಅಧಿಕಾರಿಗಳು ಮತ್ತು ದಿವಾನರು ಗಮನೆ ಕೊಟ್ಟು ಕಾರ್ಮಿಕರನ್ನು ಉದ್ಧರಿಸಬಲ್ಲರೇ?

೧) ನಾನ್ ಗಜೆಟೆಡ್ ಅಧಿಕಾರಿಗಳಿಗೂ ಇತರರಿಗೂ ಕೊಟ್ಟಿರುವಂತೆ ಕೆಲಸಗಾರನಿಗೆ ಈಗಿನ ದರದಲ್ಲಿ ಕೊಡುತ್ತಿರುವ ವೇತನವನ್ನು ನೂರಕ್ಕೆ ೫೦ರಂತೆ ಹೆಚ್ಚಿಸಬೇಕು.

೨) ತುಟ್ಟಿ ಭತ್ತೆಯನ್ನು ನೂರಕ್ಕೆ ೫೦ರಷ್ಟು ಹೆಚ್ಚಿಸಬೇಕು.

೩) ಮನೆ ಬಾಡಿಗೆ ಭತ್ತೆ ಕೊಡಬೇಕು.

೪) ಕೆಲಸಗಾರರಿಗೆಲ್ಲ ಗ್ರೇಡುಗಳನ್ನು ನಿಶ್ಚಯ ಮಾಡಿ ವರ್ಷ ವರ್ಷಕ್ಕೂ ವೇತನೋತ್ಕರ್ಷ ಕೊಡಬೇಕು.

೫) ತಾತ್ಕಾಲಿಕ ಪರಿಹಾರವಾಗಿ ಕನಿ[illegible] ३ ತಿಂಗಳ ವೇತನವನ್ನು ಪ್ರತಿಯೊಬ್ಬ [illegible]ಗಾರನಿಗೂ ಕೊಡಬೇಕು.

೬) ಕೈಗಾರಿಕೆಯ ಕಾರಖಾನೆಗಳೊಂದಿಗೆ ಸಂಘಗಳು ಸಂಪರ್ಕ ಹೊಂದಲು ಅವಕಾಶ ಕೊಡಬೇಕು. ಕೂಲಿಕಾರ ಮಹಾಮಂಡಲ ಏರ್ಪಡಿಸಿಕೊಳ್ಳಲು ಸರಕಾರವು ಅನುಮತಿ ಕೊಡಬೇಕು.

೮) ಅಧಿಕಾರಿಗಳು ಕೆಲಸಗಾರರ ಸಂಘದೊಂದಿಗೆ ಸಹಕರಿಸಿ ಕೆಲಸಗಾರರ ಹಿತ ರಕ್ಷಣೆ, ಕೈಗಾರಿಕೆಗಳ ಅಭಿವೃದ್ಧಿ ಇವಕ್ಕೆ ನೆರವಾಗುವಂತೆ ಮೇಲಧಿಕಾರಿಗಳಿಗೆ ಸಲಹೆಗಳನ್ನು ಕೊಡುವುದು. ಈ ಮೇಲ್ಕಂಡ ಅಂಶಗಳನ್ನು ಸರಕಾರದವರು ಗಣನೆಗೆ ತಂದುಕೊಂಡು ಇವುಗಳ ವಿಷಯವಾಗಿ ಪರ್ಯಾಲೋಚಿಸಿ ಬಡ ಕಾರ್ಮಿಕರ ಕಷ್ಟಗಳನ್ನು ನಿವಾರಿಸಲೋಸುಗ ಅತಿ ಶೀಘ್ರದಲ್ಲಿಯೇ ಒಂದು ಪ್ರಕಟನೆಯನ್ನು ಹೊರಡಿಸಲು ಉದ್ಯುಕ್ತರಾಗುವರೆಂದೂ ಮೇಲ್ಕಂಡ ಬೇಡಿಕೆಗಳ ಪ್ರತಿಯೊಂದು ಅಂಶವನ್ನೂ ಕಾರ್ಯರೂಪಕ್ಕೆ ತಂದು ಕಾರ್ಮಿಕರನ್ನು ಉದ್ಧರಿಸಲೋಸುಗ ಪಣ ತೊಡುತ್ತಾರೆಂದೂ ನಂಬಿ ಪ್ರಕಟಣೆಯನ್ನು ನಿರೀಕ್ಷಿಸುತ್ತೇನೆ.

ಕರ್ಮವೀರ ಹರಿಜನ ಪುರವಣಿ

ನಿರ್ವಿಣ್ಣತೆಯಿಲ್ಲ

(ಮೋ. ಕ: ಗಾಂಧಿ)

(ಗಾಂಧೀಜಿಯ ಜನ್ಮದಿನದಲ್ಲಿ ಬಂದ ಅಭಿನಂದನವೊಂದಕ್ಕೆ ಪ್ರತಿಯಾಗಿ ಅವರು ಕೊಟ್ಟ ಸಂದೇಶ.)

"ಇಂದಿನ ಪರಿಸ್ಥಿತಿ ನಿಮಗೆ ನಿರ್ವೇದವುಂಟು ಮಾಡಕೂಡದೆಂಬುದನ್ನು ನಾನು ಸೂಚಿಸಲೇ? ನನ್ನ ಮತದಂತೆ ಜಗತ್ತಿನ ಸಂಕಟವನ್ನು ಅಹಿಂಸೆಯ ಮೂಲಕ ನಿವಾರಿಸಬೇಕೆಂಬ ಭಾರತದ ಯೋಜನೆಯನ್ನು ಮುರಿಯಲು ಈ ಯತ್ನವನ್ನು ಕೊನೆಯದಾಗಿ ಕೇಡು ಹೂಡಿದೆ. ಆ ದಿವ್ಯೋದ್ದೇಶವನ್ನು ಸಾಧಿಸಲು ನೀವೇ ಜಗತ್ತಿನಲ್ಲಿ ಏಕಮೇವ ಸಾಧನ."

ಇದು ವಸ್ತುಸ್ಥಿತಿಯ ಜ್ಞಾನಕ್ಕಿಂತ ಹೆಚ್ಚಾಗಿ ವೈಯಕ್ತಿಕ ವಾತ್ಸಲ್ಯದಿಂದ ಬಿಟ್ಟ ತಂತಿ. ನೋಡೋಣ.

"ನಾನು ಇಂದು ನಿರ್ವಿಣ್ಣ ಮನಸ್ಕನಾಗಿರುವೆನೆಂದು ಹೇಳುವುದು ಬಹುಶಃ ತಪ್ಪು. ನಾನು ಕೇವಲ ವಸ್ತುಸ್ಥಿತಿಯನ್ನು ಹೇಳಿದ್ದೇನೆ. ದೇವರ ಉದ್ದೇಶವು ಕೇವಲ ನನ್ನ ಮೂಲಕ ಸಫಲವಾಗುವುದೆಂದು ಆಲೋಚಿಸುವಷ್ಟು ಗರ್ವ ನನಗಿಲ್ಲ. ಆದೂ ನನಗಿಂತ ಉಚಿತತರ ಸಾಧನ ಬಳಸಲ್ಪಡದಿರಬಹುದೆನ್ನುವುದೂ ಒಂದೇ ಸಮವೆನಿಸುತ್ತವೆ. ನಾನೊಂದು ದುರ್ಬಲ ಜನಾಂಗವನ್ನು ಪ್ರತಿನಿಧಿಸಿ ಒಳ್ಳೆಯವನಾಗಿದ್ದೇನೆ—ಬಲಿಷ್ಠವಾದುದನ್ನಲ್ಲ. ಆತ್ಯಂತಿಕ ಸಿದ್ಧಿಗೆ ನನಗಿಂತ ಹೆಚ್ಚು ಶುದ್ಧನೂ, ಧೀರನೂ, ದೂರದರ್ಶಿಯೂ ಆದ ಮನುಷ್ಯ ಅಗತ್ಯವೆಂಬುದು ನಿಜವಿರಬಹುದಲ್ಲವೇ? ಇದೆಲ್ಲ ಊಹೆ. ದೇವರನ್ನು ಇಂಥವನೆಂದು ನಿರ್ಣಯಿಸುವ ಶಕ್ತಿ ಯಾರಿಗೂ ಇಲ್ಲ. ನಾವೆಲ್ಲ ಅಮೇಯವಾದ ದಯಾಸಾಗರದ ಹನಿಗಳಷ್ಟೆ.

ಆದುದರಿಂದ ನಿಸ್ಸಂದೇಹವಾಗಿ ಅತ್ಯುತ್ತಮವಾದುದೆಂದರೆ— ೧೨೫ ವರ್ಷಬದುಕಬೇಕೆಂದ ಬಯಸುವುದೂ ಅಲ್ಲ, ಈಗಲೇ ಸಾಯಬೇಕೆಂಬುದೂ ಅಲ್ಲ. ದೈವೇಚ್ಛೆಗೆ ಸಂಪೂರ್ಣ ವಶವರ್ತಿಯಾಗಿರುವುದೇ ನನ್ನ ಕೆಲಸ. ಧ್ಯೇಯವು ನಿಜವಾದಾಗ ಧ್ಯೇಯವಾಗಿ ಉಳಿಯುವುದಿಲ್ಲ. ಅದಕ್ಕೆ ಆದಷ್ಟು ಸಮೀಪವರ್ತಿಯಾಗಲು ಯತ್ನಿಸುವುದಷ್ಟೆ ನಮಗೆ ಶಕ್ಯವಾದದ್ದು. ಇದನ್ನು ನಾನು ಯಥಾಶಕ್ತಿ ನಡೆಸುತ್ತಿದ್ದೇನೆ.

೧೨೫ ವರ್ಷ ಬದುಕಬೇಕೆಂಬ ನನ್ನ ಆಸೆಯನ್ನು ಪ್ರಕಟವಾಗಿ ಸಾರುವ ಮೂರ್ಖತೆ ನನಗಿದ್ದದ್ದು ನಿಜವಾದರೆ ಬದಲಾದ ಕಾಲದಲ್ಲಿ ಆ ಆಸೆಯನ್ನು ಬಿಟ್ಟುಬಿಡುವಷ್ಟು ನಮ್ರತೆಯೂ ನನಗಿರಬೇಕು. ನಾನು ಅದಕ್ಕಿಂತ ಹೆಚ್ಚಾಗಿಯಾಗಲಿ, ಕಡಿಮೆಯಾಗಿಯಾಗಲಿ ನಡೆದುಕೊಂಡಿಲ್ಲ. ಇದನ್ನು ನಿರ್ವಿಣ್ಣಮನಸ್ಕನಾಗಿ ನಿರ್ಧರಿಸಿಲ್ಲ. ಅದಕ್ಕಿಂತ ಯುಕ್ತವಾದ ಪದವೆಂದರೆ ಅಸಹಾಯತೆ. ಆ ಸ್ಥಿತಿಯಲ್ಲಿ ನಾನು—ಹೇ ಸರ್ವಶಕ್ತ, ತಾನು ಮುಸಲ್ಮಾನನೆಂದು ತನ್ನನ್ನು ಕರೆದುಕೊಂಬ ಬಿಂಕವುಳ್ಳವನಿರಲಿ ಹಿಂದುವೆಂಬ ಗರ್ವದವನಿರಲಿ— 'ಮನುಷ್ಯನು ಮಾಡುತ್ತಿರುವ ಕಟುಕ ಕೆಲಸ ಕ್ರೂರತರವಾಗುತ್ತಿರುವುದನ್ನು ಕೇವಲ ಅಸಹಾಯಸಾಕ್ಷಿಯಾಗಿ ನೋಡುತ್ತ ನಿಲ್ಲುವುದನ್ನು ತಪ್ಪಿಸಿ ಈ "ಕಣ್ಣೀರ್ಗಣಿವೆ"ಯಿಂದ ತೆಗೆದುಕೊಂಡು ಹೋಗಪ್ಪಾ—ಎಂದು ಆ ದೇವನ ಸಹಾಯಕ್ಕಾಗಿ ಪ್ರಾರ್ಥಿಸುತ್ತಿದ್ದೇನೆ. ಆದರೂ ನಾನು ಮೊರೆಯಿಡುತ್ತೇನೆ—'ನನ್ನದಲ್ಲ, ನಿನ್ನ ಇಚ್ಛೆಯೇ ಕಾರ್ಯಕಾರಿಯಾಗಲಿ' ಎಂದು. ಆತ ನಿಚ್ಛೆಯಿದ್ದರೆ ಇನ್ನೂ ಕೆಲಕಾಲ ನನ್ನನ್ನು ಈ ಭೂಮಿಯಲ್ಲಿ ಇಟ್ಟಿರುತ್ತಾನೆ.

ಹೊಸದಿಲ್ಲಿ,

೫-೧೦-೪೭

ಗಾಳಿಪಯಣವೋ, ಸಾರಿಗೆಯೋ ?

ದಿನಹೋದ ಹಾಗೆ- ಕೊನೆಯಪಕ್ಷ ಶ್ರೀಮಂತ ಜನರಲ್ಲಿ—ವಿಮಾನಪ್ರಯಾಣವು ಹೆಚ್ಚು ಹೆಚ್ಚಾಗಿ ಬಳಕೆಗೆ ಬರುತ್ತಿದೆ. ವಿಮಾನ ವಾಹನವನ್ನು ಜನಪ್ರಿಯವಾಗಿ ಮಾಡಲು ಮತ್ತು ವಿಸ್ತರಿಸಲು ಎಲ್ಲ ವಿಧದ,ಸಾಧನಗಳನ್ನು ಉಪಯೋಗಿಸಲಾಗುತ್ತಿದೆ. ಆದುದರಿಂದ ಸಮಾಜದಲ್ಲಿ ಗಾಳಿಪಯಣಕ್ಕೆಯಾವ ಸ್ಥಾನವಿದೆಯೆಂಬುದನ್ನು ನಾವು ಅಭ್ಯಸಿಸೋಣ.

"ಬಹಳ ದೇಶ ತಿರುಗಿದವನಪ್ಪ ಇವನು" ಎಂಬ ನುಡಿಗಟ್ಟು ಸಾಮಾನ್ಯವಾಗಿ ಪ್ರವಾಸದ ಪ್ರಾಮುಖ್ಯವನ್ನು ವ್ಯಕ್ತಪಡಿಸುತ್ತದೆ. ಅಂತಹ ಮನುಷ್ಯನಿಗೆ ಅನೇಕ ವಿಧದ, ವಿವಿಧಸ್ಥಿತಿಯಲ್ಲಿಯ ಮನುಷ್ಯರ ಹಾಗೂ ವಸ್ತುಗಳ ಪರಿಚಯವಿರಬೇಕೆಂದು ನಾವು ನಿರೀಕ್ಷಿಸುತ್ತೇವೆ. ಆದುದರಿಂದ ತನ್ನ ವಿವೇಕ ಬಲದಿಂದ, ಅವನು ಇತರರಲ್ಲಿ ವ್ಯವಹರಿಸುವಾಗ ವಿಶಾಲಮನನೂ, ವಿಷಯಜ್ಞನೂ, ಸಂಸ್ಕೃತನೂ ಆಗಿರಬೇಕೆಂದು ನಾವು ಎಣಿಸುತ್ತೇವೆ. ಪ್ರವಾಸದಿಂದ ಬಹಳ ವಿಧದ ಲಾಭವಿದೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ ಪೂರ್ವಕಾಲದಲ್ಲಿ ಧರ್ಮದ ಬಣ್ಣ ಬಳಿದಿದ್ದರೂ ಯಾತ್ರೆ ಹೋಗುವ ಪದ್ಧತಿಯು ಇಂತಹ ಸಾಂಸ್ಕೃತಿಕ ತಳಹದಿಯನ್ನೇ ಆಧರಿಸಿ ರೂಢಿಯಲ್ಲಿ ಬಂದಿತ್ತು.

ಬೇರೆ ಬೇರೆ ಅಂಕಗಳಲ್ಲಿ ಬೇರೆ ಬೇರೆ ಮನುಷ್ಯರನ್ನು ಪ್ರಯಾಣಿಕನು ಸಂಧಿಸುತ್ತಾನೆ, ಅವರೊಡನೆ ಮಾತುಕತೆ ಬೆಳೆಸುತ್ತಾನೆ, ಅವರ ಆಲೋಚನೆಯೇನೆಂದು ತಿಳಿದುಕೊಳ್ಳುತ್ತಾನೆ, ಅವರ ರೂಢಿ ಪರಂಪರೆಗಳಾವುವೆಂಬುದನ್ನು ಅರಿತುಕೊಳ್ಳುತ್ತಾನೆ. ಮತ್ತು ತನ್ನ ದೇಶದಲ್ಲಿಯವುಗಳೊಡನೆ ಅವನ್ನು ಹೋಲಿಸಿ ನೋಡುತ್ತಾನೆ. ಇದು ಕೊನೆಯಲ್ಲಿ ಸಾಂಸ್ಕೃತಿಕ ಅಭಿವೃದ್ಧಿಗೆ ಕಾರಣವಾಗುತ್ತದೆ. ಆದುದರಿಂದ ನಾವು ನಮ್ಮ ಮಕ್ಕಳಿಗೆ ಪ್ರವಾಸ ಸಾಹಿತ್ಯವನ್ನೋದಲು ಪ್ರೋತ್ಸಾಹ ಕೊಡುತ್ತೇನೆ-ಅದರಿಂದ ಅವರಿಗೆ ವಿದ್ಯಾರ್ಜನೆಯಾಗುತ್ತದೆ-ತಮ್ಮ ಸಂಗಡಿಗರ ಬಗ್ಗೆ ಜ್ಞಾನವನ್ನು ಪಡೆವಂತಾಗುತ್ತದೆ. ಈ ದೃಷ್ಟಿಕೋನದಿಂದ ನೋಡಿದರೆ "ವಿಮಾನ ಪ್ರವಾಸ"ವೆಂಬದು ಅರ್ಥಹೀನವಾಗುತ್ತದೆ. ಇಂದು ಗಾಳಿಯಲ್ಲಿ ಪಯಣ ಮಾಡುವದೆಂದರೆ, ಶುದ್ಧ, ಬರೀ ಸಾರಿಗೆ. ಒಬ್ಬನು ಒಂದುಕ್ಷಣದಲ್ಲಿ ಒಂದೆಡೆಯಲ್ಲಿ ಗಾಳಿಗುದುರೆಯೇರಿದನೆಂದರೆ ಮರುಕ್ಷಣದಲ್ಲಿ ಅವನು ಮತ್ತೊಂದೆಡೆಯಲ್ಲಿರುತ್ತಾನೆ. ಬೆಳಿಗ್ಗೆ ಕರಾಚಿಯಲ್ಲಿದ್ದ ಪ್ರಯಾಣಿಕನು ನಟ್ಟಿರುಳಲ್ಲಿ ಲಂಡನ್ನಿನಲ್ಲಿರಬಹುದು-ಆ ಪಯಣದಲ್ಲಿ ಅವನಿಗೆ ಯಾವ ಸುದ್ದಿಯೂ ಗೊತ್ತಾಗದು, ಯಾವ ಹೊಸ ಸಂಸ್ಕಾರದ ಪರಿಚಯವೂ ಆಗದು, ಯಾರೂ ಸಿಗರು. ಇದು ಒಂದು ಮೂಟೆ ಹತ್ತಿಯನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಹೇರಿಕೊಂಡು ಹೋದಷ್ಟೆ ಅಲ್ಲದೆ ಬೇರಲ್ಲ.

ಕಾಲದ ಉಳಿತಾಯವಾಯಿತೆಂದು ವಾದಿಸಬಹುದು. ಆದರೆ ಅದರಿಂದ ಮಾನವನ ಜೀವಿತದಲ್ಲಿ ಅವನೇನನ್ನಾದರೂ ಪಡೆದನೆಂದಾಗುವದೇ? ಇಲ್ಲವೇ ಇಲ್ಲ. ಅದರರ್ಥವೆಂದರೆ, ಮನುಷ್ಯನು ತನ್ನ ಜೀವನದ ಒಂದು ಸಂಧಿಯನ್ನು ಸಾಂಸ್ಕೃತಿಕ ಅಭ್ಯಾಸಕ್ಕಾಗಿ ಕಳೆಯದೆ ವ್ಯಾಪಾರಕ್ಕಾಗಿ ಕಳೆದನೆಂದಾಗುತ್ತದೆ. ಸಾಲೆಗೆ ಹೋಗುವ ಹುಡುಗನಿಗೆ ಅಡವಿಗೆ ಹೋಗಿ ದನಕಾಯೋ ಎಂದರೆ ನಾವು ಸಮಯ ಉಳಿಸಿದಂತಾಗುವದೇ? ಅದರಿಂದ ಆ ಹುಡುಗ ಸಂಪಾದಿಸಬಹುದಾಗಿದ ಸಂಸ್ಕಾರಾಂಶವನ್ನು ನಾವು ಅವನಿಗಿಲ್ಲದಂತೆ ಮಾಡಿದಂತಾಗುತ್ತದೆ. ನಮ್ಮ ವ್ಯಾಪಾರದಲ್ಲಿಯೇ ನಮ್ಮ ಸಮಯವೆಲ್ಲವನ್ನು ಕಳೆಯುವದೇ ಜೀವನದ ಸರ್ವಸ್ವವಲ್ಲ. ಸಾಮಾಜಿಕ ನಾಗಿರಬೇಕೆಂಬಲ್ಲಿಯವರೆಗೆ ಮಾನವನು ತನ್ನತನದ ವೃತ್ತವನ್ನು ವಿಸ್ತರಿಸಿ ನೆರೆಯವರೊಡನೆ ಬೆರೆಯಲೇಬೇಕಾಗುತ್ತದೆ. ಆದುದರಿಂದ ಗಾಳಿ ಪಯಣವು ಸಾಮಾಜಿಕನನ್ನು ವ್ಯಕ್ತಿಯಾಗಿ ಪರಿವರ್ತಿಸುತ್ತದೆ. ಕಾಲದ ಉಳಿಕೆಯೆಂದರೆ, ಹೀಗೆ ಸಾಂಸ್ಕೃತಿಕ ಉದ್ದೇಶಕ್ಕಾಗಿ ಬಳಸುವ ವೇಳೆ ಸ್ವಾರ್ಥನಿಷ್ಠ ಉದ್ಯೋಗದಲ್ಲಿ ವ್ಯಯವಾದಂತಾಗುತ್ತದೆ. ಜೀವನವೆಂದರೆ ಸಾಂಸ್ಕೃತಿಕ ದೃಷ್ಟಿಯಿಂದ ಶ್ರೀಮಂತವಾದುದಲ್ಲದೆ ಧನಕನಕಾದಿಗಳ ದೃಷ್ಟಿಯಿಂದಲ್ಲವೆಂದು ನಾವು ತಿಳಿದರೆ ಗಾಳಿ ಪಯಣದಲ್ಲಿಯ ಸಮಯದ ಉಳಿತಾಯವೊಂದು ಲಾಭವೆಂದು ಗಣಿಸಲಾಗುವದಿಲ್ಲ. ಇನ್ನೊಂದು ಮಾತಿನಲ್ಲಿ ಹೇಳಬೇಕಾದರೆ ಅದು ನಮ್ಮ ಪ್ರಾಣಿ ಜೀವನನ್ನು ಒಂದು ಕಡೆ ಲಂಬಿಸಿದರೆ, ಮನುಷ್ಯ ಜೀವನವನ್ನು ಹ್ರಸ್ವಗೊಳಿಸುತ್ತದೆ- ಇದೇ ಏಕಾಂತವಾಸದ ಅಡಿಗಲ್ಲು. ಗಾಳಿಪಯಣ ಮಾಡುವಾಗ ವಾಹಕಗಳ ಕಿವಿಕಿವುಡು ಮಾಡುವಂಥ ಶಬ್ದದಿಂದಲೂ ಸ್ಥಳಸಂಕೋಚದಿಂದಲೂ ನಮ್ಮೊಡನೆ ಕುಳಿತ ಪಯಣಿಗರೊಡನೆ ಒಂದು ಮಾತನ್ನು ಕೂಡ ಆಡಲು ಶಕ್ಯವಿಲ್ಲ.

ಪ್ರಯಾಣಕ್ಕೆ ಬೇಕಾಗುವಷ್ಟುಕಾಲ ಒಬ್ಬ ಮನುಷ್ಯನನ್ನು ಒಂದು ಕೋಣೆಯಲ್ಲಿ ಕುರ್ಚಿಯ ಮೇಲೆ ಕೂರಿಸಿ ಎಲ್ಲ ಕಿಟಕಿಗಳನ್ನೂ ಮುಚ್ಚಿಬಿಡುವುದೂ ವಿಮಾನದಲ್ಲಿ ಕುಳಿತುಕೊಳ್ಳುವುದೂ ಎರಡೂ ಒಂದೇ; ಕುರ್ಚಿಯು ಎಷ್ಟೇ ಹಿತಕರವಿದ್ದರೂ ಹಾಗೆ ಕುಳಿತಿರುವುದರಿಂದಾಗುವ ಬೇಸರ ದುಸ್ಸಹ ವಾಗುತ್ತದೆ. ಕಿಟಕಿಯು ಚಿಕ್ಕದಿರುವುದರಿಂದಲೂ ಹಾಗೆ ಕಿಟಕಿಯೊಳಗಿಂದ ಕಂಡರೂ ಬರಿಯ ಕಣ್ಣಿಗೆ ಹೊರಗಿನದೇನೂ ಚೆನ್ನಾಗಿ ಕಾಣಿಸದುದರಿಂದಲೂ ವಿಮಾನಾರೂಢನು ಸುತ್ತಮುತ್ತ ಏನನ್ನೂ ನೋಡಲಾರನು. ದೂರ ಹೋಗುವ ವಿಮಾನಗಳು ನೆಲದಿಂದ ೧೫ ರಿಂದ ೧೯ ಸಾವಿರ ಅಡಿಗಳ ಎತ್ತರದಲ್ಲಿ ಹಾರುತ್ತವೆ. ಎಂದರೆ ನೀವು ೩ ಮೈಲು ದೂರದಿಂದ ವಸ್ತುಗಳನ್ನು ನೋಡಬೇಕೆಂದಾಗುತ್ತದೆ. ಆದುದರಿಂದ ಅನೇಕ ವೇಳೆ ವಿಮಾನವಾಹಿಗೆ ಕೆಳಗೆ ಮಬ್ಬು ನೀಲಿ, ಮೇಲೆ ದಟ್ಟ ನೀಲಿ ಕಾಣಿಸುವದಲ್ಲದೆ, ಇಳಿವ ಸ್ಥಳಗಳಲ್ಲಲ್ಲದೆ ಮತ್ತೆಲ್ಲೂ ಮರವಾಗಲಿ ಮನೆ ಮಠಗಳಾಗಲಿ ಕಾಣಿಸುವುದಿಲ್ಲ. ಮುಚ್ಚಿದ ಮನ, ಮಂಜಾದ ಕಣ್ಣು, ಕಿವುಡಾದ ಕಿವಿ, ಇವುಗಳೊಂದಿಗೆ ಪಯಣಿಗನು ರಾತ್ರಿಯಿರಲಿ ಹಗಲಿರಲಿ, ಗಂಟೆಗಟ್ಟಲೆ ಕುಳಿತು ಬೆನ್ನೆಲ್ಲ ನೋಯಹತ್ತಿ- ಅಂತು ಊರುಬಂತಲ್ಲ, ಗೆದ್ದೆ- ಎಂಬ ನಿಟ್ಟುಸಿರ ಸಂತಸದಿಂದ ವಿಮಾನದಿಂದ ಕೆಳಗಿಳಿಯುವನು. ಇದು "ಆಧುನಿಕ ಪ್ರಯಾಣ."

ಇನ್ನು ಊಟ. ಊಟದಹೊತ್ತಿಗೆ ಆಹಾರದ ಪೊಟ್ಟಣಗಳನ್ನು ಕೊಡಲಾಗುತ್ತದೆ. ಆದರೆ ಈವರೆಗೆ ಊಟದ ವ್ಯವಸ್ಥೆಯಲ್ಲಿ ಭಾರತಕ್ಕೆ ಸ್ಥಾನ ಸಿಕ್ಕಿಲ್ಲ. ಆದುದರಿಂದ ಪಯಣಿಗನು ಮಾಂಸಾಹಾರಿ ಇರಲಿ, ಸಸ್ಯಾಹಾರಿ ಇರಲಿ, ಆ ಪೊಟ್ಟಣಗಳಲ್ಲಿ ತಣ್ಣನೆಯ ಸಸ್ಯೇತರಾಹಾರವನ್ನು ತುಂಬಿ ಕೊಡಲಾಗುತ್ತದೆ. ತನ್ನ ಹಸಿವನ್ನು ನೀಗಿಸಿಕೊಳ್ಳಲು ಒಂದುಚೂರು ರೊಟ್ಟಿಯ ತುಣುಕನ್ನಾಗಲಿ ಬೆಣ್ಣೆಯನ್ನಾಗಲಿ ಹೆಚ್ಚಿಗೆ ಪಡೆಯಲು ಪಯಣಿಗನು ಭಗೀರಥ ಪ್ರಯತ್ನ ಮಾಡಬೇಕಾಗುವುದು. (ಶುದ್ಧ ಸಸ್ಯಾಹಾರಿಗಳಿಗೂ ಬೇಕಾದ ಆಹಾರ ಪೂರೈಸುವಂತೆ ಭಾರತದ ನಿಲ್ದಾಣಗಳಲ್ಲಿ ಬಂದಿಳಿವ ವಿಮಾನ ವಾಹನದಲ್ಲಿ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ಸೂಚಿಸಬಹುದು.)

ವೇಗವಾಗಿ ಮಾಡುವ ಪ್ರಯಾಣದಲ್ಲಿ ಮನುಷ್ಯನನ್ನು ಸಂತೋಷಗೊಳಿಸುವ ಸಂಗತಿಯೆಂದರೆ ವೇಗ ಸಂವೇದನೆ. ಮೋಟಾರು ಇಲ್ಲವೆ ರೈಲಿನಲ್ಲಿ ಹೋಗುವಾಗ ಮನುಷ್ಯನು ಅದನ್ನು ಅಪೇಕ್ಷಿಸುತ್ತಾನೆ. ನರಹುಳುವೊಬ್ಬನು ಗಂಟೆಗೆ ೪೦, ೫೦, ೬೦ ಮೈಲು ಗಾಳಿಯಲ್ಲಿ ತೂರಿ ನುಗ್ಗಿ ಹೋಗುವುದು ತಾನು ಸ್ವಂತ ಕಾಲುಗಳಿಂದ ಮಾಡಲಾರದ ಕಾರ್ಯವೆನಿಸಿ ಅವನಿಗೊಂದು ವಿಧದ ಆನಂದ ಕೊಡುತ್ತದೆ. ಈ ಆನಂದ ಕೂಡ ಗಾಳಿ ಪಯಣದಲ್ಲಿಲ್ಲ. ವಿಮಾನವು ಬೇಕಾದರೆ ಗಂಟೆಗೆ ೩೦೦ ಮೈಲು ವೇಗದಿಂದ ಹೋಗುತ್ತಿರಲಿ, ಅಷ್ಟು ಎತ್ತರದಲ್ಲಿರುವುದರಿಂದ ಪಯಣಿಗನಿಗೆ ಕೆಳಗಿನ ನೆಲ ಮಂದಗತಿಯ ಜಡಮೇಘಗಳು ಕೂರ್ಮವೇಗದಿಂದ ಸಾಗಿ ಹೋಗುವಂತೆ ಕಾಣಿಸುತ್ತದೆ. ಆದುದರಿಂದ ಮಾನವ ಬಯಸುವ ತೀವ್ರಗತಿಯಲ್ಲಿ ಹೋಗುವ ಸಂತಸ ಕೂಡ ಅಲ್ಲಿ ಸಿಗದು.

ಈ ವಿಧದ ಪ್ರಯಾಣದ ತಾಂತ್ರಿಕ ಮುಖವನ್ನು ಅವಲೋಕಿಸಿದರೆ, ಅದು ಅಪಾರ ಪರಿಮಾಣದ ಪೆಟ್ರೋಲನ್ನು ಸ್ವಾಹಾಕರಿಸುತ್ತದೆಂದು ನಮಗೆ ತಿಳಿಯುತ್ತದೆ. ಜಗತ್ತಿನ ನಾನಾ ಭಾಗದ ಭೂಗರ್ಭದಿಂದ ಈ ಉರುವಲವನ್ನು ಪಡೆಯಬೇಕಾಗಿರುವುದರಿಂದ ಇದು ಸಿಕ್ಕುವ ಪರಿಮಾಣ ಅತ್ಯಲ್ಪ. ಇದರ ಸಂಗ್ರಹ ಕಡಿಮೆಯಾಗುತ್ತ ಹೋದಂತೆ ಬಳಕೆಗಾರನಿಗೆ ಉಳಿದ ಸಂಗ್ರಹಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಿಕೊಳ್ಳಬೇಕೆಂಬ ಆಸೆ ಹೆಚ್ಚುತ್ತ ಹೋಗುತ್ತದೆ. ಇದರಿಂದ ಲೋಭ, ಮತ್ಸರ, ದ್ವೇಷ, ಸಂಶಯಗಳಿಗೆ ಎಡೆಯುಂಟಾಗುವುದಲ್ಲದೆ ಇದರಿಂದ ಕಡೆಯಲ್ಲಿ ಭೌಗೋಲಿಕ ಸಂಗ್ರಾಮ ಸಂಭವಿಸಿದರೂ ಸಂಭವಿಸಬಹುದಾಗಿದೆ. ಆದುದರಿಂದ ಈ ಮಾರ್ಗದ ಪ್ರಯಾಣವನ್ನು ಮಿತಿಮೀರಿ ಹೆಚ್ಚಿಸಿದರೆ ನಮ್ಮ ನೆರೆಯ ರಾಷ್ಟ್ರಗಳೊಡನೆ ಅಹಿತಕರವಾದ ಸಂಬಂಧವಿಟ್ಟುಕೊಳ್ಳುವ ಸಂದರ್ಭವುಂಟಾಗುತ್ತದೆ.

ಇದರಿಂದ ಗಾಳಿಪಯಣವೇ ಬೇಡವೆಂದಂತಾಗಲಿಲ್ಲ. ಇದರಿಂದ ಕೇವಲ ಅದರ ನ್ಯೂನತೆಗಳು ಸ್ಪಷ್ಟವಾಗುತ್ತವೆ ಮತ್ತು ನಾವು ಬಹಳ ಎಚ್ಚರದಿಂದ ಅದನ್ನು ಬಳಸಬೇಕೆಂದು ಇದು ಎಚ್ಚರಿಸುತ್ತದೆ. ವಿಮಾನಯಾನದ ನ್ಯೂನತೆಗಳೆ...

[೧೦ನೇ ಪುಟಕ್ಕೆ]

ಉದ್ವೇಜಕ ನಿದರ್ಶನ

(ಮೋ. ಕ. ಗಾಂಧಿ)

ಹೆಸರಿನಿಂದ ಹಿಂದಿ ಮಾತೃಭಾಷೆಯಾಗಿ ತೋರುವ ಪತ್ರಕರ್ತನೊಬ್ಬನು ಇಂಗ್ಲೀಷಿನಲ್ಲಿ ಹೀಗೆ ಬರೆದಿದ್ದಾನೆ.—

"ಇಲ್ಲಿಂದ ಪಾಕಿಸ್ತಾನಕ್ಕೆ ತೆರಳದಂತೆ ಮಾಡಲು, ಮುಸಲ್ಮಾನರನ್ನು ಸೋದರಭಾವದಿಂದ ನಡೆಸಿಕೊಂಡು ಅವರ ಸುರಕ್ಷಿತತೆಯನ್ನು ಖಾತ್ರಿ ಮಾಡಿಕೊಡಬೇಕೆಂದು ಮೇಲಿಂದಮೇಲೆ ಮಾಡಲಾಗುತ್ತಿರುವ ನಿಮ್ಮ ಬಿನ್ನಹಕ್ಕೆ ಸಂಬಂಧಿಸಿದ ನಿದರ್ಶನವಿದು— ಒಂದು ಚಳಿಯ ದಿನ ಒಬ್ಬ ನಡೆದು ಹೋಗುತ್ತಿದ್ದನು; ಆಗ ದಾರಿಯಲ್ಲಿ ಥಂಡಿಯಿಂದ ಸೆಟೆದುಹೋದ ಒಂದು ಹಾವನ್ನು ಕಂಡನು. ಅದಕ್ಕೆ ಕನಿಕರ ಪಟ್ಟು ಅವನು ಅದನ್ನು ಬೆಚ್ಚಗಿಡುವುದರ ಸಲುವಾಗಿ ತನ್ನ ಕಿಸೆಯೊಳಗಿಟ್ಟುಕೊಂಡನು. ಆ ತಾಪದಿಂದ ಹಾವೆಚ್ಚತ್ತಿತು. ಎಚ್ಚರಾದ ಮರುನಿಮಿಷದಲ್ಲಿ ಅದು ಮಾಡಿದ್ದೆಂದರೆ, ತನ್ನ ರಕ್ಷಕನ ಮೈಯಲ್ಲಿ ತನ್ನ ವಿಷ ದಂತವನ್ನು ಚುಚ್ಚಿ ಅವನನ್ನು ಕೊಲ್ಲುವ ಕಾರ್ಯವನ್ನು."

ಕೋಪವು ಈ ಪತ್ರಕರ್ತನನ್ನು ಇಂತಹ ಉದ್ವೇಜಕ ನಿದರ್ಶನವನ್ನು ಕೊಡುವಂತೆ ಪ್ರೇರಿಸಿದೆ. ಎಷ್ಟೇ ಹೀನನಾಗಿರಲಿ, ಒಬ್ಬ ಮನುಷ್ಯನನ್ನು ಹಾವಿಗೆ ಹೋಲಿಸಿ, ಆ ಬಗ್ಗೆ ಅವನಿಗೆ ಅಮಾನುಷ ಪ್ರತೀಕಾರ ಮಾಡುವದನ್ನು ಸಮರ್ಥಿಸಿಕೊಳ್ಳುವುದು ಖಂಡಿತವಾಗಿ ಹೀನ ಕೃತ್ಯವೇ ಸರಿ. ಯಾವುದೋ ಒಂದು ಧರ್ಮದವರಾದ ಕೆಲವು ಇಲ್ಲವೆ ಹಲವು ಜನರ ತಪ್ಪಿಗಾಗಿ ಕೋಟಿಗಟ್ಟಲೆ ಮಾನವ ಜಂತುಗಳನ್ನು ನಿಕೃಷ್ಟರೆಂದುನಿಂದಿಸುವುದು ಹುಚ್ಚಿನ ಉತ್ತುಂಗ ಶಿಖರವೆಂದು ನನಗೆನಿಸುತ್ತದೆ. ನಾನು ಅನಾಗರಿಕ ಅಂಧಶ್ರದ್ಧೆಯ ಆಳುಗಳಾದ ಮುಸಲ್ಮಾನರು ಇದೇ ನಿದರ್ಶನವನ್ನು ಹಿಂದುಗಳಿಗೆ ಅನ್ವಯಿಸಿದ್ದನ್ನು ಬಲ್ಲೆನೆಂಬುದನ್ನು ಪತ್ರಕರ್ತನು ನೆನಪಿಟ್ಟುಕೊಳ್ಳತಕ್ಕದ್ದು. ಯಾವ ಹಿಂದುವೂ ಹಾವೆನಿಸಿಕೊಳ್ಳಲು ಅಪೇಕ್ಷಿಸನು.

ಒಬ್ಬನನ್ನು ಸೋದರನಂತೆ ನಡೆಸಿಕೊಳ್ಳಬೇಕೆಂದಾಕ್ಷಣ ಅವನು ಅಪ್ರಾಮಾಣಿಕನೆಂದು ಸಿದ್ಧವಾಗಿದ್ದರೂ ಅವನಲ್ಲಿ ನಂಬಿಗೆಯಿಡಬೇಕೆಂದರ್ಥವಾಗುವದಿಲ್ಲ. ಅವನು ವಿಶ್ವಾಸ ಘಾತಕನಾದಾನೆಂಬ ಹೆದರಿಕೆಯಿಂದ ಅವನನ್ನು ಸಕುಟುಂಬ ಶಿರಚ್ಛೇದ ಮಾಡುವುದು ಹೇಡಿತನವಲ್ಲವೆ? ಒಂದು ಸಮಾಜವಿದೆ ಯೆನ್ನೋಣ. ಅಲ್ಲಿ ಪ್ರತಿಯೊಬ್ಬನೂ ತನ್ನ ನೆರೆಯವನ ಗುಣ ನಿರ್ಣಯಿಸುವ ಹಕ್ಕುಳ್ಳವನೆನ್ನೋಣ. ಆಗ ಎಂತಹ ಪರಿಣಾಮ ಉಂಟಾದೀತು? ಭಾರತದ ಕೆಲ ಭಾಗಗಳಲ್ಲಿ ನಾವಿಂದು ಅಂತಹ ಪರಿಸ್ಥಿತಿಗೇ ಬಂದಿಳಿದಿರುವೆವು.

ಕೊನೆಯದಾಗಿ ಉರಗಕುಲದ ಪರವಾಗಿ ನಿಂತು ಮನುಷ್ಯರಲ್ಲಿಯ ಒಂದು ಸಾಮಾನ್ಯ ತಪ್ಪನ್ನು ತಿದ್ದುತ್ತೇನೆ. ಅದೇನದರೆ— ಹಾವುಗಳಲ್ಲಿ ನೂರಕ್ಕೆ ಎಂಬತ್ತು ಸಂಪೂರ್ಣ ನಿರಪಾಯಕಾರಿಗಳೂ ಪ್ರಕೃತಿಯಲ್ಲಿ ಉಪಯೋಗಕ್ಕೆ ಬರುವ ಕೆಲಸ ಮಾಡುವಂಥವೂ ಆಗಿರುತ್ತವೆ ಯೆಂಬುದನ್ನು ಮನುಷ್ಯರು ತಿಳಿಯಬೇಕು.

ಹೊಸದಿಲ್ಲಿ,

೩-೧೦-೧೯೪೭

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

ಬಿರ್ಲಾ ಭವನ ಹೊಸದಿಲ್ಲಿ
ತಾ. ೨೯-೯-೧೯೪೭

ಭ್ರಾತೃಹತ್ಯೆಯ ಫಲ

ಎರಡು ಸಾಮಂತ ರಾಷ್ಟ್ರಗಳಲ್ಲಿ ಯುದ್ಧವಾಗುವ ಸಂಭವವಿದೆಯೆಂದು ನಾನು ಉಲ್ಲೇಖಿಸಿದ್ದರಿಂದ ಪಶ್ಚಿಮ ರಾಷ್ಟ್ರಗಳಲ್ಲಿ ಭಯೋದ್ರೇಕವುಂಟಾಗಿದೆಂದು ನನಗೆ ಹೇಳಲಾಗುತ್ತದೆ. ಪತ್ರಿಕಾ ಪ್ರತಿನಿಧಿಗಳು ತೊರಗೆ ಎಂತು ವರದಿಯನ್ನು ಕಳಿಸಿರುವರೆಂಬುದು ನನಗೆ ತಿಳಿಯದು. ಭಾಷಣಕಾರರ ಅಭಿಪ್ರಾಯವನ್ನು ನಿಜವಾಗಿ ವ್ಯಕ್ತಪಡಿಸಿದರೆ ಮಾತ್ರ ಭಾಷಣಗಳನ್ನು ಸಂಕ್ಷೇಪಗೊಳಿಸುವದು ಇಷ್ಟ. ಇಲ್ಲದಿದ್ದರೆ ಅದು ಯಾವಾಗಲೂ ಗಂಡಾಂತರಪ್ರದವಾದುದು. ೧೮೯೬ ರಲ್ಲಿ ದಕ್ಷಿಣ ಆಫ್ರಿಕೆಯ ಬಗೆಗೆ ಬರೆದ ಪತ್ರಿಕೆಯೊಂದರ ಅನಗತ್ಯಸಾರದ ಪ್ರಸಿದ್ಧಿಯಿಂದ ನನ್ನ ಜೀವನವನ್ನೇ ಗಂಡಾಂತರದಲ್ಲಿ ಹಾಕಿದಂತಾಗಿತ್ತು. ಅದಷ್ಟೊಂದು ಅಧಿಕ ಪ್ರಸಂಗತನವಾಗಿದ್ದಿತು. ಪುಂಡಾಟಿಕೆಗೆ ನನ್ನನ್ನು ಗುರಿಮಾಡಿದ ಇಪ್ಪತ್ನಾಲ್ಕು ಗಂಟೆಗಳೊಳಗಾಗಿಯೆ ದಕ್ಷಿಣ ಆಫ್ರಿಕೆಯಲ್ಲಿಯ ಯುರೋಪಿಯನ್‌ರ ಅಭಿಪ್ರಾಯವು ರೊಚ್ಚಿನಿಂದ ಪಶ್ಚಾತ್ತಾಪಕ್ಕಿಳಿಯಿತು; ನಿರಪರಾಧಿ ಮನುಷ್ಯನೊಬ್ಬನು ಯಾವ ಅಪರಾಧವನ್ನೂ ಮಾಡದಲೆ ಕಷ್ಟಕ್ಕೊಳಗಾಗಬೇಕಾಯಿತು. ಯಾವನೊಬ್ಬನು ಆಡದ ಮಾತಿಗಾಗಿ ಇಲ್ಲವೆ ಮಾಡದ ಕೃತ್ಯಕ್ಕಾಗಿ ಅವನನ್ನು ಹೊಣೆಗಾರನನ್ನಾಗಿ ಹಿಡಿಯಬಾರದೆಂದು ಮೇಲಿನ ಮಾತಿನಿಂದ ನಿರ್ಧರಿಸಿಕೊಳ್ಳಬೇಕಾಗಿದೆ.

ಪಾಕಿಸ್ತಾನ ಮತ್ತು ಹಿಂದೀ ಒಕ್ಕೂಟದಲ್ಲಿ ಯುದ್ಧ ಎಂಬ ಮಾತನ್ನು ಮಾತ್ರ ಎತ್ತಿದಾಕ್ಷಣ ಆವೆರಡು ರಾಷ್ಟ್ರಗಳಲ್ಲಿ ಯುದ್ಧದ ಬಗ್ಗೆ ಯಾವದೇ ಬಗೆಯ ಪ್ರೋತ್ಸಾಹನೆ ಕೊಟ್ಟಂತಾಗಲಿ ಇಲ್ಲವೆ ಅದಕ್ಕೆ ಮನ್ನಣೆ ಕೊಟ್ಟಂತಾಗಲಿ ಅರ್ಥವಾಗಲಾರದೆಂದು ನನ್ನ ಅಭಿಪ್ರಾಯ. ಯುದ್ಧವೆಂಬ ಶಬ್ದವನ್ನೇ ಉಚ್ಚರಿಸಬಾರದೆಂದು ಹೇಳಿದರೆ ಮಾತ್ರ ಆ ಮಾತು ಬೇರೆ. ಮನೆಯಲ್ಲಿ ಹಾವು ಶಬ್ದವನ್ನು ಮಗುವೊಂದು ಉಚ್ಚರಿಸಿದರು ಕೂಡ ಹಾವು ಬಂದೇತೀರುವದೆಂದು ನಮ್ಮಲ್ಲಿ ಮೂಢ ಭಾವನೆ ಬಂದಿದೆ. ಯುದ್ಧದ ಸಂಬಂಧವಲ್ಲಿ ಹಿಂದುಸ್ತಾನದಲ್ಲಿಯ ಯಾವನೊಬ್ಬನಲ್ಲಿ ಈ ಬಗೆಯ ಮೂಢ ಭಾವನೆ ಇರಲಿಕ್ಕಿಲ್ಲೆಂದು ನಾನು ಆಶಿಸುತ್ತೇನೆ.

ಸದ್ಯದ ಪರಿಸ್ಥಿತಿಯನ್ನು ವಿಮರ್ಶಿಸಿ, ಎರಡೂ ರಾಷ್ಟ್ರಗಳಲ್ಲಿ ಯುದ್ಧದಕಾರಣ ಯಾವಾಗಉಂಟಾಗಬಹುದೆಂಬದನ್ನು ಸ್ಪಷ್ಟವಾಗಿ ಹೇಳಿ ಎರಡೂ ನೆರೆಯ ರಾಷ್ಟ್ರಗಳಿಗೆ ನಾನು ಸೇವೆಯನ್ನೇ ಸಲ್ಲಿಸಿದೆನೆಂದು ಭಾವಿಸುತ್ತೇನೆ. ಯುದ್ಧವನ್ನು ಪ್ರೋತ್ಸಾಹಿಸುವದಕ್ಕಾಗಿ, ನಾನು ಹಾಗೆ ಮಾಡಲಿಲ್ಲ. ಆದರೆ ಶಕ್ಯವಿದ್ದಷ್ಟು ಅದನ್ನು ತಪ್ಪಿಸುವುದಕ್ಕಾಗಿಯೆ ನಾನುಹಾಗೆ ಮಾಡಿದ್ದು, ಜನತೆ ಸಾರಾಸಾರ ವಿಚಾರ ಮಾಡದೆ ಕೊಲೆ, ಸುಲಿಗೆ ಮತ್ತು ಕೊಳ್ಳಿಯನ್ನು ಸಾಗಿಸಿದ್ದಾದರೆ ಯುದ್ಧವನ್ನು ಮಾಡಿಯೆ ತೀರಬೇಕಾಗುವುದೆಂದು ಆಯಾ ಸರಕಾರಗಳಿಗೆ ಒತ್ತಾಯಪಡಿಸಿದಂತಾಗುವುದೆಂಬುದನ್ನು ತೋರಿಸಿಕೊಡಲೂ ಪ್ರಯತ್ನಿಸಿದೆ. ಒಂದರ ಹಿಂದೊಂದು ತರ್ಕಬದ್ಧವಾಗಿ ಸಾಗೆಹತ್ತಿದ ಘಟನೆಗಳ ಕಡೆಗೆ ಸಾರ್ವಜನಿಕರ ಲಕ್ಷ್ಯವನ್ನು ಎಳೆಯುವುದು ತಪ್ಪೆ ?

ಯುದ್ಧದಲ್ಲಿ ಪರಿಣಮಿಸುವ ಭ್ರಾತೃಹತ್ಯೆಯನ್ನು ನಿಶ್ಚಿತವಾಗಿ ತಪ್ಪಿಸುವುದಕ್ಕಾಗಿ ನನ್ನ ಉತ್ಸಾಹಶಕ್ತಿಯ ಪ್ರತಿ :ಔಂಸನ್ನು ನಾನು ವ್ಯಯ ಮಾಡುತಿರುವೆನೆಂದು ಹಿಂದುಸ್ತಾನಕ್ಕೆ ಗೊತ್ತಿದೆ, ಜಗತ್ತು ತಿಳಿದುಕೊಳ್ಳತಕ್ಕದ್ದು. ಮಾನವ ಜನಾಂಗದ ವ್ಯವಹಾರವನ್ನೆಲ್ಲ ಅಹಿಂಸೆಯೆ ನಿಯಂತ್ರಿಸುತಿದೆಂದು ಭಾವಿಸಿ ಅಹಿಂಸೆಗೇ ಬದ್ಧನಾದ ಮನುಷ್ಯನು ಯುದ್ಧದ ಬಗ್ಗೆ ಉಲ್ಲೇಖ ಮಾಡುವಾಗ, ಅದನ್ನು ತಪ್ಪಿಸುವದಕ್ಕಾಗಿಯೆ ಶಕ್ಯವಿದ್ದಷ್ಟು ಪ್ರಯತ್ನ ಮಾಡುವ ದೃಷ್ಟಿಯಿಂದಲೆ ಅದನ್ನು ಮಾಡತಕ್ಕದ್ದು. ಇದು ನನ್ನ ಮೂಲಭೂತ ವಿಚಾರ. ಕೊನೆಯ ವರೆಗೂ ನಾನು ಇದರಿಂದ ಚ್ಯುತನಾಗಲಿಕ್ಕಿಲ್ಲ ಎಂದು ಆಶಿಸುತ್ತೇನೆ.

ಬಿರ್ಲಾಭವನ, ಹೊಸದಿಲ್ಲಿ
೩೦—೯—೪೭

ಸರಕಾರದ ಕರ್ತವ್ಯ

ಈ ದಿನ ಮಿಯಾನವಾಲಿಯ ಕೆಲ ಮಿತ್ರರು ತಮ್ಮನ್ನು ಸಂದರ್ಶಿಸಿದರೆಂದು ಗಾಂಧೀಜಿ ಹೇಳಿದರು. ಹಿಂದೆ ಉಳಿದ ತಮ್ಮ ಮಿತ್ರರ ಬಗ್ಗೆ ಅವರು ಬಹಳ ವಿಷಂಡನೆಗೊಳಗಾಗಿದ್ದರು. ಈ ... ಕಿಯಾಗಿ ಸಾವಿರಗಟ್ಟಲೆ ಜನರು ಪಾಕಿಸ್ತಾನದ ...ಸ್ಥಳಗಳಲ್ಲಿ ಈಗಲೂ ಉಳಿದುಕೊಂಡಿದ್ದರು. ಹಿಂದುಳಿದವರೆಲ್ಲ ಒತ್ತಾಯದಿಂದ ಮತಾಂತರಗೊಳಿಸಲ್ಪಡುವರು ಇಲ್ಲವೆ ಕೊಲ್ಲಲ್ಪಡುವರು ಮತ್ತು ಹೆಣ್ಣುಮಕ್ಕಳು ಅಪಹರಿಸಲ್ಪಡುವರೆಂಬ ಅಂಜಿಕೆ ತಮಗಿದೆಯೆಂದು ಮಿಯಾನವಾಲಿಯಿಂದ ಬಂದ ಗೆಳೆಯರು ಗಾಂಧೀಜಿಗೆ ಹೇಳಿದರು. ಅವರನ್ನು ಸಂರಕ್ಷಿಸುವದು ಹಿಂದೀ ಒಕ್ಕೂಟ ಸರಕಾರದ ಕರ್ತವ್ಯವಾಗಿಲ್ಲವೇ ಎಂದು ಅವರು ಕೇಳಿದರು. ಉಳಿದ ಭಾಗಗಳಿಂದಲೂ ಇದೇ ಬಗೆಯ ಕತೆಗಳು ಕೇಳಬಂದವು. ಸಂರಕ್ಷಣೆಯನ್ನು ಅಪೇಕ್ಷಿಸಿದವರಿಗೆಲ್ಲ ಅದನ್ನು ಒದಗಿಸಿಕೊಡುವದು ಸರಕಾರದ ಕರ್ತವ್ಯವಾಗಿದೆ ಅದಾಗದಿದ್ದರೆ ಅವರು ರಾಜೀನಾಮೆ ಕೊಡಬೇಕು ಎಂಬದಾಗಿ ಗಾಂಧೀಜಿ ಒಪ್ಪಿಕೊಂಡರು. ಸರಕಾರವನ್ನು ಬಲಗೊಳಿಸುವದು ಜನತೆಯನ್ನೇ ಕೂಡಿದೆ.

ಪಾಕಿಸ್ತಾನದಲ್ಲಿಯ ಅಲ್ಪ ಸಂಖ್ಯಾಕರನ್ನು ಸಂರಕ್ಷಿಸುವ ಎರಡು ಮಾರ್ಗಗಳಿವೆ. ಕಾಯದೆ ಆಜಂ ಜಿನ್ನಾ ಮತ್ತು ಅವರ ಮಂತ್ರಿಗಳು ಅಲ್ಪಸಂಖ್ಯಾಕರ ಸಂರಕ್ಷಣೆಯ ವಿಶ್ವಾಸವನ್ನು ಹುಟ್ಟಿಸತಕ್ಕದ್ದು; ಅದಕ್ಕಾಗಿ ನೆರೆಯ ಸಾಮಂತ ರಾಷ್ಟ್ರದ ಸಹಾಯವನ್ನಪೇಕ್ಷಿಸುವ ಅವಶ್ಯಕತೆಯಿಲ್ಲವೆಂಬ ವಿಶ್ವಾಸವನ್ನೂ ಹುಟ್ಟಿಸತಕ್ಕದ್ದು. ಬಿಟ್ಟುಹೋದ ಆಸ್ತಿಪಾಸ್ತಿಯನ್ನೆಲ್ಲ ನಿರಾಶ್ರಿತರ ವಿಶ್ವಸ್ತನಿಧಿಯೆಂದು ಇಟ್ಟು ಬಿಡುವದು ಪಾಕಿಸ್ತಾನ ಅಧಿಕಾರಿಗಳನ್ನೇ ಕೂಡಿದೆ. ಒತ್ತಾಯದ ಮತಾಂತರ ಇಲ್ಲವೆ ಒಂದು ಸಣ್ಣ ಮಗುವಿನಲ್ಲಿ ಕೂಡ ಹಿಂದುಸ್ತಾನ ಇಲ್ಲವೆ ಪಾಕಿಸ್ತಾನದಲ್ಲಿ ಸಂಪೂರ್ಣ ಸುರಕ್ಷಿತತೆಯ ಭಾವನೆ ಬಲಿಯಬೇಕು. ಯಾವನೊಬ್ಬನ ಧರ್ಮದ ಮೇಲೆ ಯಾವದೇ ಬಗೆಯ ಹಾಳಿಯಾಗಕೂಡದು. ಪ್ರಜಾಪ್ರಭುತ್ವದಲ್ಲಿ ಜನರು ಸರಕಾರವನ್ನು ಸ್ಥಾಪಿಸುಬಲ್ಲರು ಇಲ್ಲವೆ ನಾಶಮಾಡಬಲ್ಲರು ಅವರು ಅದನ್ನು ಬಲಗೊಳಿಸಬಲ್ಲರು ಇಲ್ಲವೆ ಬಲಗುಂದಿಸಬಲ್ಲರು. ಓರಣವಿಲ್ಲದೆ ಅವರು ಏನನ್ನೂ ಪಡೆಯಲಾರರು.

ವ್ಯಕ್ತಿಯ ಯೋಗ್ಯತೆ

ಪ್ರತಿಯೊಬ್ಬನು ತನ್ನಧರ್ಮವನ್ನು ತಾನೆ ಕಾಪಾಡಿಕೊಳ್ಳಬಲ್ಲನೆಂದು ನಿಮಗೆ ಬೇಸರವೆನಿಸಿದರೂ ನಾನು ಪುನಃ ಪುನಃ ಹೇಳಲಿಕ್ಕೆ ಬೇಕು ಎಂದು ಗಾಂಧೀಜಿ ನುಡಿದರು. ತನ್ನ ಧರ್ಮಕ್ಕಾಗಿ ಆತ್ಮಾರ್ಪಣೆ ಮಾಡಲಿಕ್ಕೆ ಬೇಕೆಂಬದನ್ನು ಪ್ರತಿಯೊಂದು ಮಗುವಿಗೆ ಕೂಡ ಕಲಿಸಲಿಕ್ಕೆ ಬೇಕು. ಪ್ರಲ್ಹಾದನ ಕತೆ ಎಲ್ಲರಿಗೂ ಗೊತ್ತು. ೧೨ ವರುಷದ ವಯಸ್ಸಿನವನಿರುವಾಗಲೆ ತನ್ನ ಸತ್ಯನಿಷ್ಠೆಗಾಗಿ ತನ್ನ ತಂದೆಯ ವಿರುದ್ಧ ಅವನು ಹೋರಾಡಿದನು. ಇಂಥ ಶೂರ ಕೃತ್ಯದ ಉದಾಹರಣೆಗಳು ಪ್ರತಿಯೊಂದು ಧರ್ಮದಲ್ಲಿ ಬೇಕಾದಷ್ಟು ಇವೆ. ನನ್ನ ಮಕ್ಕಳಿಗೂ ನಾನು ಇದೇ ಬಗೆಯ ಶಿಕ್ಷಣವನ್ನು ಕೊಟ್ಟಿರುವೆನು. ನನ್ನ ಮಕ್ಕಳ ಧರ್ಮದ ಹೊಣೆಯನ್ನು ನಾನು ಹೊತ್ತಿರುವದಿಲ್ಲ. ಹೆಣ್ಣು ಮಕ್ಕಳನ್ನು ಅಬಲೆಯರೆಂದು ಕರೆಯುವದು ತಪ್ಪು. ತನ್ನ ಧರ್ಮದಲ್ಲಿ ಆತ್ಯಂತಿಕ ನಿಷ್ಠೆಯಿದ್ದ ಯಾವದೇ ಹೆಣ್ಣುಮಗಳು ತನ್ನ ಮರ್ಯಾದೆ ಇಲ್ಲವೆ ನಿಷ್ಠೆಯ ಮೇಲೆ ಹಾಳಿಯ ಅಂಜಿಕೆಯನ್ನು ತಾಳಬಾರದು. ಸರಕಾರದವರು ಅವರಿಗೆ ರಕ್ಷಣೆಯನ್ನು ಕೊಡಲಿಕ್ಕೆ ಬೇಕು. ಒಂದು ವೇಳೆ ಸರಕಾರದವರು ಆ ಕಾರ್ಯವನ್ನು ಮಾಡಲು ತಪ್ಪಿದರೆ ಬಟ್ಟೆಯನ್ನು ಬದಲು ಮಾಡುವಂತೆ ಧರ್ಮವನ್ನೂ ಬದಲು ಮಾಡಲಿಕ್ಕೆ ಬರುವದೆ?

ಹಿಂದೀ ಮುಸಲ್ಮಾನರು

ಮುಸಲ್ಮಾನರ ಮೇಲೆ ಬೇಕೆಂತಲೆ ಮಾಡಲಾಗುವ ಹಾಳಿಗಳನ್ನುಲ್ಲೇಖಿಸುತ್ತ ಹಿಂದುಸ್ತಾನದ ಮುಸಲ್ಮಾನರೆಂದರೆ ಯಾರು ಎಂದು ಗಾಂಧೀಜಿ ಕೇಳಿದರು. ಪ್ರಚಂಡ ಬಹುಸಂಖ್ಯಾಕರೇನು ಅರಬಸ್ತಾನದಿಂದ ಬಂದವರಿಲ್ಲ. ಕೆಲವರೆ ಮಾತ್ರ ಹೊರಗಿನಿಂದ ಬಂದಿರುವರು. ಆದರೆ ಕೋಟ್ಯವಧಿ ಜನರು ಹಿಂದು ಧರ್ಮದಿಂದಲೆ ಮತಾಂತರ ಹೊಂದಿದವರಿರುವರು. ಬುದ್ಧಿಪೂರ್ವಕವಾಗಿ ಮತಾಂತರ ಹೊಂದಲಿಕ್ಕೆ ನನ್ನದೇನು ಆಕ್ಷೇಪವಿಲ್ಲ. ಅಸ್ಪೃಶ್ಯರೆಂದು ಕರೆಯಲ್ಪಡುವವರನ್ನು ಮತ್ತು ಶೂದ್ರರನ್ನು ಅವರ ಮನವೊಲಿಸಿ ಮತಾಂತರಗೊಳಿಸಲಾಗಿಲ್ಲ. ಹೊಣೆಗಾರಿಕೆ ಅವರದೇ ಆಗಿದ್ದಿತು. ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಗೆ ಅವಕಾಶ ಕೊಟ್ಟು ಮತ್ತು ಅಸ್ಪೃಶ್ಯರೆಂದು ಕರೆಯಲ್ಪಡುವವರನ್ನು ಛಲಿಸಿ ಇಸ್ಲಾಮು ಧರ್ಮದಲ್ಲಿ ಬೀಳಲು ಅವರನ್ನು ಒತ್ತಾಯಪಡಿಸಲಾಯಿತು. ಈ ಬಂಧು ಭಗಿನಿಯರನ್ನು ಕೊಲ್ಲುವುದಾಗಲಿ ಇಲ್ಲವೆ ಛಲಿಸುವದಾಗಲಿ ಯಾವ ರೀತಿಯಿಂದಲೂ ನ್ಯಾಯ್ಯವಾಗಲಾರದು.

ಬಿರ್ಲಾಭವನ, ಹೊಸದಿಲ್ಲಿ ೧—೧೦—೧೯೪೭

ಸೇವೆಯ ಕ್ಷೇತ್ರಕ್ಕೆ ಮಿತಿಯಿಲ್ಲ

ಪ್ರಾರ್ಥನೋತ್ತರದಲ್ಲಿ ಮಾತಾಡುತ್ತ ಗಾಂಧೀಜಿ ಹೀಗೆ ಹೇಳಿದರು. “ಹಿಂದಿನ ದಿನ ಸಾಯಂಕಾಲ ಭಗಿನಿಯೊಬ್ಬಳು ನನ್ನ ಕಡೆಗೆ ಚೀಟಿಯೊಂದನ್ನು ಕೊಟ್ಟಳು. ತಾನು ಮತ್ತು ತನ್ನ ಗಂಡ ಸೇವೆಗಾಗಿ ಸಿದ್ಧರಿದ್ದು ತಾವೇನು ಮಾಡಬೇಕೆಂಬದನ್ನು ಯಾರೂ ಹೇಳಲೊಲ್ಲರೆಂದೂ ಆ ಚೀಟಿಯಲ್ಲಿ ಅವಳು ಬರೆದಿದ್ದಳು. ಇಂಥ ಅನೇಕ ದೂರುಗಳು ಬಂದಿವೆ. ಅವರೆಲ್ಲರಿಗೂ ನನ್ನದೊಂದೇ ಉತ್ತರವಿದೆ. ಸೇವೆಯ ಕ್ಷೇತ್ರ ಬೇಕಾದಷ್ಟು ವಿಶಾಲವಾಗಿದೆ. ಅಧಿಕಾರಕ್ಷೇತ್ರದಂತೆ ಅದಕ್ಕೇನು ಮರ್ಯಾದೆಯಿಲ್ಲ. ಭೂಮಿಯಷ್ಟು ಅದು ವ್ಯಾಪಕವಾಗಿದೆ. ಅಪರಿಮಿತ ಕಾರ್ಯಕರ್ತರನ್ನು ಅದು ಅಳವಡಿಸಿಕೊಳ್ಳಬಲ್ಲುದು. ಉದಾಹರಣಾರ್ಥವಾಗಿ ದಿಲ್ಲಿ ನಗರವು ಎಂದಿಗೂ ಆದರ್ಶ ರೀತಿಯಲ್ಲಿ ಸ್ವಚ್ಛವಾಗಿರುವದಿಲ್ಲ. ನಿರ್ವಾಸಿತರ ದಟ್ಟಣೆಯಿಂದ ಸ್ವಚ್ಛತೆ ಮತ್ತಷ್ಟು ಹದಗೆಟ್ಟಿದೆ. ಬೇರೆ ಬೇರೆ ನಿರ್ವಾಸಿತರ ಶಿಬಿರಗಳಲ್ಲಿಯ ಸ್ವಚ್ಛತೆ ಸಮಾಧಾನಕರವಿಲ್ಲ. ಯಾರಾದರೂ ಆ ಕೆಲಸವನ್ನು ಕೈಕೊಳ್ಳಬಹುದಾಗಿದೆ. ನಿರ್ವಾಸಿತರ ಶಿಬಿರಗಳಿಗೆ ಹೋಗುವದಾಗದಿದ್ದರೆ ಅವರು ತಮ್ಮ ಸುತ್ತಲಿನ ಸ್ಥಳಗಳನ್ನೆಲ್ಲ ಸ್ವಚ್ಛ ಮಾಡಬೇಕು. ಅದರಿಂದ ಇಡೀ ನಗರದ ಮೇಲೆ ಪರಿಣಾಮವಾಗದಿರದು. ಯಾರಾದರೂತಮಗೆ ಹಾಗೆ ಮಾಡಹೇಳಬೇಕೆಂದು ಯಾರೂ ದಾರಿ ಕಾಯುತ್ತ ಕೂಡ್ರಬಾರದು. ಈ ದೈಹಿಕ ಸ್ವಚ್ಛತೆಯ ಜೊತೆಯಲ್ಲಿಯೆ ಮಾನಸಿಕ ಮತ್ತು ಆಧ್ಯಾತ್ಮಿಕ ವಿಶುದ್ಧತೆಯೂ ಅವಶ್ಯವಾಗಿದೆ. ಇದು ಬಹಳ ದೊಡ್ಡ ಕೆಲಸ ಮತ್ತು ಬೇಕಾದಷ್ಟು ಅತ್ಯಂತ ಮಹತ್ವದ ಕಾರ್ಯವನ್ನು ಇದರಿಂದ ಸಿದ್ಧಿಸಿಕೊಳ್ಳಬಹುದು.”

ಶಾಂತಿಯ ಕರಾರುಗಳು

ಬಾಬಾ ಬಚಿತಾರಸಿಂಗ ಇವರು ಕರೆದ ದಿಲ್ಲಿ ಪ್ರಮುಖ ನಾಗರಿಕರ ಸಭೆಗೆ ಗಾಂಧೀಜಿ ಹೋಗಿದ್ದರು. ಪಂಡಿತ ಜವಾಹರಲಾಲ ನೆಹರುಗಳು ಆ ಸಭೆಯಲ್ಲಿ ಭಾಷಣ ಮಾಡುವವರಿದ್ದರು. ಲಿಯಾಕತ ಅಲ್ಲಿ ಸಾಹೇಬರು ತಮ್ಮೊಡನೆ ವಿಚಾರ ವಿನಿಮಯಕ್ಕಾಗಿ ಬಂದದ್ದರಿಂದ ಮತ್ತು ಸಾಯಂಕಾಲ ೬ಕ್ಕೆ ಕಾಂಗ್ರೆಸ ಕಾರ್ಯ ಸಮಿತಿಯ ಸಭೆಗೆ ಮತ್ತು ೯ಕ್ಕೆ ಮಂತ್ರಿಮಂಡಳದ ಸಭೆಗೆ ತಮಗೆ ಹೋಗಲೆ ಬೇಕಾದ್ದರಿಂದ ಸಭೆಗೆ ಬರುವದಾಗುವದಿಲ್ಲ ಕ್ಷಮಿಸಿಯೆಂದು ಜವಾಹರಲಾಲರು ಕೇಳಿಕೊಂಡಿದ್ದರು. ಆದುದರಿಂದ ಬಾಬಾ ಬಚಿತಾರಸಿಂಗರು ಆಮಂತ್ರಿತರನ್ನುದ್ದೇಶಿಸಿ ಭಾಷಣ ಮಾಡಲು ಗಾಂಧೀಜಿಯವರನ್ನು ಬಿನ್ನವಿಸಿಕೊಂಡರು. ಗಾಂಧೀಜಿ ಅದಕ್ಕೊಪ್ಪಿಕೊಂಡರು. ಗಾಂಧೀಜಿಯವರು ಪ್ರಶ್ನೆಕೇಳಬಹುದೆಂದು ಹೇಳಿದರು. ಗೆಳೆಯನೊಬ್ಬನು ಎದ್ದುನಿಂತು ಸಾಧಾರಣವಾಗಿ ಭಾಷಣವನ್ನೆ ಮಾಡಿಬಿಟ್ಟನು. ದಿಲ್ಲಿಯ ನಾಗರಿಕರು ಮುಸಲ್ಮಾನರೊಡನೆ ಶಾಂತರೀತಿಯಿಂದ ಇರಲು ಸಿದ್ಧರಿರುವರು. ಆದರೆ ಅವರು ಹಿಂದೀ ಒಕ್ಕೂಟ ಸರಕಾರಕ್ಕೆ ನಿಷ್ಠರಾಗಿ ಉಳಿಯತಕ್ಕದ್ದು, ಅಲ್ಲದೆ ಲಾಯಸೆನ್ಸಿಲ್ಲದೆ ಇಟ್ಟುಕೊಂಡ ಶಸ್ತ್ರಾಸ್ತ್ರ ಗುಂಡು ಮದ್ದು ಮುಂತಾದವುಗಳನ್ನು ಸರಕಾರಕ್ಕೆ ಒಪ್ಪಿಸಿಕೊಡಲಿಕ್ಕೆ ಬೇಕು ಎಂಬುದೇ ಅವರ ಭಾಷಣದ ಆಶಯವಾಗಿದ್ದಿತು. ಹಿಂದೀ ಒಕ್ಕೂಟದಲ್ಲಿ ಇರಬಯಸುವವರೆಲ್ಲ ಜಾತಿಭೇದವನ್ನೆಣಿಸದೆ ಹಿಂದೀ ಒಕ್ಕೂಟ ಸರಕಾರಕ್ಕೆ ನಿಷ್ಠರಾಗಿ ಉಳಿಯಲಿಕ್ಕೆಬೇಕೆಂಬದರಲ್ಲಿ ಮತ್ತು ಲಾಯಸೆನ್ಸ ಇಲ್ಲದ ಶಸ್ತ್ರಾಸ್ತ್ರಗಳನ್ನೆಲ್ಲ ಕೇಳದಲೆ ಒಪ್ಪಿಸಿಬಿಡಬೇಕೆಂಬುದರಲ್ಲ ಭಿನ್ನಾಭಿಪ್ರಾಯವಿಲ್ಲ. ಇವೆರಡೂ ಕರಾರುಗಳಲ್ಲದೆ ಮೂರನೆಯದೊಂದು ಕರಾರನ್ನು ಜೋಡಿಸಬೇಕೆಂದು ಗಾಂಧೀಜಿ ಆ ಗೆಳೆಯನಿಗೆ ತಿಳಿಸಿದರು. ಉಲ್ಲೇಖಿಸಿದ ಕರಾರುಗಳನ್ನು ಕಾರ್ಯರೂಪದಲ್ಲಿ ತರುವದರ ಹೊಣೆಯನ್ನು ಸರಕಾರಕ್ಕೇ ಬಿಟ್ಟುಕೊಡಬೇಕೆಂಬುದು ಆ ಮೂರನೆಯ ಕರಾರು.

ವೈಯಕ್ತಿಕ ಪ್ರತೀಕಾರ ಉಪಾಯವಲ್ಲ

ಪುರಾಣಾ ಕಿಲ್ಲೆಯಲ್ಲಿ ಸುಮಾರು ೫೦ ಸಾವಿರ ನಿರಾಶ್ರಿತರಿರುವರು ಮತ್ತು ಹುಮಾಯುನ ಸಮಾಧಿ ಸ್ಥಳದಲ್ಲಿ ಇನ್ನೂ ಕೆಲವು ನಿರಾಶ್ರಿತರಿರುವರು. ಅಲ್ಲಿಯ ಜೀವನ ಪರಿಸ್ಥಿತಿ ಅಷ್ಟೊಂದು ಸಮಾಧಾನಕರವಾಗಿರುವದಿಲ್ಲ. ಪಾಕಿಸ್ತಾನದಲ್ಲಿಯ ಹಿಂದು ಮತ್ತು ಸೀಖರ ಕಷ್ಟನಿಷ್ಠುರಗಳನ್ನು ಮತ್ತು ಹಿಂದೀ ಒಕ್ಕೂಟದಲ್ಲಿಯ ನಿರ್ವಾಸಿತರ ಕಷ್ಟ ನಿಷ್ಠುರಗಳನ್ನು ಹೇಳಿ ಇದನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುವದು ತಪ್ಪು. ಹಿಂದು ಮತ್ತು ಸೀಖರು ಕಷ್ಟನಿಷ್ಠುರಕ್ಕೊಳಗಾದರೆಂಬಲ್ಲಿ ಸಂದೇಹವಿಲ್ಲ. ಆತ್ಯಂತಿಕ ಕಷ್ಟನಿಷ್ಠುರಗಳನ್ನು ಸಹಿಸಿದರೆಂಬಲ್ಲಿಯೂ ಸಂದೇಹವಿಲ್ಲ. ಅವರಿಗಾಗಿ ನ್ಯಾಯವನ್ನು ದೊರಕಿಸಿಕೊಡುವದು ಹಿಂದೀ ಒಕ್ಕೂಟ ಸರಕಾರದ ಕರ್ತವ್ಯವಾಗಿದೆ. ಲಾಹೋರವು ಅನೇಕ ಶಿಕ್ಷಣ ಸಂಸ್ಥೆಗಳಿದ್ದ ಪ್ರಖ್ಯಾತ ನಗರವು. ಖಾಸಗಿ ಜನರು ಅವುಗಳನ್ನು ಸಂಸ್ಥಾಪಿಸಿದ್ದುಂಟು. ಪಂಜಾಬಿಗಳು ಬಹಳ ಉದ್ಯಮಶೀಲರು. ಹಣ ಹೇಗೆಸಂಪಾದಿಸಬೇಕು ಮತ್ತು ದಾನ ಧರ್ಮಗಳಲ್ಲಿ ಅದನ್ನು ಹೇಗೆ ವೆಚ್ಚ ಮಾಡಬೇಕೆಂಬುದು ಅವರಿಗೆ ಚೆನ್ನಾಗಿ ಗೊತ್ತು. ಲಾಹೋರಿನಲ್ಲಿ ಹಿಂದು ಮತ್ತು ಶೀಖರು ಸಂಸ್ಥಾಪಿಸಿದ ಮೊದಲನೆ ವರ್ಗದ ಆಸ್ಪತ್ರೆಗಳಿರುವುವು. ಅವೆಲ್ಲ ಸಂಸ್ಥೆಗಳನ್ನು ಮತ್ತು ಖಾಸಗಿ ಆಸ್ತಿಪಾಸ್ತಿಯನ್ನು ಆಯಾ ಒಡೆಯರಿಗೆ ಒಪ್ಪಿಸಿ ಕೊಡುವದು ಕರ್ತವ್ಯವಾಗಿದೆ. ವ್ಯಕ್ತಿಗಳ ಮೇಲೆ ಸೇಡು ತೀರಿಸಿಕೊಳ್ಳಬಯಸಿ ಹೀಗೆ ಮಾಡಲಾಗದು. ಹಿಂದೀ ಒಕ್ಕೂಟದಿಂದ ನ್ಯಾಯ್ಯವನ್ನು ಅಪೇಕ್ಷಿಸುವದು ಪಾಕಿಸ್ತಾನದ ಕರ್ತವ್ಯವಾಗಿರುವಂತೆ ಪಾಕಿಸ್ತಾನವು ತನ್ನ ಕರ್ತವ್ಯವನ್ನು ಮಾಡುವಂತೆ ನೋಡಿಕೊಳ್ಳುವದು, ಹಿಂದೀ ಒಕ್ಕೂಟ ಸರಕಾರದ ಕೆಲಸವಾಗಿದೆ. ಪರಸ್ಪರರ ದುರ್ಮಾರ್ಗಗಳನ್ನನುಸರಿಸಿದರೆ ನ್ಯಾಯ್ಯವನ್ನು ದೊರಕಿಸಲಾಗದು. ಇಬ್ಬರು ಕುದುರೆಯ ಮೇಲೆ ಸವಾರಿ ಮಾಡುತಿರುವಾಗ ಒಬ್ಬನು ಕೆಳಗೆ ಬಿದ್ದರೆ ಎರಡನೆಯವನೂ ಕೆಳಗೆ ಬೀಳತಕ್ಕದ್ದೊ? ಹಾಗೆ ಮಾಡಿದರೆ ಇಬ್ಬರ ಎಲುಬುಗಳೂ ಮುರಿದು ಪುಡಿಪುಡಿಯಾಗುವವು. ಮುಸಲ್ಮಾನ ಹಿಂದೀ ಒಕ್ಕೂಟಕ್ಕೆ ನಿಷ್ಠರಾಗುಳಿಯಲಿಲ್ಲೆಂದು ತಿಳಿಯುವಾ, ಅವರು ಶಸ್ತ್ರಾಸ್ತ್ರಗಳನ್ನು ತಂದು ಒಪ್ಪಿಸಲಿಲ್ಲೆಂದೂ ತಿಳಿಯುವಾ, ಆ ಕಾರಣದಿಂದ ನಿರಪರಾಧಿ ಸ್ತ್ರೀಪುರುಷರ ಮಕ್ಕಳ ಕೊಲೆ ಮಾಡತಕ್ಕದ್ದೊ? ರಾಷ್ಟ್ರದ್ರೋಹಿಗಳಿಗೆ ಯೋಗ್ಯ ರೀತಿಯಿಂದ ಶಾಸನ ಮಾಡುವದು ಸರಕಾರದ ಕರ್ತವ್ಯ. ಪಾಶವೀ ವೃತ್ತಿಗಿಳಿದು ಎರಡೂ ರಾಷ್ಟ್ರಗಳಲ್ಲಿಯ ಜನರು ಜಗತ್ತಿನಲ್ಲಿ ಹಿಂದುಸ್ತಾನವು ಸಂಪಾದಿಸಿದ ಧವಳ ಕೀರ್ತಿಗೆ ಕಲಂಕ ತಂದರು. ಇದರಿಂದಭಾರತೀಯರುದಾಸ್ಯವನ್ನು ಬರಮಾಡುತಿರುವರಲ್ಲದೆ ತಮ್ಮ ಶ್ರೇಷ್ಠ ಧರ್ಮವನ್ನು ಹಾಳು ಮಾಡುತಿದ್ದಾರು. ಹಾಗೆಮಾಡಲು ಅವರು ಸ್ವತಂತ್ರರು.] ಹಿಂದುಸ್ತಾನದ ಸ್ವಾತಂತ್ರ್ಯ ಸಂಪಾದನೆಯಲ್ಲಿ ಯಾರು ತಮ ಪ್ರಾಣವನ್ನೆ ಪಣಕ್ಕೆ ಹಚ್ಚಿದ್ದರೊ ಅಂಥವರು ಆ ಸ್ವಾತಂತ್ರ್ಯದ ನಾಶಕ್ಕೆ ಎಂದಿಗೂ ಸಾಕ್ಷೀಭೂತರಾಗಿ ನಿಲ್ಲಬಯಸಲಾರರು. ಈಕಾಳ್ಗಿಚ್ಚನ್ನಾರಿಸಲು ಇಲ್ಲವೆ ಕಣ್ಣುಮುಚ್ಚಲು ತಾವು ಪರಮಾತ್ಮನನ್ನು ಕ್ಷಣಕ್ಕೆ ಪ್ರಾರ್ಥಿಸುತ್ತೇವೆಂದು ಗಾಂಧೀಜಿ ನುಡಿದರು.

ಮುಸ್ಲಿಮ ಮಿತ್ರರಿಂದ ತಂತಿಗಳು

ಅಮ್ಮಾನ್ ಮತ್ತು ಮಧ್ಯಪೂರ್ವದಲ್ಲಿಯ ಇನ್ನೊಂದು ಸ್ಥಳದಿಂದ ಮುಸಲ್ಮಾನ ಮಿತ್ರರಿಂದ ಸದ್ಯದ ಭ್ರಾತೃಹತ್ಯೆ ತಾತ್ಕಾಲಿಕವಾಗಿದೆ ಹಿಂದುಸ್ತಾನವು ಬೇಗ ತನ್ನ ಮೊದಲಿನ ವೈಭವವನ್ನು ಮುಟ್ಟುವದು ಮತ್ತು ಹಿಂದುಮುಸಲ್ಮಾನರು ಬಂಧುಗಳಂತೆ ಬಾಳುವರು ಎಂಬ ಆಶಯದ ತಂತಿಗಳು ಬಂದುದನ್ನು ಗಾಂಧೀಜಿ ಉಲ್ಲೇಖಿಸಿದರು.

ತೀರ ಹೇಡಿತನ ಮತ್ತು ಅಮಾನುಷ

ದಿಲ್ಲಿಯ ಆಸ್ಪತ್ರೆಯೊಂದರ ಮೇಲೆ ಸಮೀಪದ ಹಳ್ಳಿಯ ಪುಂಡರು ಹಾಳಿ ಮಾಡಿದ್ದರ ಪರಿಣಾಮವಾಗಿ ನಾಲ್ಕು ಜನ ರೋಗಿಗಳು ಕೊಲ್ಲಲ್ಪಟ್ಟು ಇನ್ನು ಹಲವರಿಗೆ ಗಾಯಗಳಾದ ವರದಿಯನ್ನು ಗಾಂಧೀಜಿ ವಿಷಾದಪೂರ್ವಕವಾಗಿ ಉಲ್ಲೇಖಿಸಿದರು. ಅತ್ಯಂತ ಹೇಡಿತನದ ಮತ್ತು ಅಮಾನುಷ ಕೃತ್ಯವಿದಾಗಿದ್ದು ಯಾವ ಪರಿಸ್ಥಿತಿಯಲ್ಲಿಯೂ ಇದು ಸಮರ್ಥನೀಯವಾಗಲಾರದು.

ನೈನಿಯಿಂದ ಅಲಹಾಬಾದಕ್ಕೆ ಬರುವಾಗ ಕೆಲ ಮುಸಲ್ಮಾನ ಪ್ರವಾಸಿಕರನ್ನು ಗಾಡಿಯು ನಡೆಯುತಿರುವಾಗಲೆ ಹೊರಗೆ ನೂಕಿದ ವರದಿಯೊಂದು ಬಂದಿದೆ. ಇಂಥ ಕೃತಿಗಳ ಹಿನ್ನೆಲೆಯ ಅರ್ಥವೆ ನನಗಾಗಲೊಲ್ಲದು. ಇಂಥ ಕೃತಿಗಳಿಂದ ನಾಚಿಗೆಯಿಂದ ತಲೆ ಕೆಳಗೆ ಹಾಕಬೇಕಾಗಿದೆಯೆಂದು ಗಾಂಧೀಜಿ ನುಡಿದರು.

ಬಿರ್ಲಾಭವನ, ಹೊಸದಿಲ್ಲಿ ೨—೧೦—೪೭

ಶೀಖ ಗುರುಗಳ ಸಂದೇಶ

ಬಾಬೂ ಸರದಾರ ಖರಕಸಿಂಗರ ಕಾರ್ಯದರ್ಶಿ ಸರದಾರ ಸಂತೋಖಸಿಂಗರೊಡನೆ ಈ ದಿನ ಆದ ಮಾತುಕತೆಗಳನ್ನು ಉಲ್ಲೇಖಿಸುತ್ತ ಗಾಂಧೀಜಿ ಈ ದಿನದ ಚರ್ಚೆಯನ್ನು ಪ್ರಾರಂಭಿಸಿದರು. ಗುರುಅರ್ಜುನದೇವರಗ್ರಂಥದಿಂದಂದ ಗಾಂಧೀಜಿ ಹೇಳಿದ್ದನ್ನೆ ಗುರುಗೋವಿಂದಸಿಂಗರು ಹೇಳಿರುವದಾಗಿ ಈ ಗೆಳೆಯರು ಹೇಳಿದರು: ಗುರುಗೋವಿಂದಸಿಂಗರು ಮುಸಲ್ಮಾನರನ್ನು ಕೊಲ್ಲಲು

[೯ನೇ ಪುಟಕ್ಕೆ]

ಕರ್ನಾಟಕ ... ಪ್ರೆಸ್ಸಿನ ... ದ ಪರವಾಗಿ ... ರಿಂದ ಮುದ್ರಿತವು.

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

(೮ನೇ ಪುಟದಿಂದ)

ತಮ್ಮ ಅನುಯಾಯಿಗಳಿಗೆ ಹೇಳಿದರೆಂದು ಅನೇಕ ಜನರು ತಪ್ಪಾಗಿ ಭಾವಿಸುವರಲ್ಲದೆ ಅನೇಕ ಶೀಖರೂ ಈ ಸಂದರ್ಭದಲ್ಲಿ ಅಜ್ಞರಾಗಿರುವರು. ಗಾಂಧೀಜಿಯವರು ೧೦ ನೇ ಗುರುವಿನ ಭಜನೆಯನ್ನು ಓದಿ ತೋರಿಸಿದರು. ಹೀಗೆ, ಎಲ್ಲಿ, ಮತ್ತು ಯಾವ ಹೆಸರಿನಿಂದ ಮಾನವನು ಈಶ್ವರ ಮಾತ್ಮನನ್ನು ಪೂಜಿಸಿದರೂ ನಡೆಯುವದು ಎಂದು ಅದರಲ್ಲಿ ಬರೆಯಲಾಗಿತ್ತು. ಪ್ರತಿಯೊಬ್ಬನಿಗೂ ಪರಮಾತ್ಮನು ಅವನೇ, ಅಲ್ಲದೆ ಮನುಷ್ಯನೂ ಅದೇ ವರ್ಗದವನು. ಮಾನವ ಜಾತಿಯನ್ನು ಪ್ರತ್ಯೇಕಿಸಲಾಗುವದಿಲ್ಲ ಎಂಬದಾಗಿ ಗುರು ಗೋವಿಂದಸಿಂಗನು ಹೇಳಿರುವನು. ವ್ಯಕ್ತಿಗಳು ಸ್ವಭಾವತಃ ರೂಪತಃ ಭಿನ್ನರಾಗಿದ್ದರೂ ಎಲ್ಲರೂ ಒಂದೇ ಪಡಿಯಚ್ಚಿನಲ್ಲಿ ಹೊಯ್ಯಲ್ಪಟ್ಟವರು. ಎಲ್ಲರಲ್ಲಿಯೂ ಅದೇ ಇಂಗಿತ ಭಾವನೆಗಳು. ಎಲ್ಲರೂ ಮರಣ ಹೊಂದಿ ಮಣ್ಣಿನಲ್ಲಿ ಬೆರೆತು ಹೋಗುವರು. ವಾಯು, ಸೂರ್ಯ ಎಲ್ಲರಿಗೂ ಒಬ್ಬರೆ. ಗಂಗಾಮಾತೆಯೇನು ಮುಸಲ್ಮಾನರನ್ನು ಶುದ್ಧಗೊಳಿಸುವದಿಲ್ಲೆಂದು ಹೇಳಲಾರಳು. ಮೇಘಗಳು ಎಲ್ಲೆಡೆಗೆ ಒಂದೇ ಸವನೆ ಮಳೆಗರೆಯುವವು. ತಾನು ಮತ್ತು ತನ್ನ ಬಾಂಧವನಲ್ಲಿ ಭೇದಭಾವ ಮಾಡುವವನು ಅನಾಗರಿಕ ಮನುಷ್ಯನೇ. ಅದುದರಿಂದ ಶ್ರೇಷ್ಠ ಶೀಖ ಗುರುಗಳು ಮತ್ತು ಉಳಿದ ಧಾರ್ಮಿಕ ಧುರೀಣರ ವಾಕ್ಯಗಳಲ್ಲಿ ವಿಶ್ವಾಸವಿದ್ದರೆ ಹಿಂದೀ ಒಕ್ಕೂಟದಲ್ಲಿ ಕೇವಲ ಹಿಂದುಗಳಿಂದಲೆ ಕೂಡಿದ ವಿಶುದ್ಧ ಹಿಂದೂ ಸರಕಾರವೇ ಹಿಂದೀ ಒಕ್ಕೂಟ ಸರಕಾರ ಆಗತಕ್ಕದ್ದೆಂದು ಹೇಳುವದು ಸಂಪೂರ್ಣ ಸುಳ್ಳು ಎಂಬದನ್ನು ಎಲ್ಲರೂ ತಿಳಿದುಕೊಳ್ಳತಕ್ಕದ್ದು.

ಕೃಪಾಣದ ಸದುಪಯೋಗ

ಹೀಗೆ ಹೇಳಿದಾಕ್ಷಣ ಶೀಖರು ಅಹಿಂಸಾಬದ್ಧರಾಗಿರುವರೆಂದು ನನ್ನ ಅಭಿಪ್ರಾಯವಲ್ಲ ಎಂದು ಗಾಂಧೀಜಿ ಮುಂದುವರಿದರು. ಶೀಖರೇನು ಹಾಗೆ ಅಹಿಂಸಾಬದ್ಧರಾಗಿಲ್ಲ. ಗುರುಗೋವಿಂದ ಸಿಂಗರ ಧಿನಾಚರಣೆಯ ದಿನ ಮುಸಲ್ಮಾನರು ತಮ್ಮ ಧರ್ಮವನ್ನು ಮೀರಿ ವರ್ತಿಸಿದ್ದರಿಂದ ಅವರೊಡನೆ ಹೋರಾಡಲು ತಾವು ವಿಧಿಸಿದುದಾಗಿ ಸರದಾರರು ನನಗೆ ತಿಳಿಸಿದರು. ನಿರಪರಾಧಿಗಳ ರಕ್ಷಣೆಗಾಗಿ ಇದ್ದ ಅಸ್ತ್ರ ಸೀಖರು ವಹಿಸುತಿರುವ ಕೃಪಾಣ. ಒತ್ತಾಳಿಕೆಯ ವಿರುದ್ಧ ಹೋರಾಡುವ ಅಸ್ತ್ರವದು. ನಿರಪರಾಧಿಗಳನ್ನು ಇಲ್ಲವೆ ಹೆಂಗಸರು ಮಕ್ಕಳನ್ನು ಕೊಲ್ಲಲು ಅಥವಾ ಮುದುಕರನ್ನು ಇಲ್ಲವೆ ಅಂಗಹೀನರನ್ನು ಕೊಲ್ಲಲಿಕ್ಕೆ ಅದಿರುವದಿಲ್ಲ. ಮುಸಲ್ಮಾನರ ವಿರುದ್ಧ ನಡೆಸಿದ ಯುದ್ಧದಲ್ಲಿಯೂ ಎರಡೂ ಪಕ್ಷಗಳಲ್ಲಿಯ ಗಾಯಾಳುಗಳನ್ನು ಉಪಚರಿಸಬೇಕೆಂದು ಅವರ ಧರ್ಮ. ಆದರೀಗ ಅನೇಕ ಸಲ ಕೃಪಾಣದ ಉಪಯೋಗ ತೀರ ತಪ್ಪಾದ ಉದ್ದೇಶಕ್ಕಾಗಿ ಮಾಡಲಾಗುತ್ತಿದೆ. ಮತ್ತು ಯಾವನು ಅದರ ದುರುಪಯೋಗ ಮಾಡುವನೋ ಅವನಿಗೆ ಅದನ್ನು ಧರಿಸುವ ಹಕ್ಕೇ ಇರುವದಿಲ್ಲ.

ಹುಟ್ಟುಹಬ್ಬದ ಶುಭ ಸಂದೇಶಗಳು

ಇಂದು ತಮ್ಮನ್ನು ಕಾಣಲಿಕ್ಕೆ ಬಂದ ಪರದೇಶ ರಾಯಭಾರ ಪ್ರತಿನಿಧಿಗಳು, ಸತಿ ಮೌಂಟಬ್ಯಾಟರನ್ನೊಳಗೊಂಡು ಅನೇಕ ಸಂದರ್ಶಕರು ತಮ್ಮನ್ನು ಕಂಡು ಹೋದುದನ್ನು ಗಾಂಧೀಜಿಯವರು ಅನಂತರ ವಿವರಿಸಿದರು. ಎಲ್ಲರೂ ಅವರನ್ನು ಅಭಿನಂದಿಸಲು ಬಂದವರು. ಹಿಂದುಸ್ತಾನದಿಂದ ಮತ್ತು ಹೊರಗಿನಿಂದ ಅನೇಕ ತಂತಿ ಶುಭ ಸಂದೇಶಗಳು ಬಂದುದನ್ನು ಗಾಂಧೀಜಿ ಉಲ್ಲೇಖಿಸಿದರು. ವ್ಯಕ್ತಿಶಃ ಎಲ್ಲರಿಗೂ ಉತ್ತರ ಕೊಡುವದು ಶಕ್ಯವೇ ಇಲ್ಲ. ಆದರೆ ಈ ಅಭಿನಂದನ ಸಂದೇಶಗಳು ನಿಜವಾಗಿ ಅವನ್ನು ಶೋಕಸೂಚನೆಗಳೆಂದು ಹೇಳುವುದು ಹೆಚ್ಚು ಅನ್ವರ್ಥಕವಾಗಬಲ್ಲುದು ಎಂದು ಗಾಂಧೀಜಿ ಮನಸ್ಸಿನಲ್ಲಿಯೇ ವಿಚಾರಿಸಿದರು. ನಿರ್ವಾಸಿತರಿಂದಲೂ ಫಲಪುಷ್ಪಗಳು ಬಂದಿವೆಯಲ್ಲದೆ ಹಣ ಮತ್ತು ಶುಭಸಂದೇಶಗಳು ಬಂದಿವೆ. ಆದರೆ ನನ್ನ ಹೃದಯದಲ್ಲಿ ದುಃಖದ ಹೊರತು ಬೇರೆ ಯಾವುದೂ ಇರುವುದಿಲ್ಲ. ನಾನು ಹೇಳಿದುದನ್ನೆಲ್ಲ ಜನಸಾಮಾನ್ಯರು ಮಾಡುವ ಕಾಲ ಒಂದಿತ್ತು. ಅದರಿಂದು ನನ್ನ ಕೂಗು ಒಬ್ಬನ ಕೂಗೇ. ಹಿಂದೀ ಒಕ್ಕೂಟದಲ್ಲಿ ಮುಸಲ್ಮಾನರನ್ನು ಇರಗೊಡುವದಿಲ್ಲ ಎಂಬುದಾಗಿಯೆ ಎಲ್ಲರ ಬಾಯಿಂದ ಉದ್ಗಾರಗಳು ಹೊರಡುವವು. ಇಂದು ಮುಸಲ್ಮಾನರ ವಿರುದ್ಧ ಈ ಕೂಗು ಇದ್ದರೆ ನಾಳೆ ಪಾರಸಿಗಳು ಕ್ರಿಶ್ಚನ್ನರ ಮತ್ತು ಯುರೋಪಿಯನ್ನರ ಗತಿಯೇನಾಗಬಲ್ಲುದು ? ನಾನು ೧೨೫ ವರುಷ ಬಾಳಬೇಕೆಂದು ಅನೇಕರು ಹರಸಿದ್ದುಂಟು, ಆದರೆ ನನ್ನ ಇಚ್ಛೆ ಬಹಳ ದಿನ ಬಾಳುವದಿಲ್ಲ ೧೨೫ ವರ್ಷಗಳ ವರೆಗೆ ಬಾಳುವ ಮಾತಂತೂ ದೂರೇ ಉಳಿಯಿತು. ನನ್ನ ಮೇಲೆ ಸುರಿಸಿದ ಈ ಅಭಿನಂದನಪರ ಸಂದೇಶಗಳು ತೀರ ಅನುಚಿತವಾಗಿವೆ. ವಾತಾವರಣವೆಲ್ಲ ಹೊಟ್ಟೆಕಿಚ್ಚು ಮತ್ತು ಕೊಲೆಗಳಿಂದ ದೂಷಿತವಾಗಿರುವಾಗ ನಾನು ಬದುಕಿ ಉಳಿಯಲಾರೆ. ಅದುದರಿಂದ ಸದ್ಯದ ಹುಚ್ಚಾಟವನ್ನೆಲ್ಲ ಬಿಟ್ಟುಗೊಡಬೇಕೆಂದು ನಾನು ಕೇಳಿಕೊಳ್ಳುವೆ. ಪಾಕಿಸ್ತಾನದಲ್ಲಿಯ ಮುಸಲ್ಮಾನೇತರರಿಗೆ ಏನೇ ಕಷ್ಟನಿಷ್ಠುರಗಳು ಬಂದರೂ ಪರಿವೆ ಇಲ್ಲ. ಒಂದು ಪಕ್ಷವು ಹೀನ ಸ್ಥಿತಿಗಿಳಿದರೆ ಎರಡನೆಯದೂ ಅದೇ ದಾರಿಯನ್ನು ಹಿಡಿಯಬಾರದು. ಇಂಥ ಮೂರ್ಖ ಕೃತ್ಯಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ವಿಚಾರ ಮಾಡಿರಿ, ಒಳಗಿದ್ದ ಹೊಟ್ಟೆಕಿಚ್ಚನ್ನು ತೊಡೆದುಹಾಕಿರಿ. ಸರಕಾರದ ಎದುರಿಗೆ ನಿಮ್ಮ ಕಷ್ಟನಿಷ್ಠುರಗಳನ್ನಿಟ್ಟು ಅವುಗಳ ಪರಿಹಾರ ಮಾಡಿಕೊಳ್ಳುವದು ನಿಮ್ಮ ಕರ್ತವ್ಯವಾಗಿದೆ ಆದರೆ ನೀವೇ ಮನಸ್ಸಿಗೆ ಬಂದಂತೆ ವರ್ತಿಸುವದು ತೀರ ತಪ್ಪು. ಹಾಗೆ ಮಾಡಿದ್ದಾದರೆ ಎಲ್ಲರಿಗೂ ಹಾನಿ ಸಂಭವಿಸುವದು.

ಎಲ್ಲರೂ ಸಮಾನಾಪರಾಧಿಗಳು

ಅಭಿನಂದನಪರ ತಂತಿಗಳು ಮಹಾತ್ಮರಲ್ಲಿ ಸುರಿಯುತ್ತಲಿವೆ. ತಮ್ಮ ದೈಹಿಕ ಅಸಾಮರ್ಥ್ಯದಿಂದ ಅವುಗಳಿಗೆ ಉತ್ತರ ಕೊಡದಿದ್ದ ವಿಷಯವನ್ನೆತ್ತಿದರು. ಕೆಲ ಸಂದೇಶಗಳನ್ನು ಪ್ರಕಟಿಸಬೇಕೆಂದು ಕೆಲ ಗೆಳೆಯರು ಸೂಚಿಸಿದ್ದರು. ಮುಸಲ್ಮಾನ ಮಿತ್ರರಿಂದಲೂ ಸಹ ಸುಂದರ ಸಂದೇಶಗಳೆಷ್ಟೊ ಬಂದಿವೆ. ಆದರೆ ಅಹಿಂಸೆ ಸತ್ಯಗಳಲ್ಲಿ ನಂಬುಗೆಯಿಲ್ಲದ ಸಾರ್ವಜನಿಕರಿಗೆ ಅವುಗಳ ಪ್ರಸಿದ್ಧಿಯಿಂದ ಈಗ ಹಿತವಾಗಲಿಕ್ಕಿಲ್ಲವಾದ್ದರಿಂದ ಇದು ಅವುಗಳ ಪ್ರಕಟನೆಗೆ ಯೋಗ್ಯಸಮಯವಲ್ಲವೆಂದು ಅಭಿಪ್ರಾಯ ಪಟ್ಟರು. ದುಷ್ಕೃತ್ಯಗಳನ್ನೆಸಗುವವರು ಯಾರೇ ಇದ್ದರೂ ಅವರೆಲ್ಲ ಸಮಾನಾಪರಾಧಿಗಳೆ.

ಸತ್ಯಾಗ್ರಹ ಮತ್ತು ದುರಾಗ್ರಹ

ಎಷ್ಟೋ ಎಡೆಗಳಲ್ಲಿ ಸತ್ಯಾಗ್ರಹ ಪ್ರಾರಂಭವಾದ ಸುದ್ದಿಯು ಇಂದು ಅವರಿಗೆ ಬಂದಿದೆ. ಸತ್ಯಾಗ್ರಹದ ಹೆಸರಿನಲ್ಲಿ ಅದು ನಿಜವಾಗಿಯೂ ದುರಾಗ್ರಹವಿರಲಿಕ್ಕಿಲ್ಲವೇ! ಎಂದು ಅವರಿಗೆ ಆಶ್ಚರ್ಯ. ಗಿರಣಿ, ರೇಲ್ವೆ, ಅಂಚೆಗಳಲ್ಲಿಯ ಸಂಪುಗಳೇ ಇರಲಿ, ಸಂಸ್ಥಾನಗಳಲ್ಲಿಯ ಸತ್ಯಾಗ್ರಹಗಳೇ ಇರಲಿ ಅಧಿಕಾರ ಗ್ರಹಣವೇ ಅವುಗಳೆಲ್ಲದಗಿದಂತೆ ತೋರುತ್ತದೆ. ಘೋರ ವಿಷವೊಂದು ಇಂದು ಸಮಾಜವನ್ನು ಸುಡುತ್ತಿದ್ದು, ಸಾಧನ ಸಾಧ್ಯಗಳು ಅದಲು ಬದಲಾಗುವ ಶಬ್ದಗಳೆಂಬದನ್ನು ಕೂಡ ವಿಚಾರಿಸದಂಥವರಿಂದಲೇ ಗುರಿ ಸಾಧಿಸುವ ಪ್ರಸಂಗಗಳೆಲ್ಲವೂ ಆಕ್ರಮಿತವಾಗಿವೆ.

ಸತ್ಕಾರ್ಯವೇ ಆಶೀರ್ವಾದ

ಜನರ ಕಾರ್ಯಗಳಿಗಾಗಲೀ, ತಮ್ಮ ಚಳುವಳಿಯನ್ನು ಪ್ರಾರಂಭಿಸುವದಕ್ಕಾಗಲೀ, ಆಶೀರ್ವಾದವನ್ನಾಶಿಸುವ ಓಲೆಗಳು ಕೂಡ ಬರುತ್ತಿರುವ ವಿಷಯವನ್ನು ಗಾಂಧಿಯವರು ಎತ್ತಿದರು. ಸತ್ಕಾರ್ಯಗಳೆಲ್ಲವೂ ಆಶೀರ್ವಾದಗಳನ್ನು ಹೊತ್ತುಕೊಂಡೇ ಬರುತ್ತವಾದ್ದರಿಂದ ಅವಕ್ಕೆ ಯಾರ ಬೆಂಬಲವೂ ಅನವಶ್ಯವೆಂದು ಅವರ ಅಭಿಪ್ರಾಯ. ಸತ್ಕಾರ್ಯದಲ್ಲಿ ತೊಡಗಿದ ಸದ್ಗೃಹಸ್ಥನೊಬ್ಬರು ಅವರೆಡೆಗೆ ಬಂದಾಗ ಈ ತತ್ವವನ್ನು ಕೂಡಲೇ ತಿಳಿದುಕೊಂಡರು. ಸತ್ಯವು ಯಾವಾಗಲೂ ಸುಸ್ಪಷ್ಟವಿದ್ದು ಎಂತಹ ಪ್ರಸಂಗಗಳಲ್ಲಿಯೂ ಅದನ್ನನುಸರಿಸುತಿರುವದು ಪ್ರತಿಯೊಬ್ಬನ ಕರ್ತವ್ಯ. ಸತ್ಯಾಗ್ರಹಕ್ಕಂಟಿಕೊಂಡವರು ತಾವು ಅರಸುತ್ತಿರುವದು ಸತ್ಯವೇ ಎಂಬ ಬಗ್ಗೆ ತಮ್ಮ ಹೃದಯಪರಿಶೀಲನೆಯನ್ನು ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಅಗ್ರಹವು ಅಣಕವೆನಿಸುತ್ತದೆ. ನಿಜವಾಗಿಯೂ ತಮ್ಮದಲ್ಲದ್ದನ್ನು ಪಡೆಯಲುಯತ್ನಿಸುವವರು ಅಹಿಂಸೆಯನ್ನು ಅನುಸರಿಸುವದು ಸಾಧ್ಯವಿಲ್ಲವೆಂದು ಖಂಡಿತವಾಗಿ ಹೇಳಿದರು. ಮತ್ತು ಅಹಿಂಸೆಯನ್ನನುಸರಿಸದೆ ಸತ್ಯವು ಸಿಗಲಾರದು.

ನಿರಾಶ್ರಿತರ ಶಿಬಿರಗಳ ಆರೋಗ್ಯ ರಕ್ಷಣೆ

ತರುವಾಯ ಗಾಂಧೀಜಿಯವರು ಇಲ್ಲಿಯ ನಿರಾಶ್ರಿತ ಶಿಬಿರಗಳಲ್ಲಿಯ ಮತ್ತು ನಗರದಲ್ಲಿಯ ಅಸ್ವಚ್ಛತೆಯ ವಿಷಯವನ್ನೆತ್ತಿದರು. ತನಗಾಗಿ ಭಂಗೀ ಕೆಲಸ ಮಾಡುವದು ಪ್ರತಿಯೊಬ್ಬನಿಗೂ ಬೇಕಾಗಿದೆ. ಶಿಬಿರಗಳಲ್ಲಿಲ್ಲದ ಜನರು ತಮ್ಮ ಸುತ್ತುಮುತ್ತಲಿನ ಸ್ವಚ್ಛತೆಯನ್ನು ಕಾಯ್ದುಕೊಳ್ಳಬೇಕು. ಅಸ್ಪೃಶ್ಯತೆಯ ಕುಂದು ಹಿಂದು ಧರ್ಮದ ಕೀರ್ತಿಯನ್ನು ಕಲಂಕಗೊಳಿಸುತ್ತಿದೆ. ಈ ಕುಂದನ್ನಳಿಸಬೇಕಾದರೆ ಪ್ರತಿಯೊಬ್ಬನು ಭಂಗಿಯಾಗುವದು ಒಂದು ಮಾರ್ಗ. ಕಸಗುಡಿಸುವವರ ಕೆಲಸವುಹೊಲಸುಕೆಲಸವಲ್ಲ. ಸ್ವಚ್ಛತೆಗಾಗಿ ಮಾಡತಕ್ಕ ಕೆಲಸವದು. ನಗರದ ಸ್ವಚ್ಛತೆಗಾಗಿ ದಿಲ್ಲಿಯ ಪ್ರತಿಯೊಬ್ಬ ನಾಗರಿಕನೂ ಯತ್ನಿಸಿದಲ್ಲಿ ಅವನು ದಿಲ್ಲಿಯನ್ನು ಸುಂದರ ಮಾಡಬಲ್ಲನಷ್ಟೇ ಅಲ್ಲ, ಅವನ ಉದಾಹರಣೆಯು ಒಳ್ಳೇ ಆಳವಾದ ಪರಿಣಾಮವನ್ನುಂಟು ಮಾಡುತ್ತದೆ. ಶಿಬಿರಾಧಿಕಾರಿಗಳು ತಾವೇ ಇದ್ದ ಪಕ್ಷದಲ್ಲಿ ಎಲ್ಲ ಕೆಲಸಗಳನ್ನೂ ನಿರಾಶ್ರಿತರು ತಾವಾಗಿಯೇ ಮಾಡಿಕೊಳ್ಳುವಂತೆ ಪ್ರೇರೇಪಿಸುತ್ತಿದ್ದೆವೆಂದು ಹೇಳಿದರು. ಅಲಸತನದಿಂದ ಉದರ ನಿರ್ವಹಣ ಮಾಡುತ್ತ ಇಸ್ಪೇಟು ಜೂಜಾಟಗಳಲ್ಲಿ ದಿನಗಳೆಯುವದು ಪ್ರತಿಯೊಬ್ಬನಿಗೂ ಅನೈತಿಕವು. ನೂಲುವ ನೇಯುವ, ಹೊಲಿಯುವ ಬಡಿಗತನದ ಒಕ್ಕಲತನದ ಅಥವಾ ಇತರ ಯಾವದೇ ತಮಗೆ ಸರಿಯೆನಿಸುವ ಕೈಗಾರಿಕೆಗಂಟಿಕೊಳ್ಳುವದರಲ್ಲಿ ಎಲ್ಲರೂ ಆನಂದ ಪಡಬೇಕು. ಎರಡನೆಯವರ ದುಡಿತದ ಮೇಲೆ ಅವಲಂಬಿಸದೆ ತಮ್ಮ ಕಾಲುಗಳ ಮೇಲೆ ತಾವು ನಿಲ್ಲಬೇಕು. ತಾವು ಕೈಕೊಂಡ ಕೆಲಸಗಳಲ್ಲಿ ನಿರತರಾದರೆ ತಮ್ಮ ದುಃಖಗಳನ್ನು ಸಹ ಮರೆಯುವದು ನಿಶ್ಚಯ. ಗಾಂಧಿಯವರು, ಅವರು ಸಹಿಸಬೇಕಾದ ಕಷ್ಟಗಳ ಅರಿವು ತಮಗಿದೆಯೆಂದೂ ಅವರನ್ನು ಅಷ್ಟೊಂದು ಕಷ್ಟಗಳಿಗೀಡುಮಾಡಿದವರನ್ನು ಕ್ಷಣಸಹ ಕ್ಷಮಿಸಲಾರೆನೆಂದೂ ಹೇಳಿದರು. ಆದರೆ ಅನಿಷ್ಟಕ್ಕೆ ಪ್ರತಿಯಾಗಿ ಇಷ್ಟಬಯಸುವದೇ ಸರಿಯಾದ ಮಾರ್ಗವೆಂಬದನ್ನು ಮತ್ತೂ ಮತ್ತೂ ತಾವು ಒತ್ತಿ ಹೇಳುವದಾಗಿ ನುಡಿದರು.

ಫ್ರೆಂಚನ ಉಪದೇಶ

ಕೈಕೊಂಡ ಕಾರ್ಯವನ್ನು ಕೊನೆಗೊಳಿಸಲು ೧೨೫ ವರುಷಗಳ ವರೆಗೆ ಬದುಕುವ ಮನಮಾಡಬೇಕೆಂದು, ಅಭಿನಂದಿಸುವಾಗ ಒತ್ತಾಯಪಡಿಸಿದ ಒಬ್ಬ ದಯಾಳು ಫ್ರೆಂಚನ ವಿಷಯವನ್ನು ಗಾಂಧೀಜಿಯವರು ಎತ್ತಿದರು. ಗೆಳೆಯನು ಮಹಾತ್ಮರು ಎಷ್ಟೋ ಕಾರ್ಯವನ್ನು ಸಾಧಿಸಿರುವದ್ದಾಗಿಯೂ ಮತ್ತು ಪ್ರತಿಯೊಂದು ಘಟನೆಗೂ ದೇವರೇ ಹೊಣೆಯಾಗಿದ್ದಲ್ಲಿ, ಅವನು (ದೇವರು) ಅನಿಷ್ಟದಿಂದಲೇ ಇಷ್ಟವನ್ನು ಮಾಡುವನಾಗಿರಬೇಕೆಂದೂ ನುಡಿದನು. ಗಾಂಧೀಜಿಯವರು ನಿರಾಶೆ ಹೊಂದುವಇಲ್ಲವೆನಿರುತ್ಸಾಹ ಪಡುವ ಕಾರಣವಿಲ್ಲ. ಸವಿನುಡಿಗಳಿಂದ ಆತ್ಮವಂಚನೆ ಮಾಡಿಕೊಳ್ಳಲಾರೆನೆಂದು ನುಡಿದರು, ತಾವು ಹಿಂದೆ ಸಾಧಿಸಿದ್ದೆಲ್ಲವನ್ನು ಇಂದು ಮರೆಯಬೇಕಾಗಿದೆಯೆಂದು ಹೇಳಿದರು. ತಾನು ಹಿಂದೆ ಸಾಧಿಸಿದ್ದರ ಮೇಲೆಯೇ ಯಾವನೂ ಜೀವಿಸಲಾರನು. ಜನರಿಗೆ ಸೇವೆ ಸಲ್ಲಿಸಬಹುದೆಂದು ತಮಗೆನಿಸಿದಾಗಲೇ ತಾವು ಬದುಕಲಿಚ್ಛಿಸುವೆವಾಗಿ ನುಡಿದರು. ಅಂದರೆ, ಜನರು ತಾವು ಅನುಸರಿಸುತ್ತಿರುವ ಮಾರ್ಗದ ತಪ್ಪನ್ನು ತಿಳಿದುಕೊಂಡು ಗಾಂಧೀಜಿಯ ಮಾತಿಗೆ ಕಿವಿಗೊಡಬೇಕು. ತಾವು ದೇವರ ಕೈಯಲ್ಲಿದ್ದು ತಮ್ಮಿಂದ ಕೆಲಸ ತೆಗೆದುಕೊಳ್ಳಲು ದೇವರ ಇಚ್ಛೆಇದ್ದಲ್ಲಿ ಮಾತ್ರ ತಾವು ಹಾಗೆ ಮಾಡುವದಾಗಿ ಹೇಳಿದರು. ಆದರೆ ಇಂದು ಅವರ ಶಬ್ದಗಳಿಗೆ ಬೆಲೆಇಲ್ಲದೆ ತಾವು ಸೇವೆ ಸಲ್ಲಿಸಲು ಅಸಮರ್ಥರಾಗಿರುವದರಿಂದ ದೇವರು ಒಯ್ದರೇನೇ ಉತ್ತಮವೆಂದು ಹೇಳಿದರು.

ಭಿರ್ಲಾ ಭವನ, ಹೊಸದಿಲ್ಲಿ
೪—೧೦—೪೭

ಕಂಬಳಿಗಳಿಗಾಗಿ ಬಿನ್ನಹ

ಗಾಂಧೀಜಿಯವರು ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ, ಎದುರಿಗೆ ಕುಳಿತಿರುವ ಡಾ. ಸುಶೀಲಾ ನಾಯರರ ಕಡೆಗೆ ಬೊಟ್ಟು ಮಾಡಿ, ಅವರು ಈಗ ಸದ್ಯಕ್ಕೆ ಹಿಂದು ಮುಸಲ್ಮಾನರ ಭೇದ ಭಾವವಿಲ್ಲದೆ ನಿರಾಶ್ರಿತರಿಗೆ ಔಷಧ ಸಹಾಯ ನೀಡುವ ಕೆಲಸದಲ್ಲಿ ನಿರತರಾಗಿರುವವಾಗಿ ಹೇಳಿದರು. ಪುರಾಣ ಕಿಲ್ಲೆಯಲ್ಲಿರುವ ಮುಸಲ್ಮಾನ ನಿರಾಶ್ರಿತರಿಗೆ ದಿನಾಲು ೪ ತಾಸು ಮೀಸಲಿಡುತ್ತಿರುವರು. ವೈದ್ಯಕೀಯ ಸಹಾಯಕ ದಲದ ಸೂತಿಕಾಗೃಹದ ಮುಖ್ಯಾಧಿಕಾರಿಗಳಾದ ಡಾ. ಪಂಡಿತ, ಪ್ರೊ. ಹೋರೇಸ ಅಲೆಕ್ಸಾಂಡರ, ಮಿತ್ರ ಸೇವಾ ಸಂಘದ ರಿಚರ್ಡ್ ಸ್ಯಾಮಂಡ್ಸ ಮುಂತಾದವರನ್ನೊಳಗೊಂಡ ವೈದ್ಯಕೀಯ ಸಹಾಯಕ ದಲದ ಗುಂಪಿನೊಡನೆ ಅವರು ಮುನ್ನಾದಿನವೇ ಕುರುಕ್ಷೇತ್ರ ಶಿಬಿರವನ್ನು ಸಂದರ್ಶಿಸಿದರು. ಅವರ ಸಂಖ್ಯೆಯು ೨೫೦೦೦ ವಿದ್ದು ದಿನ ದಿನವೂ ಬೆಳೆಯುತ್ತಲಿದೆ.

ನಿರಾಶ್ರಿತರು ನೆಲಸುವದಕ್ಕಾಗಿ ಅಲ್ಲಲ್ಲಿ ಗುಡಾರಗಳನ್ನು ಹೊಡೆದಿದ್ದರೂ ಅವರೆಲ್ಲರಿಗೆ ಆಶ್ರಯಕೊಡಲು ಅವು ಸಾಕಷ್ಟಿಲ್ಲ. ಆಹಾರವು ಹಸಿವೆಯಿಂದ ಸಾಯುವದನ್ನು ತಡೆಯುವಷ್ಟು ಮಾತ್ರ ಬಿರುತ್ತದೆ. ಆದರೆ ಅದು ಪಿಷ್ಟಮಯವಾದದ್ದಿದ್ದು ಪರಿಣಾಮವಾಗಿ ರೋಗಗಳು ಹಬ್ಬತೊಡಗಿವೆ. ಒಂದುಪಕ್ಷವಾದರೂ ಆರೋಗ್ಯವನ್ನು ರಕ್ಷಿಸಿಕೊಂಡಿದ್ದರೆ ಮಾನವನ ಕಷ್ಟಗಳು ಎಷ್ಟೋ ಪಟ್ಟು ಕಡಿಮೆಯಾಗುತ್ತಿದ್ದವು. ಸೇಡು ಮತ್ತು ಪ್ರತೀಕಾರಗಳ ವಿಷಮ ಚಕ್ರವೊಂದನ್ನು ಪ್ರಾರಂಭಿಸಿದ್ದು ಅನೇಕ ಪಟ್ಟು ತೊಂದರೆಗಳನ್ನೊದ್ದಿದೆ. ಹಿಂದೂ ಮತ್ತು ಮುಸಲ್ಮಾನರು ಪರಸ್ಪರ ಕ್ರೂರ ದೃಷ್ಟಿಯಿಂದ ನೋಡುತ್ತಿರುವಂತಿದೆ. ಸ್ತ್ರೀಯರು ಮಕ್ಕಳು, ಮುದುಕರಿಗೆ ಕೂಡ ಉಳಿಗಾಲವಿಲ್ಲ. ಗಾಂಧೀಜಿ ಹಿಂದುಸ್ತಾನದ ಸ್ವಾತಂತ್ರ್ಯಕ್ಕಾಗಿ ಬಹಳ ಯತ್ನಿಸಿದ್ದರು. ಮತ್ತು ಹಿಂದುಸ್ತಾನದಲ್ಲಿ ರಾಮರಾಜ್ಯ ಭೂಸ್ವರ್ಗವನ್ನು ಸ್ಥಾಪಿಸುವದನ್ನು ಕಾಣಲು ೧೨೫ ವರ್ಷ ಆಯುಷ್ಯವನ್ನು ಕೊಡಲು ದೇವರನ್ನು ಪ್ರಾರ್ಥಿಸಿದ್ದರು. ಆದರೆ ಇಂದು ಆ ಆಶೆ ಇಲ್ಲ. ಜನರು ತಮ್ಮ ಮನದಂತೆ ಆಚರಿಸತೊಡಗಿದ್ದಾರೆ. ಈ ದುಃಖದೃಶ್ಯವನ್ನು ಅವರು (ಗಾಂಧಿ) ನೋಡುತ್ತ ಕೂಡಬೇಕೆ? ಜನರ ಕಷ್ಟವನ್ನು ಅವರಿಗೆ ತೋರಿಸ್ಕಿಕೊಟ್ಟು ಅದನ್ನು ತಿದ್ದಲು ತಮ್ಮಲ್ಲಿ ಸಾಮರ್ಥ್ಯ ಕೊಡಬೇಕೆಂದೂ ಇಲ್ಲವಾದರೆ ಎತ್ತಿಕೊಂಡೊಯ್ಯಬೇಕೆಂದೂ ತಾವು ದೇವರನ್ನು ಪ್ರಾರ್ಥಿಸುತ್ತಿರುವದಾಗಿ ಹೇಳಿದರು. ಅವರ ವಿಷಯಕ್ಕಿದ್ದ ಆದರವು ಅವರ ಏಕನಿಷ್ಠ ಅನುಯಾಯಿಗಳನ್ನಾಗಿಸಿದ ಕಾಲವೊಂದಿತ್ತು. ಅವರಿಗಾಗಿ ಇದ್ದ ಪ್ರೇಮವು ಕಡಿಮೆಯಾಗಿರಲಿಕ್ಕಿಲ್ಲ. ಆದರೆ ಅವರ (ಜನರ) ಹೃದಯ ಬುದ್ಧಿಗಳಿಗೆ ಮಾಡುವ ಬಿನ್ನಹವು ತನ್ನ ಶಕ್ತಿಯನ್ನು ಕಳೆದುಕೊಂಡಿದೆ. ಗುಲಾಮರಾಗಿದ್ದಾಗ ಮಾತ್ರ ಅವರ ಉಪಯೋಗವಿದ್ದು ಸ್ವತಂತ್ರ ಭಾರತದಲ್ಲಿ ಯಾರಿಗೂ ಅವರ ಉಪಯೋಗವೇ ಇಲ್ಲವೆ? ಇಷ್ಟು ದಿನಗಳ ವರೆಗೆ ಘೋಷಿಸುತ್ತ ಬಂದಿದ್ದ ಸಂದೇಶವೊಂದನ್ನು ಬಿಟ್ಟು ಮತ್ತಿನ್ನಾವದನ್ನೂ ತಾವು ಕೊಡಲಾರದಾಗಿ ಹೇಳಿದರು.

ದಿಲ್ಲಿ ಮತ್ತು ಪಂಜಾಬಗಳಲ್ಲಿ ಹೆಚ್ಚುತ್ತಿರುವ ಚಳಿಯೆಡೆಗೆ ಶ್ರೋತೃಗಳ ಲಕ್ಷ್ಯವನ್ನೆಳೆಯುವುದೇ ಅವರ ಉದ್ದೇಶವಾಗಿತ್ತು. ಸಾಧ್ಯವಿದ್ದವರೆಲ್ಲರೂ ಕಂಬಳಿ ಕೌದಿಗಳನ್ನು ದಾನ ಮಾಡಬೇಕಾಗಿ ಅವರು ಬಿನ್ನವಿಸಿದರು. ದಪ್ಪವಾದ ಹತ್ತಿ ಬಟ್ಟೆಗಳನ್ನು ಕೂಡ ಕೊಡಬಹುದು. ಅವಶ್ಯವೆನಿಸಿದಲ್ಲಿ ಅವುಗಳನ್ನು ಒಗೆದು, ಸರಿಪಡಿಸಿಕೊಡಬೇಕು. ಈ ಮಾನವೀ ಹಿತದ ಕೆಲಸದಲ್ಲಿ ಹಿಂದು ಮುಸಲ್ಮಾನರೆಂಬ ಭೇದವಿಲ್ಲದೆ ಎಲ್ಲರೂ ಸೇರಬೇಕು. ಅವುಗಳನ್ನು ಯಾವದೇ ನಿರ್ದಿಷ್ಟ ಜಾತಿಗಳಿಗಾಗಿ ಗೊತ್ತುಪಡಿಸಬಾರದೆಂದು ಅವರು ಬಿನ್ನವಿಸಿದರು. ಪಾತ್ರರಾದ ಜನರಿಗೇನೇ ಅವು ಕೊಡಲ್ಪಡುವವೆಂಬದನ್ನು ತಿಳಿದು ಕೊಡಬೇಕು. ಮರುದಿನದಿಂದಲೇ ಕಾಣಿಕೆಗಳು ಬರಬಹುದೆಂದು ಅವರು ಆಶಿಸಿದರು. ಮನೆಮಾರುಗಳನ್ನು ಕಳೆದುಕೊಂಡಿತ್ತ ಲಕ್ಷಾಂತರ ಜನರಿಗೆ ಸರಕಾರವು ಕಂಬಳಿಗಳನ್ನು ಪೂರೈಸುವದು ಸಾಧ್ಯವಿಲ್ಲ. ಹಿಂದುಸ್ತಾನದ ಕೋಟಿಗಟ್ಟಲೆ ಜನರು ತಮ್ಮ ದುಃಖಿತ ಬಂಧುಗಳ ರಕ್ಷಣೆಗೆ ಬರಬೇಕು.

ಬಿರ್ಲಾಭವನ, ಹೊಸದಿಲ್ಲಿ
೫—೧೦—೧೯೪೭

ತಮ್ಮ ಕಾಹಿಲೆ

ತಮ್ಮ ಕಾಹಿಲೆಯ ಸಂಬಂಧದ ಸುದ್ದಿಯು ಮತ್ತೆ ಪತ್ರಿಕೆಗಳಲ್ಲಿ ಬಂದುದರ ಬಗ್ಗೆ ಗಾಂಧೀಜಿ ಇಂದಿನ ಪ್ರಾರ್ಥನೋತ್ತರ ಭಾಷಣದಲ್ಲಿ ವಿಷಾದ ಪ್ರದರ್ಶಿಸಿದರು. ಅದನ್ನು ಯಾರು ಪ್ರಸಿದ್ಧಿಗೆ ಕೊಟ್ಟರೆಂಬುದು ತಮಗೆ ತಿಳಿಯದು. ತಮಗೆ ಕೆಮ್ಮು ಮತ್ತು ಸ್ವಲ್ಪ ಜ್ವರ ಬಂದುದು ನಿಜ, ಆದರೆ ಅದನ್ನು ಪ್ರಸಿದ್ಧಿಸುವದರಿಂದ ತಮಗೂ ಸಹಾಯವಾಗದು ಯಾರಿಗೂ ಅದರಿಂದ ಪ್ರಯೋಜನವಿಲ್ಲ. ಅನೇಕರಿಗೆ ಅದರಿಂದ ವಿವಂಚನೆ ಮಾತ್ರ ಉಂಟಾಗುವದು. ಅದುದರಿಂದ ತಮ್ಮ ಕಾಹಿಲೆಯ ಬಗ್ಗೆ ಗೆಳೆಯರಾರೂ ಪ್ರಸಿದ್ಧಿಯನ್ನು ಕೊಡಬಾರದೆಂದು ಬಿನ್ನವಿಸಿಕೊಳ್ಳುತ್ತೇವೆಂದು ಗಾಂಧೀಜಿ ನುಡಿದರು.

ಕಂಬಳಿಗಳು

ಮೊನ್ನೆ ದಿನ ಕಂಬಳಿಗಳ ಬಗ್ಗೆ ಮಾಡಿದ ಬಿನ್ನಹವನ್ನನುಲಕ್ಷಿಸಿ ಇಬ್ಬರು ಗೆಳೆಯರು ಎರಡು ಒಳ್ಳೆ ಕಂಬಳಿಗಳನ್ನು ಕಳಿಸಿರುವರಲ್ಲದೆ ಮತ್ತೊಬ್ಬರು ಹತ್ತು ಕಂಬಳಿಗಳನ್ನು ಕಳಿಸಿರುವರೆಂದು ಅವಶ್ಯವಿದ್ದವರಿಗೆ ಅವುಗಳನ್ನು ಕೊಡಲಾಗುವದೆಂದು ಗಾಂಧೀಜಿ ಆಶ್ವಾಸಿಸಿದರು.

(೧೦ ನೇ ಪುಟಕ್ಕೆ)

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

(೯ ನೇ ಪುಟದಿಂದ)

ವಿಪರೀತ ಸೂಚನೆ

ಹಿಂದುಗಳು ಮತ್ತು ಶೀಖರು ಪ್ರತೀಕಾರವನ್ನು ತೆಗೆದುಕೊಂಡಿರದಿದ್ದರೆ ಬಹುಶಃ ಇಂದು ನಾನೂ ಬದುಕುತಿರಲಿಲ್ಲೆಂಬಾಶಯದ ತಂತಿಯೊಂದು ನನಗೆ ಬಂದಿದೆ. ಈ ಸೂಚನೆಯು ವಿಪರೀತ ಸೂಚನೆಯೆಂದು ನನ್ನ ಅಭಿಪ್ರಾಯ. ಎಲ್ಲರ ಪ್ರಾಣವೂ ಪರಮಾತ್ಮನ ಕೈಯಲ್ಲಿರುವಂತೆ ನನ್ನ ಪ್ರಾಣವೂ ಅವನ ಕರುಣಾಪೂರ್ಣವಾದ ಕೈಯಲ್ಲಿ ಇದೆ. ಅವನ ಅಪ್ಪಣೆಯಾಗುವ ವರೆಗೆ ಯಾರೂ ಅದನ್ನು ಕೊನೆಗೊಳಿಸಲಾರರು. ಮಾನವರಾರೂ ನನ್ನ ಪ್ರಾಣವನ್ನಾಗಲಿ ಉಳಿದ ಯಾವದೇ ಮನುಷ್ಯನ ಪ್ರಾಣವನ್ನಾಗಲಿ ಉಳಿಸಲಾರರು ಎಂದು ಗಾಂಧೀಜಿ ಹೇಳಿದರು. ಮುಂದುವರಿಯುತ್ತ ೧೦೦ ಕ್ಕೆ ೯೮ ರಷ್ಟು ಮುಸಲ್ಮಾನರು ರಾಷ್ಟ್ರದ್ರೋಹಿಗಳಿರುವರು. ಸಕಾಲದಲ್ಲಿಯೆ ಪಾಕಿಸ್ತಾನಕ್ಕೆ ಅನುಕೂಲವಾಗುವಂತೆ ಹಿಂದುಸ್ತಾನದ ಹಾನಿಯನ್ನು ಮಾಡುವರು ಎಂದೂ ಆ ತಂತಿಯಲ್ಲಿ ಬರೆಯಲಾಗಿದೆಯೆಂದು ಹೇಳಿದರು. ಅದರಲ್ಲಿ ತಮ್ಮ ವಿಶ್ವಾಸವಿಲ್ಲ. ಹಳ್ಳಿಗಳಲ್ಲಿಯ ಮುಸಲ್ಮಾನ ಜನಸಾಮಾನ್ಯರು ರಾಷ್ಟ್ರದ್ರೋಹಿಗಳಿರಲಾರರು. ಒಂದು ವೇಳೆ ಅವರು ರಾಷ್ಟ್ರದ್ರೋಹಿಗಳಿರುವರೆಂದು ಭಾವಿಸಿದರೆ ಅವರು ಇಸ್ಲಾಮವನ್ನೇ ನಾಶ ಮಾಡಿ ಬಿಡುವರು. ಆ ಆರೋಪವು ಸಿದ್ಧವಾದುದಾದರೆ ಸರಕಾರವು ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಹಿಂದು ಮತ್ತು ಮುಸಲ್ಮಾನರು ಪರಸ್ಪರ ಶತ್ರುಗಳಾದರೆ ಎರಡು ರಾಷ್ಟ್ರಗಳಿಗೆ ನಾಶಕರವಾದ ಯುದ್ಧದಲ್ಲಿ ಅದು ಪರಿಣಮಿಸಲಿಕ್ಕೆ ಬೇಕೆಂದು ನನಗೆ ಮನವರಿಕೆಯಾಗಿದೆ. ಸಂರಕ್ಷಣೆ ಬೇಡುವವರಿಗೆಲ್ಲ ಅದನ್ನು ಒದಗಿಸಿ ಕೊಡುವದು ಸರಕಾರದ ಕರ್ತವ್ಯವಾಗಿದೆ. ಅವರು ಎಲ್ಲಿಯೆ ಇರಲಿ ಯಾವದೇ ಧರ್ಮದವರಿರಲಿ ಅವರೆಲ್ಲರಿಗೂ ಸಂರಕ್ಷಣೆಯನ್ನು ಕೊಡಲಿಕ್ಕೆ ಬೇಕು. ಕೊನೆಯದಾಗಿ ಧರ್ಮ ರಕ್ಷಣೆಯು ಆಯಾ ವ್ಯಕ್ತಿಯನ್ನೇ ಕೂಡಿದೆ ಎಂದು ಅಭಿಪ್ರಾಯಪಟ್ಟರು.

ಮತ್ತೆ ಚರ್ಚಿಲ್ಲರು

ನಂತರ, ಭಾರತಕ್ಕೆ ಹಾನಿಯನ್ನು ತಂದೊಡ್ಡಿದ್ದಕ್ಕಾಗಿ ಕೂಲಿಕಾರ ಸರಕಾರದ ಮೇಲೆ ಹರಿಹಾಯ್ದ ಚರ್ಚಿಲ್ಲರ ಎರಡನೇ ಭಾಷಣದ ವಿಷಯವನ್ನು ಎತ್ತಿದರು. ಅವರು ಸಾಮ್ರಾಜ್ಯದ ದಿವಾಳಿಯನ್ನು ತೆಗೆದರು. ಆದರೆ ಹಿಂದುಸ್ತಾನದ ಜನತೆಯನ್ನು ಮುಃಖಕ್ಕೀಡು ಮಾಡಿದರು. ಇದೇ ಪರಿಸ್ಥಿತಿಯು ಬ್ರಹ್ಮದೇಶಕ್ಕೂ ಒದಗಬಹುದೆಂಬ ಸಂಶಯವನ್ನು ಅವರು ವ್ಯಕ್ತ ಮಾಡಿದರು. ವಿಚಾರಕ್ಕೆ ಬಯಕೆಯೇ ಮೂಲವೇ? ಚರ್ಚಿಲ್ಲರು ಮಹಾ ಪುರುಷರು. ಈ ರೀತಿ ಅವರು ಮತ್ತೆ ಮಾತಾಡಿದ್ದಕ್ಕೆ ಅವರು (ಗಾಂಧಿ) ವಿಷಾದ ವ್ಯಕ್ತಪಡಿಸಿದರು. ಚರ್ಚಿಲ್ಲರು ರಾಷ್ಟ್ರಕ್ಕಿಂತಲೂ ಪಕ್ಷವನ್ನೇ ಮುಂದಿಟ್ಟಿದ್ದಾರೆ. ಭಾರತವು ೭ ಲಕ್ಷ ಹಳ್ಳಿಗಳನ್ನೊಳಗೊಂಡಿದೆ. ಈ ೭ ಲಕ್ಷ ಹಳ್ಳಿಗಳು ಉನ್ಮತ್ತವಾಗಿಲ್ಲ. ಅವು ಉನ್ಮತ್ತವಾಗಿವೆಯೆಂದು ತಿಳಿದರು ಕೂಡ ಅಷ್ಟಕ್ಕೇನೇ ಭಾರತವನ್ನು ಗುಲಾಮಗಿರಿಯಲ್ಲಿಡುವದು ನ್ಯಾಯವಾದದ್ದೇ? ಸ್ವಾತಂತ್ರ್ಯದ ಹಕ್ಕು ಸಜ್ಜನರಿಗೆ ಮಾತ್ರವಿದೆಯೆ? ಮಿತವಾದ ಗುಲಾಮಗಿರಿಗಿಂತಲೂ ಮಿತಿಮೀರಿ ಕುದಿದ ಸ್ವಾತಂತ್ರ್ಯವೇ ಮಿಗಿಲೆಂಬದನ್ನು ಬ್ರಿಟಿಶರೇ ನಮಗೆ ಕಲಿಸಿದ್ದಾರೆ. ಸ್ವರಾಜ್ಯವು ಸ್ವಚ್ಛಂದ ಆಡಳಿತೆಯ ಹಕ್ಕನ್ನೂ ಒಳಗೊಳ್ಳುತ್ತದೆ. ಮತ್ತು ಸ್ವರಾಜ್ಯವು ಸುರಾಜ್ಯಕ್ಕೆ ಸರಿಯಲ್ಲವೆಂದೂ ಸರಿಯಾಗಿಯೇ ಕಲಿತಿದ್ದೇವೆ. ಸಮಾಜವಾದವು ಚರ್ಚಿಲ್ಲರ ದೂಷಣೆಯ ವಸ್ತುವಾಗಿತ್ತು. ಶ್ರಮಜೀವಿಗಳು ಸಮಾಜವಾದಿಗಳು ಮಾತ್ರ ಆಗಬಲ್ಲರು, ಸಮಾಜವಾದವು ಒಂದು ದೊಡ್ಡ ತತ್ವವು. ಅದು ಹಳಿಯುವದಿಲ್ಲ, ಚತುರ ಪ್ರಯೋಗ ಪದ್ಧತಿಯನ್ನು ಹೇಳುತ್ತದೆ. ಸಮಾಜವಾದಿಗಳು ದುಷ್ಟರಿರಬಹುದು, ಆದರೆ ಸಮಾಜವಾದವಲ್ಲ. ಇಂಗ್ಲಂಡದಲ್ಲಿಯ ಕೂಲಿಕಾರ ಪಕ್ಷದ ವಿಜಯವು ಸಮಾಜವಾದದ ಕೆಲವು ಕೂಲಿಕಾರರ ಸರಕಾರವು. ಶ್ರಮಜೀವಿಗಳಲ್ಲಿ ತಮ್ಮ ಸ್ಥಾನದ ಅರಿವುಬಂದಾಗ, ಉಳಿದೆಲ್ಲ ಪಕ್ಷಗಳನ್ನು ಅದು ಅಪರಿಸುವದೆಂಬದು ಅವರ ಬಹಳ ದಿನಗಳ ಅಭಿಪ್ರಾಯವಿದೆ. ಎಲ್ಲ ಪಕ್ಷಗಳ ಸಮ್ಮತಿಯಿಂದ ಹಿಂದುಸ್ತಾನದಲ್ಲಿಯ ಬ್ರಿಟಿಶರ ಆಡಳಿತೆಯನ್ನು ಕೂಲಿಕಾರ ಸರಕಾರವು ಹಿಂತೆಗೆದುಕೊಂಡಿದೆ. ಒಂದು ಮಹಾ ಕೃತಿ ... ಜಗಳಾಡುವದು ಚರ್ಚಿಲ್ಲರಿಗೆ ಯೋಗ್ಯವಾದದ್ದಲ್ಲ. ಮುಂಬರುವ ಚುನಾವಣೆಯಲ್ಲಿ ಚರ್ಚಿಲ್ಲರು ವಿಜಯಿಗಳಾಗಲಾರರೆಂದು ತಿಳಿದರೂ ಈಗೆಸಗಿದ ಕಾರ್ಯವನ್ನು ಅವರು ತಿಳಿಸಿ ಭಾರತವನ್ನು ಮತ್ತೆ ಗುಲಾಮಗಿರಿಗೀಳಿಸುವ ಕನಸನ್ನು ಕೂಡ ಕಾಣಬಾರದು. ವಿರೋಧದ ಸಜೀವ ಗೋಡೆಯೊಂದನ್ನೇ ಅವರು ಎದುರಿಸಬೇಕಾದೀತು. ಬ್ರಹ್ಮದೇಶವನ್ನು ಸೇರ್ಪಡಿಸಿಕೊಳ್ಳುವ ಘಟನೆಯು ಎಷ್ಟೊಂದು ಲಾಂಛನಾಸ್ಪದವಾದದ್ದಿತ್ತೆಂಬದನ್ನು ಕ್ಷಣಮಾತ್ರವಾದರೂ ಅವರು ವಿಚಾರಿಸುವರೊ? ಭಾರತವು ಯಾವ ಮಾರ್ಗಗಳಿಂದ ಅಂಕಿತದಲ್ಲಿಟ್ಟುಕೊಳ್ಳಲ್ಪಟ್ಟಿತೆಂಬದು ಅವರಿಗೆ ನೆನಪಿದೆಯೇ? ವಿಷಾದ ಪ್ರಕರಣವೊಂದನ್ನು ನೆನಪಿಗೆ ತಂದುಕೊಡುವ ಇಚ್ಛೆ ತಮಗಿಲ್ಲ. ಅದರ ವಿಷಯವಾಗಿ ಕಡಿಮೆ ಹೇಳಿದಷ್ಟು ಹಿತವೇ. ಇದೆಲ್ಲವನ್ನೂ ಹೇಳಿದರು ಕೂಡ, ಮಾನವರಂತಲ್ಲದೆ ಪಶುಗಳಂತೆ ಆಚರಿಸಿದಲ್ಲಿ ಪ್ರೇಮದಿಂದ ಗೆದ್ದ ಸ್ವಾತಂತ್ರ್ಯವು, ಜಾಗತಿಕ ಶಕ್ತಿಗಳಿಗೆ ಮಾರಿ ಹೋಗುವದೆಂಬದನ್ನು ಕ್ರೋತೃಗಳು ಮರೆಯಬಾರದೆಂದು ಹೇಳಿದರು. ಅಂತಹ ವಿಷಮಪ್ರಸಂಗವೇ ಬರುವದಾದಲ್ಲಿ ಅದಕ್ಕೆ ತಾವು ಪ್ರೇಕ್ಷಕರಾಗಿರಲು ಬಯಸೆವೆಂದು ನುಡಿದರು. ಏಕಾಂಗಿಯಾಗಿ ಭಾರತವನ್ನು ಸಂರಕ್ಷಿಸಲು ಅವರೆಷ್ಟರವರು ? ಆದರೂ ಚರ್ಚಿಲ್ಲರ ಭವಿಷ್ಯವನ್ನು ಶ್ರೋತೃಗಳು ಸುಳ್ಳು ಮಾಡಲೆಂದು ಹಾರೈಸಿದರು.

(೭ ನೇ ಪುಟದಿಂದ)

ತುಂಬಿಕೊಡಲು ಸಮಯದ ಉಳಿತಾಯ ಒಂದೇ ಸಾಲದು. ನಮ್ಮ ಸೂಚನೆಯಂತೆ ಅದಕ್ಕೆ ಅನ್ವರ್ಥವಾದ ಹೆಸರೆಂದರೆ "ಗಾಳಿಸಾರಿಗೆ"; ಅದು ಬಹುಶಃ ಅದರ ಸ್ಥಿತಿಯನ್ನು ಸರಿಯಾಗಿ ವರ್ಣಿಸುವುದೆಂದು ನಮ್ಮ ಮತ. ಈ ದಿನಗಳಲ್ಲಿ ಮನುಷ್ಯನಿಗೆ ಬಹಳವಾಗಿ ಬೇಕಾದದ್ದು ಶ್ರಮ ಪರಿಹಾರ. ಗಾಳಿ ಪಯಣವು ಬಾಳಿನ ಹೊರೆಯನ್ನು ಹೆಚ್ಚಿಸುವುದಲ್ಲದೆ ಕಡಿಮೆ ಮಾಡುವುದಿಲ್ಲ.

—ಜೆ. ಸಿ. ಕುಮಾರಪ್ಪ

"ಒಂದು ಬಿಲ್ಲೆಯನ್ನೂ ಕೊಡಲಾರದು"

೧೯೪೭ರ ಜುಲೈ ೩೦ರಲ್ಲಿ ಲಂಡನ್ನಿನ ಸವಾಯಿ ಹೊಟೇಲಲ್ಲಿ ಸ್ಟರ್ಲಿಂಗ ಶಿಲ್ಕಿನ ಮೇಲೆ ಒಂದು ಉಪಹಾರೋತ್ತರ ಭಾಷಣಕೂಟವೇರ್ಪಟ್ಟಿತು. ಅದರಲ್ಲಿ ಕೇಂಬ್ರಿಜ್ಜಿನ ಪ್ರೊ. ಹೆರ್‍ರಾಡ್; "ಈಸ್ಟರ್ನ ಇಕಾನಮಿಸ್ಟಿ"ನ ಡಾ. ಲೋಕನಾಥನ್ ಮತ್ತು ಪ್ರೊ. ಜಿ. ಡಿ. ಎಸ್. ಕೋಲ್ ಎಂಬ ಮೂವರು ಭಾಗವಹಿಸಿದರು.

ಪ್ರೊ. ಹೆರ್‍ರಾಡರು ಇಂಗ್ಲೆಂಡಿನಲ್ಲಿಯ ಆರ್ಥಿಕ ಪರಿಸ್ಥಿತಿಯ ಕಪ್ಪು ಚಿತ್ರವನ್ನು ಬರೆದು ಅದರಲ್ಲಿ ಇಂದು ಆ ದೇಶ ಎಂತಹ ಸಂಕಟದಲ್ಲಿ ಬಿದ್ದಿದೆ ಯೆಂಬುದನ್ನೂ ಎಷ್ಟು ಬೇಗ ಆರ್ಥಿಕ ಪುನರುಜ್ಜೀವನ ಅಗತ್ಯವಾಗಿ ಆಗಬೇಕಾಗಿದೆಯೆಂಬುದನ್ನೂ ವಿವರಿಸಿದರು. ಇಂತಹ ಪರಿಸ್ಥಿತಿಯಲ್ಲಿ ಇಂಗ್ಲೆಂಡಿನ ಸಾಮಾನ್ಯ ಮನುಷ್ಯನು ಖಂಡಿತವಾಗಿ ಬ್ರಿಟನ್ನು "ಒಂದು ಬಿಲ್ಲೆಯನ್ನೂ ಕೊಡಲಾರದು" ಎಂದು ಹೇಳದಿರನೆಂಬುದಾಗಿ ಅವರು ಉಪಸಂಹರಿಸಿದರು. ಇದು ಅವರ ಮಾತಿನ ಪಲ್ಲವೇ ಆಗಿತ್ತೆಂದರೂ ಎನ್ನಬಹುದು.

ಪ್ರೊ. ಲೋಕನಾಥನ್ನರು ಆ ಸಾಲವೆಂದರೆ ಭಾರತವು ಕಡಿಮೆ ದರಕ್ಕೆ ಸಾಮಾನುಗಳನ್ನು ಇಂಗ್ಲೆಂಡಿಗೆ ಪೂರೈಕೆ ಮಾಡುವುದರ ಮೂಲಕ ಸಲ್ಲಿಸಿದೆಯೆಂದೂ ಆ ಕಾರಣದಿಂದ ಅದನ್ನು ತಿರುಗಿ ಕೊಡಲಾಗುವುದಿಲ್ಲವೆಂದು ಹೇಳಬಾರದೆಂದೂ ಭಾರತೀಯ ದೃಷ್ಟಿಕೋನದಿಂದ ವಿವರಿಸಿದರು. ಇಂಗ್ಲೆಂಡಿನ ಸದ್ಯದ ಪರಿಸ್ಥಿತಿಯನ್ನು ಆ ಸಾಲ ನುಂಗಿಹಾಕಲು ನೆವವಾಗಿ ಒಡ್ಡಬಾರದೆಂದು ಅವರು ಅಭಿಪ್ರಾಯಪಟ್ಟರು.

ಪ್ರೊ. ಕೋಲರು ಚರ್ಚೆಯನ್ನು ಒಂದು ಬಹು ಉನ್ನತವಾದ ನೈತಿಕ ನೆಲೆಗೆ ತಂದು ಮುಟ್ಟಿಸಿ ಪ್ರೊ ಹೆರ್‍ರಾಡರ ವಾದವೆಷ್ಟು ಹಾಸ್ಯಾಸ್ಪದವಿದೆಯೆಂಬುದರತ್ತ ಲಕ್ಷ್ಯವನ್ನು ಸೆಳೆದರು. ಇಂದು ಇಂಗ್ಲೆಂಡಿನ ಸಾಮಾನ್ಯ ಮನುಷ್ಯನನ್ನು "ಸ್ಟರ್ಲಿಂಗ್‌ಸಾಲ" ಎಂದರೇನಯ್ಯಾ ಎಂದು ಕೇಳಿದರೆ ಕೇಳಿದವನನ್ನೇ ಕುರಿತು ಹಾಗೆಂದರೇನೆಂದು ಅವನು ಸವಾಲು ಹಾಕದಿರನು. ಅದೇನೆಂದು ಅವನಿಗೆ ಏನೂ ತಿಳಿಯದು ಮತ್ತು ಅದನ್ನು ತಿರುಗಿ ಸಲ್ಲಿಸಬೇಕೆಂಬದರತ್ತ ಎಳ್ಳಷ್ಟೂ ಅವನು ಗಮನಕೊಡುವುದಿಲ್ಲ. ಸ್ವತಂತ್ರವಲ್ಲದ್ದರಿಂದ ಭಾರತವೇನನ್ನೂ ಕೊಟ್ಟಿಲ್ಲವೆಂದೂ ಅಲ್ಲಿಂದ ಸಾಮಾನುಗಳನ್ನು ಬ್ರಿಟನ್ನು ತೆಗೆದುಕೊಂಡು ಬಂದಿದ್ದರೆ ಅದನ್ನು ಕೇಳಿ ತಂದಿಲ್ಲವೆಂದೂ ಸಾಲವನ್ನು ನುಂಗಿ ಹಾಕುವುದು ಕೇವಲ ನೀತಿಬಾಹಿರ: ಈ ವಾದವನ್ನೊಡ್ಡಿ ನಾವು ಏನನ್ನೂ ಕೊಡಲಾರೆವೆಂಬುದು ಅನುಚಿತ. ಇನ್ನು ಏನನ್ನೂ ಕೊಡಲಾರೆವೆಂಬುದೂ ನಾವು ನಿಜವಾಗಿಯೂ ಕೊಡಲಾರೆವೆಂಬುದೂ ಸತ್ಯದ ಮಾತಲ್ಲ. ಕೊಡುವದು ಸ್ವಲ್ಪ ಕಠಿನವೆನಿಸೀತು. ಆದರೆ ಯುರೋಪಿನ ದೇಶಗಳಲ್ಲೆಲ್ಲ ಇಂಗ್ಲೆಂಡೇ ಹೆಚ್ಚು ಅನುಕೂಲ ಸ್ಥಿತಿಯಲ್ಲಿದೆ. ಭಾರತ ಮತ್ತು ಇಂಗ್ಲೆಂಡುಗಳಲ್ಲಿಯ ಪರಿಸ್ಥಿತಿಗಳನ್ನು ಹೋಲಿಸಿ ನೋಡಿದರೆ ಒಂದು ಬಿಲ್ಲೆಯನ್ನೂ ನಾವು ಕೊಡದೆ ಉಳಿಸಿಕೊಳ್ಳಲಾಗದು ಎಂದು ಅವರು ವಾದಿಸಿದರು.

ಇದು ಬ್ರಿಟನ್ನಿನಲ್ಲಿ ಈ ಪ್ರಶ್ನೆಯ ಬಗ್ಗೆ ಇರುವ ಅನುಕೂಲ ಪ್ರತಿಕೂಲಾಭಿಪ್ರಾಯಗಳ ಶಕ್ತಿಯನ್ನು ಬೆಳಕಿಗೆ ತರುತ್ತದೆ. ನಮ್ಮ ದುರ್ದೈವದಿಂದ ಪ್ರೊ. ಕೋಲರಂತೆ ಆಲೋಚಿಸತಕ್ಕವರು ಬಹು ವಿರಳ ಮತ್ತು ರಾಷ್ಟ್ರದ ಸರಕಾರದಲ್ಲಿ ವರ್ಚಸ್ಸುಳ್ಳವರಾಗಿಲ್ಲ. ಸಾಮಾನ್ಯ ಬ್ರಿಟಿಶ ಪ್ರಜೆಯ ಚಾರಿತ್ರದಲ್ಲಿ ನಮಗೆ ನಿಜವಾಗಿ ವಿಶ್ವಾಸವಿದೆ. ಎಂತಹ ಸಂದರ್ಭದಲ್ಲಿ ಹೇಗೆ ಭಾರತದಿಂದ ಸಾಮಾನು ಸರಕುಗಳನ್ನು ಇಂಗ್ಲೆಂಡು ಕೊಂಡೊಯ್ದಿತೆಂಬುದನ್ನು ಅವನಿಗೆ ತಿಳಿಸಿ ಹೇಳಿದರೆ, ಅವನ ನಾಡು ಭಾರತಕ್ಕೆ ಎಷ್ಟುಮಟ್ಟಿಗೆ ಋಣಿಯೆಂಬುದನ್ನು ಮುಂದಟ್ಟು ಮಾಡಿಕೊಟ್ಟರೆ— ಬಂದದ್ದೆಲ್ಲ ಬರಲಿ, ಭಾರತಕ್ಕೆ ಕೊಡುವುದರಲ್ಲಿ ಒಂದು ಬಿಲ್ಲೆಯನ್ನೂ ಇಟ್ಟುಕೊಳ್ಳದೆ ಕೊಟ್ಟುಬಿಡಬೇಕು—ಎಂದು ಆತನು ನಿಷ್ಪಕ್ಷಪಾತ ಮಧ್ಯಸ್ಥನಾಗಿ ಹೇಳದಿರನೆಂಬುದು ಖಂಡಿತ. ಬ್ರಿಟನ್ನಿನ ಸಾಮಾನ್ಯನಾಗರಿಕರು ಹಣಕಾಸಿನ ದೃಷ್ಟಿಗಿಂತ ಸರಕಾರದ ಧನಕನಕ ಹಿತಾಹಿತಗಳ ದೃಷ್ಟಿ ತೀರ ಭಿನ್ನವಾದುದು. ಸಾಮಾನ್ಯನಾಗರಿಕನಲ್ಲಿ ಇನ್ನೂ ನೀತಿಯ ಬೆನ್ನು ಮೂಳೆ ಉಳಿದಿದ್ದು ಅಂತಹ ಪ್ರಶ್ನೆಗಳ ಮೇಲಿನ ಅವನ ನಿರ್ಣಯವನ್ನು ಅದು ರೂಪಿಸದಿರದು.

ಸ್ಟರ್ಲಿಂಗ್ ಶಿಲ್ಕುಗಳ ಬಗ್ಗೆ ಯಾವ ನಿರ್ಣಯವನ್ನೂ ಇನ್ನೂ ತೆಗೆದುಕೊಂಡಿಲ್ಲ. ಮಧ್ಯಕಾಲಿಕ ಒಪ್ಪಂದವೊಂದನ್ನು ಈ ವರ್ಷದ ಅಂತ್ಯದ ವರೆಗೆ ಭಾರತದ ವೆಚ್ಚಕ್ಕಾಗಿ ಮಾಡಿಕೊಳ್ಳಲಾಗಿದೆ. ಆದುದರಿಂದ ಅನಂತರ, ಕೊನೆಯ ಒಪ್ಪಂದವನ್ನು ಮಾಡಿಕೊಳ್ಳುವಾಗ "ಒಂದು ಬಿಲ್ಲೆಯನ್ನು ಕೂಡ ಕೊಡಲಾರೆವು" ಎಂಬ ಬಲವಾದ ಪ್ರಚಾರವನ್ನು ಲಕ್ಷ್ಯದಲ್ಲಿಟ್ಟುಕೊಂಡು ತನಗೆ ಸಲ್ಲಬೇಕಾದ್ದನ್ನು ಪಡೆಯಲು ತನ್ನ ಹಕ್ಕನ್ನು ಹಿಂದುಸ್ತಾನ ಸರಕಾರವು ಬಲವಾಗಿ ಸಾಧಿಸುವುದೆಂದು ನಾವು ಆಶಿಸುತ್ತೇವೆ.

—ಜೆ. ಸಿ ಕುಮಾರಪ್ಪ

ಯುಕ್ತ ಪಂಕ್ತಿಗಳು

(ಗಾಂಧೀಜಿಯಿಂದ)

ಜಾರ್ಜ್‌ಮ್ಯಾಥಿಸನ್‌ರವರ ಗ್ರಂಥದಿಂದ ಈ ಕೆಳಗಿನ ಸಾಲುಗಳನ್ನು ಉದ್ಧರಿಸಿ ಒಬ್ಬ ಗೆಳೆಯ ಕಳುಹಿದ್ದಾನೆ:—

೧

"ನನ್ನ ಕಾಲಿನ ಕೋಳದಿಂದೇ
ಇಗೊ ಇಗೋ ನಾ ಹಾರುವೆ;
ನನ್ನ ಸಂಕಟ ಪಕ್ಷಗಳ ಬಲ
ದಿಂದ ಮೇಲಕ್ಕೇರುವೆ !

೨

ನನ್ನನಿದಿರಿಸುವಂಥ ವಿಡ್ಡುರ
ದೆಂದೆ ನಾ ಮುಂದೋಡುವೆ ;
ನನ್ನ ಕಂಟನಿಯಾಧರಿಸಿ ನಾ
ಮುಂದೆ ಪಯಣವ ಬೆಳೆಸುವೆ !

೩

ನನ್ನ ಶಿಲುಬೆಯನೇರಿ ನಾ ಮಾ-
ನವ್ಯಹೃದಯದೊಳಿಳಿಯುವೆ ;
ನನ್ನ ಶಿಲುಬೆಯ ನನ್ನೊಡೆಯ, ನಾ
ಹೊಗಳದೆಂತಿಲ್ಲುಳಿಯುವೆ ?

ಹೊಸದಿಲ್ಲಿ,
೩-೧೦-೪೭

"ಕಿಡಿಗೇಡಿ ಜಗದಲ್ಲಿ ಒಳಿತು ಪಜ್ಜಳಿಸೀತು"

ಕಳೆದ ಕೆಲವು ದಿನಗಳಲ್ಲಿ ಕೆಳಗಿನ ಎರಡು ಸಂಗತಿಗಳು ನಡೆದವು. ಆಯೆರಡೂ ಮುಸಲ್ಮಾನರ ಹೃದಯದ ಮೂಲಕ ಸಜ್ಜನಿಕೆ ಪ್ರಕಾಶಿಸುವುದನ್ನು ತೋರಿಸಿಕೊಡುವಂಥವಿದ್ದವು. ಒಳ್ಳೆಯವರಾದ ಹಿಂದು ಮತ್ತು ಶೀಖರಲ್ಲಿಯೂ ಅಂತಹ ಬಹಳ ಸತ್ಕಾರ್ಯವಾಡಿದವರನ್ನು ನಿಃಸ್ಸಂದೇಹವಾಗಿ ಕಾಣಬಹುದು. ಅಂತಹ ಕೆಲಸಗಳು ಮಾನವ ಸ್ವಭಾವದ ಮೇಲ್ಮೆಯನ್ನು ಪುನಃ ಪಡೆಯಲು ಸಾಧನಗಳಾಗಿವೆ ಮತ್ತು ನಮ್ಮ ನೆರೆಯವರಿಗೆ ಹಿಡಿದ ಹುಚ್ಚು ಬೇಗ ಹೊರಟು ಹೋಗುತ್ತದೆಂಬ ನಂಬಿಗೆಗೆ ಆಧಾರಗಳಾಗಿವೆ.

ಆಸ್ತಿಯೆಲ್ಲವನ್ನೂ ಕಳೆದುಕೊಂಡ ದಿಲ್ಲಿಯ ಒಬ್ಬ ಮುಸಲ್ಮಾನ ಪ್ರೊಫೆಸರನು ನನಗೆ ಸಿಕ್ಕಿದ. ಅವನ ಅತ್ಯಂತ ಆಸೆಯ ದ್ರವ್ಯಗಳು, ಪುಸ್ತಕಗಳು, ಅಪೂರ್ಣವಾದ ಕೈಯ್ಬೋಲೆಬರಹ, ಅವನ ಇಡೀ ಬಾಳಿನಕಾರ್ಯ—ಎಲ್ಲವೂ ಹಾಳಾಗಿ ಹೋಗಿದ್ದವು. ನಾನು ಅವನಿಗೆ ಸಹಾನುಭೂತಿ ತೋರಿಸ ಹೋದೆ. ಆಗ ಅವನೆಂದ: "ನಾನು ಯಾರನ್ನೂ ದೂರುವುದಿಲ್ಲ. ಅವರಿಗೆ ಹುಚ್ಚು ಹಿಡಿದಿದೆ. ಆದುದರಿಂದ ಅವರಿಗೆ ತಾವೇನು ಮಾಡುವೆವೆಂಬುದರ ಅರಿವಿಲ್ಲ. ನನ್ನ ಹೃದಯವನ್ನು ನಾನು ನೋಡಿಕೊಳ್ಳುವಲ್ಲಿ ಅಲ್ಲಿ ಕಹಿಯ ಕುರುಹೆಲ್ಲೂ ಕಂಡು ಬರಲಿಲ್ಲ." ಈ ಕಡೆಯ ಮಾತು ನನ್ನ ಮನಸ್ಸನ್ನು ಕರಗಿಸಿತು. ಅದು ಅವನು ತನ್ನ ಹೃದಯ ಕುಹರದಲ್ಲಿ ಹಣುಕಿ ನೋಡಿ ಸಂದಿಗೊಂದಿಯೊಂದನ್ನೂ ಬಿಡದೆ ಚೆನ್ನಾಗಿ ಪರೀಕ್ಷಿಸಿ ಎಲ್ಲೋ ಸ್ವಲ್ಪ ಕಹಿಯಿದೆ ಎಂದು ತನಗಿದ್ದ ಸಂಶಯವು ಇಲ್ಲವೆಂದು ಕಂಡು ಬಂದು ತನಗೇ ಆಶ್ಚರ್ಯವಾದುದನ್ನು ಹೇಳುವಂತಿತ್ತು. ಇದಕ್ಕಾಗಿ ಅವನು ತನ್ನ ಒಳ್ಳೆಯತನವನ್ನು ಸಾಧಿಸಲಿಲ್ಲ. ಹಳೆಯ ಜನಗಳು ಯಾವುದಕ್ಕೆ ದೇವಪ್ರಸಾದವೆನ್ನುವರೋ ಅದೇ ಅದು.

ದಿಲ್ಲಿಯ ಕಾಫೀಗೃಹವೊಂದರಲ್ಲಿ ಅಪರಿಚಿತ ಶೀಖನೊಬ್ಬನನ್ನು ನನ್ನಗೆಳೆಯನೊಬ್ಬ ಭೆಟ್ಟಿಯಾಗಿ ಮಾತಾಡುವ ಪ್ರಸಂಗಉಂಟಾದಾಗ ಅವನಿಗೆ ಅವನು ಈ ಕಥೆಯನ್ನು ಹೇಳಿದ. ಆಗಷ್ಟು ೧೪ ಇಲ್ಲವೆ ೧೫ ರಲ್ಲಿ ಅವನು ಲಾಹೋರಲ್ಲಿಯ ತನ್ನ ಮನೆಯಲ್ಲಿ ವಾಸಿಸುತ್ತಿದ್ದನು. ಇಸ್ಪೀಟಾಡಲೆಂದು ಆತನು ಎದುರುಮನೆಯ ಮುಸಲ್ಮಾನನಿದ್ದಲ್ಲಿ ಹೋದನು. ಆಡುತ್ತಿರುವಾಗ ರಸ್ತೆಯಲ್ಲಿ ಒಂದು ಜನಸಂದಣಿ ಕೂಡಿತು. ಆದರೆ ಅವರು ಕಾರ್ಯಪ್ರವೃತ್ತರಾಗುವ ಮೊದಲೆ ಶೀಖನು ಓಡಿಹೋಗಿ ತನ್ನ ಮನೆಯೊಳಗೆ ನಿಂತು ಬಾಗಿಲು ಹಾಕಿಕೊಂಡು ಕಿಟಕಿಯ ಮೂಲಕ ಮುಸಲ್ಮಾನ ತಂಡದತ್ತ ಗುಂಡುಹಾರಿಸತೊಡಗಿದ. ಕೆಲವೇ ಕಾಲದಲ್ಲಿ ಅವನಲ್ಲಿದ್ದ ಗುಂಡು ಮದ್ದು ತೀರಿಹೋಗಿ ಅವನ ಮನೆಯ ಬಾಗಿಲೊಡೆದು ಒಳನುಗ್ಗಲು ಕ್ರುದ್ಧ ಮುಸಲ್ಮಾನರು ಪ್ರಯತ್ನಿಸಿ ಜಯಶೀಲರಾದರು. ಆದರೆ ಅಷ್ಟು ಹೊತ್ತಿನೊಳಗೆ, ಅವನು ಮುಸಲ್ಮಾನರತ್ತ ಗುಂಡುಹಾರಿಸುತ್ತಿದ್ದರೂ ಅವನ ಪಕ್ಕದ ಮನೆಯ ಮುಸಲ್ಮಾನನು ಅವನ ಮನೆಯ ಗೋಡೆಯಲ್ಲೊಂದು ತೂತನ್ನು ಅವಸರದಿಂದ ಕೊರೆದು, ತನ್ಮೂಲಕ ಆ ಶೀಖನ ತಂಗಿಯನ್ನು ಹೊರ ಸಾಗಿಸಿ ಅವಳಿಗೆ ಮುಸಲ್ಮಾನ ಉಡುಪನ್ನು ಉಡಿಸಿ, ಅವಳನ್ನು-ತಪ್ಪಿಸಿಕೊಂಡು ಬಂದ ಅವಳಣ್ಣನೊಡನೆ ಗಾಡಿಯಲ್ಲಿ ಕೂರಿಸಿಕೊಂಡು ಲಾಹೋರಿಗೆ ಸ್ವಲ್ಪದೂರದಲ್ಲಿದ್ದ ರೇಲ್ವೆ ನಿಲ್ದಾಣಕ್ಕೊಯ್ದು ದಿಲ್ಲಿಗೆ ಹೋಗುವ ರೈಲುಹತ್ತಿಸಿ ಬಿಟ್ಟರು. ಉಳಿದೆಲ್ಲರಂತೆ ಆ ಶೀಖ ಅಣ್ಣ ತಂಗಿಯರಾದರೂ ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿದ್ದರೂ ಅವರ ನೆರೆಯ ಮುಸಲ್ಮಾನರು ಜಾತೀಯಭಾವನೆಗಿಂತಲೂ ನೆರೆಹೊರೆಯವರ ಪ್ರೀತಿಯೇ ಹೆಚ್ಚೆಂಬುದನ್ನು ನಂಬಿ ಮಾಡಿದ ಧೀರಕಾರ್ಯದಿಂದ ಅವರ ಪ್ರಾಣರಕ್ಷಿಸಲ್ಪಟ್ಟಿತು.

—ಹೊರೇಸ್ ಅಲೆಗ್ಸಾಂಡರ್.

ಮೈಸೂರಲ್ಲಿ ನಡುಗಾಲ ಸರಕಾರ ?

ಮೈಸೂರು ಮಹಾರಾಜಾ ಕಾಲೇಜಿನ ರಾಜನೀತಿ ಪ್ರಾಧ್ಯಾಪಕರಾದ ಶ್ರೀ ಗ. ಸ. ಹಾಲಪ್ಪನವರು ಮೈಸೂರ ದಿವಾಣರ ಕೂಡ ಸದ್ಯಕ್ಕೆ ನಡೆದಿರುವ ರಾಜಕೀಯ ಮಾತುಕತೆಗಳ ವಿಷಯದಲ್ಲಿ ಸಂದರ್ಶನ ಪಡೆದರು. ದಿವಾಣರು ಅವರಿಗೆ ಕೊಟ್ಟ ಸಂದರ್ಶನದಲ್ಲಿ ಈಗಿನ ಬಿಕ್ಕಟ್ಟು ಬೇಗ ಬಗೆಹರಿಯುವದೆಂದೂ ಮೈಸೂರಲ್ಲಿ ಒಂದೆರಡು ವಾರಗಳಲ್ಲಿ ನಡುಗಾಲ ಸರಕಾರದ ಸ್ಥಾಪನೆಯಾಗುವದೆಂದೂ ಹೇಳಿದರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ನಡುಗಾಲ ಮಂತ್ರಿ ಮಂಡಲದಲ್ಲಿ ಶ್ರೀ ಚಂಗಲರಾಯರೆಡ್ಡಿ ಎಚ್. ಸಿದ್ದಯ್ಯ, ಕೆ. ಟಿ. ಭಾಷ್ಯಂ, ಡಿ. ಎಚ್. ಚಂದ್ರಶೇಖರಯ್ಯ, ಬಿ. ಎನ್. ಬಾಲಕೃಷ್ಣಯ್ಯ ಇವರ ಹೆಸರುಗಳು ನಿಶ್ಚಿತವಾಗಿರುವವೆಂದು ತಿಳಿಯುತ್ತದೆ.

ಕರ್ನಾಟಕ

ಧಾರವಾಡ

ಹೊಸರಿತ್ತಿ ಸತ್ಯಾಗ್ರಹ ಶಿಬಿರಕ್ಕೆ ಹಾವೇರಿಯಿಂದ ೭೨ರೂ, ಹೊಸರಿತ್ತಿಯಿಂದ ೧೦೮-೧೨-೦ ಅಗಡಿಯಿಂದ ೫೦-೮-೦ ಹೀಗೆ ಒಟ್ಟಿಗೆ ೨೩೦-೪-೦ ಕೂಡಿವೆ.

ಹುಬ್ಬಳ್ಳಿಯ ಲೋಕಪ್ರಿಯ ಸ್ಟೇಶನ್ ಮಾಸ್ತರ ಶ್ರೀ ವ್ಯಾಕಮೋಹನರಿಗೆ ಕಾಟಪಾಡಿಗೆ ವರ್ಗವಾಗಿರುವದು. ಇವರ ವರ್ಗದಿಂದ ಇಲ್ಲಿಯ ರೇಲ್ವೆ ನೋಕರರಿಗೂ ವರ್ತಕರಿಗೂ ವಿಷಾದವಾಗಿದೆ ವಣಿಕ ಸಂಘದವರು ಮೇಲಧಿಕಾರಿಗಳಿಗೆ ತಂತಿ ಮೂಲಕ ದೂರು ಕಳಿಸಿದ್ದಾರೆಂದು ತಿಳಿಯುತ್ತದೆ. ಹಿಂಬಡತಿ ಮಾಡಿ ವರ್ಗಮಾಡಿದ್ದರಿಂದಂತೂ ಜನರಿಗೆ ಬಹಳ ಅಸಮಾಧಾನವಾಗಿದೆ.

ಹುಬ್ಬಳ್ಳಿಯಲ್ಲಿ ನಾಡಹಬ್ಬದ ಅಂಗವಾಗಿ ಉದ್ಯೋಗಗಳ ಮತ್ತು ತಯಾರಾಗುತಿರುವ ಪದಾರ್ಥಗಳ ಪ್ರದರ್ಶನ ಒಂದನ್ನು ಏರ್ಪಡಿಸಲು ನಿಶ್ಚಯವಾಗಿದ್ದು ಅದಕ್ಕಾಗಿ ಮಾಮಲೇದಾರರ ಅಧ್ಯಕ್ಷತೆಯಲ್ಲಿ ಉಪಸಮಿತಿಯೊಂದು ಏರ್ಪಡಿಸಿದೆ.

ಡಿಸೆಂಬರ ತಿಂಗಳ ಕೊನೆಯ ವಾರದಲ್ಲಿ ಕರ್ನಾಟಕ ಸ್ವದೇಶೀ ಪ್ರದರ್ಶನವು ಗದಗ ಮುನಿಸಿಪಲ್ ಹಾಯಸ್ಕೂಲಿನ ಬೈಲಿನಲ್ಲಿ ಜರುಗಲಿದೆ. ಈ ಸಲದ ಪ್ರದರ್ಶನವನ್ನು ದೊಡ್ಡ ಪ್ರಮಾಣದಲ್ಲಿ ಏರ್ಪಡಿಸಲಿದ್ದು ಅಖಿಲ ಭಾರತದ ಧುರೀಣರೊಬ್ಬರನ್ನು ಪ್ರಾರಂಭ ಮಹೋತ್ಸವಕ್ಕೆ ಕರೆಸಲಾಗುವದು. ಸಂಬಂಧಿಸಿದವರು ಜಿಲ್ಹಾ ಲೋಕಲ್ ಬೋರ್ಡ ಕಚೇರಿಯೊಡನೆ ಪತ್ರ ವ್ಯವಹಾರ ಮಾಡಬೇಕು.

ಗದುಗಿನಲ್ಲಿ ೬ನೇ ತಾರೀಕಿನ ದಿವಸ ಸಂಜೆ ೮ ರಿಂದ ತಾ. ೭ರ ಮುಂಜಾನೆ ೭ ಗಂಟೆಯ ವರೆಗೆ ೧೧ ಗಂಟೆಗಳಲ್ಲಿ ೭॥ ಇಂಚು ಮಳೆಯಾಗಿದೆ. ಕತ್ಪರಿಣಾಮವಾಗಿ ಊರಲ್ಲಿ ಅನೇಕ ಮನೆಗಳು ಬಿದ್ದಿವೆ. [illegible] ಸ್ಥಳಗಳಲ್ಲಿ ಇಷ್ಟು ಮಳೆ [illegible]

ತಿಗ್ಗಾವಿಯ ತಿಂದೀ ಅಂಗಡಿ ಕಂಟ್ರಾಕ್ಟರ ಆದ ಮುಸಾಬ ಮೊಗಲಲ್ಲಿ ಇವರ ಮನೆಯಲ್ಲಿ ೫-೧೨-೪೬ನೇ ದಿನ ೪ ಗ್ಯಾಲನ್ ೧೬ ಡ್ರಾಮ್ಸ ಭಟ್ಟಿ ಶೆರೆಯನ್ನು ಜಪ್ತ ಮಾಡಿ ಖಟ್ಲೆ ಹಾಕಲಾಗಿತ್ತಷ್ಟೆ. ಇದರ ವಿಚಾರ ನಡೆದು ೧೦೦ ರೂಪಾಯಿ ದಂಡ ಕೊಡದಿದ್ದರೆ ೧ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು.

ಕರ್ನಾಟಕ ಏಕೀಕರಣ ಮಹಾಸಮಿತಿಯವರು ಶ್ರೀ ಎಸ್ ಬಿ ಹಿರೇಮಠ ವಕೀಲರನ್ನು ಪ್ರಚಾರ ಪ್ರಕಟನಾ ಶಾಖಾಧಿಕಾರಿಗಳನ್ನಾಗಿ ನೇಮಿಸಿದ್ದು ಆಯಾ ಸ್ಥಳಗಳಲ್ಲಿಯ ಜನರು ತಮ್ಮ ತಮ್ಮ ಪ್ರಕಟನೆಗಳನ್ನು ಅವರ ಕಡೆಗೆ ಕಳಿಸಬೇಕೆಂದು ಕೇಳಿಕೊಳ್ಳಲಾಗಿದೆ.

ಇದೇ ೧೨ ನೇ ತಾರೀಕು ಮಧ್ಯಾಹ್ನ ೩ ಗಂಟೆಗೆ ಬ್ಯಾಡಗಿಯಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಕಾರ್ಯಕಾರೀ ಮಂಡಳದ ಸಭೆ ಮತ್ತು ಮರುದಿನ ಮುಂಜಾನೆ ಕರ್ನಾಟಕ ಪ್ರಾಂತಿಕಕಾಂಗ್ರೆಸ ಸಮಿತಿಯ ವಿಶೇಷ ಸಾಧಾರಣ ಸಭೆ ಸೇರುವದು.

ಧಾರವಾಡ ಜಿಲ್ಹಾ ಸ್ಕೂಲಬೋರ್ಡಿನವರು ಬಿ ಬಿ ಮಾದನಹಾಳ ಎಂಬ ಬೋರ್ಡಿನ ಕಾರಕೂನರನ್ನು ಡೆಪ್ಯುಟಿ ಅಕೌಂಟಂಟ ಜಾಗೆಗೆ ನಿಯಮಿಸಬೇಕೆಂದು ಸ್ವೀಕರಿಸಿದ ಗೊತ್ತುವಳಿಯು ಕಾಯದೆಗೆ ವಿರುದ್ಧವಿದ್ದುದರಿಂದ ಆ ಮೇರೆಗೆ ಮಾಡಲಾದ ನೇಮಕವು ರದ್ದು ಮಾಡಲ್ಪಡಬೇಕೆಂದು ಫಕೀರಪ್ಪ ರಾಯರು ಎಂಬವರು ಸ್ಕೂಲಬೋರ್ಡ ಮೇಲೆ ದಿವಾಣಿ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆಂದು ತಿಳಿಯುತ್ತದೆ.

ಹಿರೇ ಗಾಣಾಗರದಲ್ಲಿ ಅಬಕಾರಿ ಸಬ್ ಇನಸ್ಪೆಕ್ಟರರು ಕೆಲವು ಮನೆಗಳಿಗೆ ಮುತ್ತಿಗೆ ಹಾಕಿ ಭಟ್ಟಿಸರಾಯಿ ಪತ್ತೆಹಚ್ಚಿ ಮೂವರಮೇಲೆ ಖಟ್ಲೆ ಹಾಕಿದ್ದರು. ಅವರೆಲ್ಲರಿಗೂ ೨ ತಿಂಗಳ ಕಠಿಣ ಶಿಕ್ಷೆ ೧೦೦ ರೂ ದಂಡ ಇಲ್ಲವೆ ೧ ತಿಂಗಳ ಶಿಕ್ಷೆ ಆಯಿತು.

ಕೊಚ್ಚೀ ಸಂಸ್ಥಾನದಲ್ಲಿ ಪ್ರೌಢ ಮತದಾರಪದ್ಧತಿ ಮತ್ತು ಅಲ್ಪಸಂಖ್ಯಾಕರಿಗೆ ಯೋಗ್ಯ ಪ್ರಾತಿನಿಧ್ಯ ಕೊಡುವ ಹಾಗೂ ಪ್ರತ್ಯೇಕ ಮತದಾರ ಸಂಘಗಳನ್ನು ರದ್ದುಗೊಳಿಸುವ ಸುಧಾರಣೆಗಳನ್ನು ಜಾರಿಯಲ್ಲಿ ತರಲಿದೆ.

ಬೆಳಗಾವಿ

ಚಿಕ್ಕೋಡಿಯಲ್ಲಿಯ ರಿಕಾರ್ಡು ಕೀಪರ ನಾಯಿಕವಾಡಿಯವರು ಲಂಚ ತೆಗೆದುಕೊಳ್ಳುತಿರುವ ಸುದ್ದಿ ಹತ್ತಿದ್ದರಿಂದ ಲಂಚ ನಿರ್ಮೂಲನ ಖಾತೆಯ ಶ್ರೀ ಗುಡಿಯವರು ಅಲ್ಲಿಗೆ ಹೋಗಿ ಅವರ ಕಿಸೆ ತಪಾಸ ಮಾಡಲಾಗಿ ಗುರುತುಮಾಡಿದ ನೋಟುಗಳು ಅವರ ಹತ್ತರ ಸಿಕ್ಕವು. ಜಪ್ತ ಮಾಡಿ ಅವರನ್ನು ಜಾಮೀನ ಮೇಲೆ ಬಿಡುಗಡೆ ಮಾಡಿದರು.

ಹುಕ್ಕೇರಿ ತಾಲೂಕ ಸಬ್ ಇನಸ್ಪೆಕ್ಟರ ಶ್ರೀ ಕುಲಕರ್ಣಿ ಇವರು ತಮ್ಮ ಪೋಲೀಸರ ಸಹಾಯದಿಂದ ೨೯ ಜನ ಜೂಜುಗಾರರನ್ನು ೧೫೦೦ ರೂಪಾಯಿ ರೋಖ ಮತ್ತು ವಸ್ತು ಸಹಿತ ಜಪ್ತ ಮಾಡಿದ್ದಾರೆ. ಈ ಜನರನ್ನೆಲ್ಲ ಈಗ ಜಾಮೀನ ಮೇಲೆ ಬಿಡುಗಡೆ ಮಾಡಲಾಗಿದೆ.

ಬೆಳಗಾವಿಯ ಪ್ರಾಥಮಿಕ ಶಾಲೆಗಳನ್ನು ನಗರ ಸಭೆಯವರು ತಮ್ಮ ವಶಕ್ಕೆ ತೆಗೆದುಕೊಳ್ಳಲಿದ್ದು ಅವುಗಳ ಆಡಳಿತಗಾಗಿ ಸರಕಾರದವರು ಶ್ರೀ ಕಾಸಾರರನ್ನು ಏ. ಓ. ರನ್ನಾಗಿ ನೇಮಿಸಲಾಗಿದೆ.

ಬಳ್ಳಾರಿ

ಹೊಸಪೇಟೆಯಿಂದ ಬಳ್ಳಾರಿಗೆ ೪ ನೇ ತಾರೀಕು ಬೆಳಗು ಮುಂಜಾನೆ ಹೋಗುತಿದ್ದ ಒಂದು ಮಾಲ ಮೋಟರು ಗಾಡಿಯು ಬೈಲುವದ್ದಿಗೇರಿ ಹತ್ತರ ತೆಗ್ಗಿನಲ್ಲಿ ಉರುಳಿ ಬಿದ್ದು ಭಯಂಕರ ಅಪಘಾತಕ್ಕೀಡಾಯಿತು. ಇಬ್ಬರ ಮೇಲೆ ಕಾಳಿನ ಚೀಲ ಬಿದ್ದದ್ದರಿಂದ ಅವರು ಅಲ್ಲಿಯೆ ಮರಣ ಹೊಂದಿದರು. ಇನ್ನೊಬ್ಬರಿಗೆ ತೀವ್ರ ಗಾಯಗಳಾಗಿವೆ. ಡ್ರಾಯವ್ಹರನು ಈ ದುರಂತವನ್ನು ನೋಡಿ ಎದೆಯೊಡದುಕೊಂಡು ಪ್ರಾಣಬಿಟ್ಟನು.

ಬಳ್ಳಾರಿ ನಗರ ಸಭೆಗೆ ಜನಾಬ ಎಸ್ ಅಬ್ದುಲ್ ಖಾದರ ಸಾಹೇಬ, ಜನಾಬ ಹುಸೇನ ಖಾನಸಾಹೇಬ, ಡಿ ಎಲ್ [illegible] ನೆಡ್ಡ ಶರಣಪ್ಪನವರು, [illegible] ಜನಾಬ ಸಾದೀಕ ಸಾಹೇಬ, ಅಬ್ದುಲ್ ಮಜೀದ ಸಾಹೇಬ ವಿ. ಜಗನ್ನಾಥಂ. ೨೩ ಸದಸ್ಯರು ಹಿಂದೆಯೆ ಅವಿರೋಧ ಆರಿಸಲ್ಪಟ್ಟಿದ್ದು ಇನ್ನೊಂದು ಸ್ಥಳದ ಚುನಾವಣೆ ಅಕ್ಟೋಬರ ಕೊನೆಯ ವಾರದಲ್ಲಿ ನಡೆಯುವದು.

ಹೊಸಪೇಟೆ ನಗರಸಭೆಯಅಯ್ಕೆಯಾಗಿ ಶಿವಪ್ಪ ಪತ್ತಿಕೊಂಡು ಗುರುನಾಥಶೆಟ್ಟಿ, ಶಮುದ ಸಾಬೇಬ ಐಲಿನಾಲ್ಲಣ್ಣ ಹಾಗು ಅಮ್ಮದಸಾಹೇಬರು ಆರಿಸಿಬಂದರು. ಶ್ರೀ ವಿರುಪಾಕ್ಷಪ್ಪ ಇವರು ಅವಿರೋಧ ಆರಿಸಿಬಂದರು. ಇನ್ನೊಂದು ಸ್ಥಳದ ಆಯ್ಕೆಯಾಗುವದಿದೆ.

ಉತ್ತರ ಕನ್ನಡ

ಜಿಲ್ಹೆಯಲ್ಲಿ ಜೋಳದ ಬದಲು ಕೆಲವೊಂದು ಶಾವಕ್ಕಿ ತರಿಸಿದ್ದಾರೆ. ಒಂದೆರಡು ದಿನಗಳಲ್ಲಿ ಸೀದಾ ಅಂಗಡಿಗಳಲ್ಲಿ ಕೊಡಹತ್ತಿರುವರು. ಜನರು ತಮ್ಮ ಆಹಾರ ಧಾನ್ಯಗಳನ್ನು ತಮ್ಮ ಸ್ವಂತ ಸ್ಥಳಗಳಲ್ಲಿಟ್ಟುಕೊಳ್ಳುವದೊಳಿತೆಂದೂ ಹೆರವರ ಸ್ಥಳದಲ್ಲಿ ಇಡುವದು ಒಳಿತಲ್ಲೆಂದೂ ಜಿಲ್ಹಾಧಿಕಾರಿಗಳು ತಿಳಿಸುತ್ತಾರೆ. ಬೇರೆಯವರ ಸ್ಥಳದಲ್ಲಿಟ್ಟ ಆಹಾರ ಧಾನ್ಯಗಳ ಬಗ್ಗೆ ಅಧಿಕಾರಿಗಳಿಗೆ ಸಮಾಧಾನಕರ ಮಾಹಿತಿ ಸಿಗದಿದ್ದಲ್ಲಿ ಅವನ್ನು ಸರಕಾರಕ್ಕೆ ಜಮೆ ಮಾಡುತ್ತಾರೆಂದೂ ಅವರು ಎಚ್ಚರಿಕೆ ಕೊಡುತ್ತಾರೆ.

ಸಿದ್ದಾಪುರದಿಂದ ೫೦೦ ಚೀಲ ಅಕ್ಕಿ ಕುಮುಟೆಗೂ ಹೊನ್ನಾವರಕ್ಕೂ ಹೋಗಿದೆಯಂತೆ. ಆದರೆ ಸಿದ್ದಾಪುರದಲ್ಲಿ ಈಗ ಪ್ಲೇಗ ಬೇನೆಯಿದ್ದುದರಿಂದ ಸರಕಾರಿ ಗುದಾಮುಗಳಲ್ಲಿಯೂ ಇಲಿ ಬಿದ್ದುದರಿಂದಲೂ ಈ ಅಕ್ಕಿಯನ್ನು ಶುದ್ಧಮಾಡಿ ಕುಮಟೆ ಹೊನ್ನಾವರದಲ್ಲಿಯ ಜನರಿಗೆ ಕೊಡಬೇಕೆಂದು ಮುಂತಾಗಿ ಸೂಚಿಸಲಾಗುತ್ತದೆ.

ಕಳೆದ ಅಗಷ್ಟದಲ್ಲಿ ಅಕ್ಕಿ ಚೀಲಗಳನ್ನು ಕಳ್ಳತನದಿಂದ ಸಾಗಿಸುವ ಪ್ರಯತ್ನದಲ್ಲಿ ಸೇರಿದ ಆರೋಪದಿಂದ ಗೊಪಶಿಟ್ಟು ಹಳ್ಳಿಯ ಪೋಲೀಸ ಪಾಟೀಲ ಶಾನಭೋಗ ಹಾಗು ಆರುಅಬಕಾರಿನೋಕರರನ್ನು ಸಸ್ಪೆಂಡಮಾಡಲಾಗಿದೆ ಯೆಂದು ತಿಳಿಯುತ್ತದೆ.

ಕಳ್ಳ ಸರಾಯಿ ವ್ಯಾಪಾರದಬಗ್ಗೆ ಹಳ್ಯಾಳದಲ್ಲಿ ಇಬ್ಬರಿಗೆ ೪॥ ತಿಂಗಳ ಶಿಕ್ಷೆ ಹೆಚ್ಚಿನ ಧಾರಣೆಗೆ ಬೆಲ್ಲ ಮಾರಿದ್ದರಿಂದ ವಾಮದೇವರ ಹೆಗಡೆಯವರಿಗೆ ೩೦೦ ರೂಪಾಯಿ ದಂಡ ಆಗಿರುವದು.

ವಿಜಾಪುರ

ವಿಜಾಪುರ ಜಿಲ್ಲಾ ಲೋಕಲ್ ಬೋರ್ಡಿನಲ್ಲಿ ಲೋಕಲ್ ಫಂಡನ್ನು ರೂಪಾಯಿಗೆ ೨ ಆಣೆಯಿಂದ ೩ ಆಣೆಗೆ ಏರಿಸಬೇಕೆಂದೂ ಇದಕ್ಕೆ ಯಾವ ಕರಾರನ್ನೂ ಹಾಕಬಾರದೆಂದೂ ನಿರ್ಣಯಿಸಲಾಯಿತು. ಶ್ರೀ ಮುರಿಗೆಪ್ಪ ಸುಗಂಧಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮತ್ತೊಂದು ಗೊತ್ತುವಳಿಯಿಂದ ಸರಕಾರದವರು ತಂದ ಸ್ಕೂಲ ಬೋರ್ಡ ಕಾಯದೆ ತಿದ್ದುಪಡಿ ಮಸೂದೆಯನ್ನು ನಿಷೇಧಿಸಲಾಯಿತು.

ವಿಜಾಪುರ ನಗರ ಸಭೆಯಸಭೆ ಸೇರಿ ಶ್ರೀ ಭೋರಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಈ ಮೊದಲು ಇವರೆ ಅಧ್ಯಕ್ಷರಿದ್ದರು. ಆದರೆ ಇವರ ಸದಸ್ಯತ್ವ ರದ್ದಾಗಿದ್ದಿತು. ಆದರೆ ಹೊಸ ಆಯ್ಕೆಯಲ್ಲಿ ಅವಿರೋಧ ಆರಿಸಿ ಬಂದು ಮತ್ತೆ ಒಮ್ಮತದಿಂದ ಅಧ್ಯಕ್ಷರಾಗಿ ಆರಿಸಿ ಬಂದರು.

ವಿಜಾಪೂರದ ಶ್ರೀ. ಅಲಬಾಳ ವಕೀಲರಲ್ಲಿ ಅಡಿಗೆ ಮಾಡುತಿರುವ ವಿಧವೆಯ ಪೋಟಿಗಿ ಹಣವನ್ನು ಬೇರೊಬ್ಬಳಿಗೆ ಅವಳೇ ಆ ವಿಧವೆಯೆಂದು ಕೊಟ್ಟಿದ್ದಕ್ಕಾಗಿ ಬಾಗೇವಾಡಿ ತಾಲೂಕ ಕಚೇರಿಯ ಕಾರಕೂನ ಶ್ರೀ. ಎಂ. ಡಿ. ಪಾಟೀಲರ ಮೇಲೆ ಖಟ್ಲೆ ಹಾಕಲಾಗಿತ್ತಷ್ಟೆ. ಈ ಖಟ್ಲೆಯಲ್ಲಿ ಅವರು ನಿರ್ದೋಷಿಯೆಂದು ಬಿಡುಗಡೆ ಹೊಂದಿದರು. ಬೇರೊಬ್ಬ ವಿಧವೆಯೇ ಈ ವಿಧವೆಯೆಂದು ಗುರುತು ಹೇಳಿ ಮೋಸ ಮಾಡಿದವರಿಗೆ ೪ ತಿಂಗಳ ಶಿಕ್ಷೆ ಮತ್ತು ೧೦೦ ರೂಪಾಯಿ ದಂಡ ವಿಧಿಸಲಾಯಿತು.

ಬಾಗಲಕೋಟೆಯಲ್ಲಿ ಕರ್ನಾಟಕ ಬ್ರಾಹ್ಮಣ ಎಜ್ಯುಕೇಶನ ಸೊಸಾಯಿಟಿಗೆ ಈ ವರೆಗೆ ೫೦ ಬ

ಸಂಸ್ಥಾನಗಳು

ಹೈದರಾಬಾದ, ಹಿಂದುಸ್ಥಾನ ಸರಕಾರಕ್ಕೆ ಕಳಿಸಿದ ಪತ್ರದಸಲುವಾಗಿ ಹಿಂದುಸ್ಥಾನ ಸರಕಾರವು ನಿಜಾಮರಿಗೆ ಫಲಕಾರಕ ಮಾತುಕತೆ ನಡೆಸಲು ಶ್ರೀ ವಿ ಪಿ ಮೆನನ್‌ರ ಅಧ್ಯಕ್ಷತೆಯಲ್ಲಿ ಒಂದು ಶಿಷ್ಟಮಂಡಳವನ್ನು ಕಳಿಸಿದೆ.

ಡಾ. ಜಿನ್ನಾರ ಆಪ್ತಕಾರ್ಯದರ್ಶಿ ಖುರ್ಶೀದರು ಕಾಶ್ಮೀರಕ್ಕೆ ಹೋಗಿರುವದರಿಂದ ಅವರ ಈ ಪ್ರಯಾಣಕ್ಕೆ ಬಹಳ ಮಹತ್ವ ಕೊಡಲಾಗಿದೆ; ಕಾಶ್ಮೀರ ಮಹಾರಾಜರು ಹಿಂದುಸ್ತಾನದಲ್ಲಿ ಸೇರದಂತೆ ಮನವೊಲಿಸುವದು ಖುರ್ಶೀದರ ಪ್ರಯಾಣದ ಉದ್ದೇಶವಿದೆಂದು ತಿಳಿಸಲಾಗಿದೆ.

ಜುನಾಗಡವು ಪಾಕಿಸ್ತಾನವನ್ನು ಸೇರಿದ್ದನ್ನು ಒಪ್ಪಿಕೊಳ್ಳಲು ಹಿಂದುಸ್ತಾನ ಸರಕಾರವು ನಿರಾಕರಿಸಿದೆ. ಅದರಂತೆ ಹಿಂದುಸ್ತಾನವನ್ನು ಸೇರಿದ ಬಾಬರವಾಡ ಮತ್ತು ಮಂಗ್ರೋಲಗಳ ಮೇಲೆ ಪಾಕಿಸ್ತಾನವು ಹಕ್ಕು ಸಾಧಿಸಲು ಬಂದುದನ್ನು ಪ್ರತಿಭಟಿಸಿದೆ.

ಅಲೀಗಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗು ಸ್ಥಳಿಕ ನೇತರುಗಳ ಹೋರಾಟಗಾರರು ಪ್ರಕಟನೆ ಹೊರಡಿಸಿ ಬಕರೀದದ ದಿನ ಗೋವಧೆ ಮಾಡಬಾರದೆಂದು ಎಲ್ಲ ಮುಸಲ್ಮಾನರನ್ನು ಬಿನ್ನೈಸಿಕೊಂಡಿದ್ದಾರೆ.

ವರ್ಗದ ಆಜೀವ ಸದಸ್ಯರು, ಒಬ್ಬರು ಅ ವರ್ಗದ ಸದಸ್ಯರು, ೧೪ ವಾರ್ಷಿಕ ಬ ವರ್ಗದ ಸದಸ್ಯರು ೫೩ ವಾರ್ಷಿಕ ಕ ವರ್ಗದ ಸದಸ್ಯರು ದೊರೆತಿರುವರು. ಡಾ. ಭಗೀರಥರಾವ ದೇಶಪಾಂಡೆಯವರ ಈ ಕೆಲಸಕ್ಕಾಗಿ ಅಲ್ಲಿಗೆ ಹೋಗಿದ್ದರು.



ಮುಂಬಯಿ

[illegible] ಜಿಲ್ಲೆಯ ಸಾವನಾವ [illegible] ಧುರೀಣರಾದ [illegible] ಸಾವನೇಕರ ಹಾಗು ಅವರ ಇಬ್ಬರು ಸಂಗಡಿಗರಿಗೆ ತಲಾ ೧ ವರ್ಷ ಕಠಿಣ ಶಿಕ್ಷೆ ಮತ್ತು ೩೫೦ ರೂ, ದಂಡ ವಿಧಿಸಲಾಗಿದೆ. ಅದೇ ಜಿಲ್ಲೆಯ ಪರ್ಟೋಡದ ಸೇವಾದ ಹಾಗು ಗಣಪತರಾವ ಅವರಿಗೆ ೨ ವರ್ಷ ಕಠಿಣ ಶಿಕ್ಷೆ ಬೇರೆ ೯ ಜನರಿಗೆ ತಲಾ ೧ ವರ್ಷ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿದೆ.

ಪ್ರತಿನಿತ್ಯ ಸಂಜೆ ೫—೪೫ ರಿಂದ ೬ ಗಂಟೆ ವರೆಗೆ ದಿಲ್ಲಿ ಆಕಾಶ ವಾಣಿಯಿಂದ ಬಿತ್ತರಿಸಲಾಗುವ ಕನ್ನಡ ಸುದ್ದಿಗಳನ್ನು ಅದೇ ಸಮಯಕ್ಕೆ ಮುಂಬಯಿ ಕೇಂದ್ರದಿಂದಲೂ! ೨೪೪ವಿಟರುಗಳಲ್ಲಿ ಪ್ರಸಾರ ಮಾಡಲಾಗುವದು.

ಮುಂಬಯಿ ಕೇಂದ್ರದ ೫—೪೫ ರ ನಿತ್ಯದ ಕಾರ್ಯಕ್ರಮವನ್ನು ४೧—४४ ಮೀಟರಗಳಲ್ಲಿ ಮಾತ್ರ ಬಿತ್ತರಿಸಲಾಗುವದೆಂದು ಮುಂಬಯಿ ಆಕಾಶವಾಣಿ ಅಧಿಕಾರಿಗಳು ತಿಳಿಸುತ್ತಾರೆ.

ಹಿಂದೀ ಒಕ್ಕೂಟದಲ್ಲಿಯ ತಮ್ಮ ಅನುಯಾಯಿಗಳೆಲ್ಲ ಆ ಸರಕಾರಕ್ಕೆ ಸಂಪೂರ್ಣ ನಿಷ್ಠೆ ಭಕ್ತಿ ಶ್ರದ್ಧೆಗಳನ್ನು ವಹಿಸಿ ನಡೆಯತಕ್ಕದ್ದು ಮತ್ತು ಕಲಕತ್ತೆಯಲ್ಲಿಯಂತೆ ಕಾಂಗ್ರೆಸ್ ಗವರ್ನರರನ್ನು ಕಂಡುಕೊಂಡು ಸಂಪೂರ್ಣ ನಿಷ್ಠೆಯನ್ನು ತೋರಿಸಬೇಕೆಂದು ಮುಂತಾಗಿ ಆಗಾಖಾನರು ಉಪದೇಶಿಸಿದ್ದಾರೆ.

ಮುಂಬಯಿ ದ್ವಾರಕಾದಾಸ [illegible]

[illegible]

[illegible] ಕ್ಷೇತ್ರದಲ್ಲಿ ಆಗಿದ್ದು [illegible] ಟನ್ [illegible]

[illegible]

ಉಪ್ಪಿನ ಮೇಲಿನ ಕರವನ್ನು ರದ್ದು ಮಾಡಲಾಗಿದ್ದರಿಂದ ಒಕ್ಕಲತನದ ಸಲುವಾಗಿ ಸವಲತ್ತಿನ ದರದಿಂದ ಬೆರಿಕೆಯ ಉಪ್ಪಿನ ಪೂರೈಕೆ ಪದ್ಧತಿಯನ್ನು ನಿಲ್ಲಿಸಿಬಿಡಬೇಕೆಂದು ಮುಂಬಯಿ ಸರಕಾರದವರು ನಿರ್ಧರಿಸಿದರು.

ಸರಕಾರಿ ಭೂಮಿಗಳನ್ನು ಅನ್ಯಾಯವಾಗಿ ಆಕ್ರಮಿಸಿದವರ ವಿರುದ್ಧ ಮುಂಬಯಿ ಸರಕಾರ ಉಗ್ರ ಕ್ರಮವನ್ನು ಕೈಕೊಳ್ಳಬೇಕೆಂದು ಇಚ್ಛಿಸಿದೆ. ಈ ವರ್ಷದ ಕೊನೆಯೊಳಗಾಗಿ ಈ ಭೂಮಿಗಳನ್ನು ಬಿಟ್ಟು ಕೊಡಬೇಕು.

ಮುಂಬಯಿ ಸರಕಾರದವರು ಪ್ರಕಟನೆಯೊಂದನ್ನು ಹೊರಡಿಸಿ ಅಕ್ರಮ ರೀತಿಯಿಂದ ಶಸ್ತ್ರಗಳನ್ನು ಮತ್ತು ಮದ್ದುಗುಂಡುಗಳನ್ನು ಇಟ್ಟುಕೊಂಡವರು ಮುಂಬಯಿ ಪೋಲೀಸ ಕಮೀಶನರ [illegible] ಮ್ಯಾಜಿಸ್ಟ್ರೇಟರ ಕಡೆಗೆ [illegible]

[illegible]

[illegible] ರೂಪಾಯಿ [illegible]

[illegible]

ಹೊಸದಿಲ್ಲಿ

ಸಂಬಳ ಸಮಿತಿಯವರ ಸಲಹೆಯಂತೆ ಸಂಬಳ ಕೊಡುವ ಮಧ್ಯಂತರ ಅವಧಿಯಲ್ಲಿ ೩ ಮತ್ತು ೪ ನೆ ವರ್ಗದ ಕೆಲ ದರ್ಜೆಯ ನೋಕರರಿಗೆ ೫೦ ರೂಪಾಯಿಗಳ ಮುಂಗಡ ಹಣವನ್ನು ಕೊಡಬೇಕೆಂದು ರೇಲ್ವೆ ಬೋರ್ಡಿನವರು ನಿರ್ಣಯಿಸಿದ್ದಾರೆ.

ಹಿಂದುಸ್ತಾನ ಸರಕಾರದವರು ಉಪ್ಪಿನ ಉತ್ಪತ್ತಿಯನ್ನು ಹೆಚ್ಚಿಸುವ ಉದ್ದೇಶದಿಂದ ಆರ್ಥಿಕ ಶಾಖೆಯ ಕಡೆಗೆ ಇದ್ದ ಉಪ್ಪಿನ ವ್ಯವಹಾರವನ್ನು ಉದ್ಯೋಗ ಹಾಗು ಪೂರೈಕೆ ಶಾಖೆಗೆ ಒಪ್ಪಿಸಲಿಚ್ಛು ಉಪ್ಪಿನ ಬೆಲೆ ನಿಯಂತ್ರಣಮಾಡಿ ಬಡ ಜನರಿಗೂ ಸಾಕಷ್ಟು ಉಪ್ಪು ನಿಯಂತ್ರಿತ ಬೆಲೆಗೆ ದೊರೆವ ವ್ಯವಸ್ಥೆ ಮಾಡುವದಾಗಿ ನಿಶ್ಚಯಿಸಿದ್ದಾರೆ.

೧೪,೫೫೦೦ ಟನ್ನ ಆಹಾರವು ಅಕ್ಟೋಬರ ತಿಂಗಳಲ್ಲಿ ಅಮೇರಿಕೆ ಕಾನಡ ಆಸ್ಟ್ರೇಲಿಯಗಳಿಂದ ಬರಲಿದೆ. ಇದರಲ್ಲಿ ೭೯೭೦೦ ಟನ್ ಗೋದಿ, ೪೩೫೦೦ ಟನ್ ಗೋದಿಹಿಟ್ಟು ೩೭೦೦ ಟನ್ ಅಕ್ಕಿ ಇರುವದಾಗಿ ತಿಳಿಯುತ್ತದೆ.

ಹಿಂದುಸ್ತಾನ ಸರಕಾರದವರು ಪ್ರಾಂತಿಕ ಸರಕಾರಗಳ ಅಭಿಪ್ರಾಯಗಳನ್ನು ಪರಿಶೀಲಿಸಿ ಸಕ್ಕರೆಯ ಮೇಲಿನ ನಿಯಂತ್ರಣವನ್ನು ತೆಗೆದು ಹಾಕಬಾರದೆಂದು ನಿರ್ಣಯಿಸಿದ್ದಾರೆ. ರಾಷ್ಟ್ರದಲ್ಲಿ ಇನ್ನೂ ಸಕ್ಕರೆಯ ಕೊರತೆ ಇರುವದರಿಂದ ಈ ನಿರ್ಣಯಕ್ಕೆ ಬರಲಾಗಿದೆ.

ಜಬ್ಬಲಪುರದಲ್ಲಿ ಒಂದು ಶೋಧದಲ್ಲಿ ಪೋಲೀಸರಿಗೆ ೮ ಬಾಂಬುಗಳು ೬೦೦ ಕಾಡತೂಸುಗಳು ತುಕ್ಕು ಹಿಡಿದ ಖಡ್ಗಗಳು ತಿವಿಗತ್ತಿ ಮೊದಲಾದ ಅಸ್ತ್ರಗಳು ದೊರೆತಿವೆ.

ಸಯ್ಯದಅಲ್ಲಿ ಜಹೀರರು ಇರಾಣದಲ್ಲಿ ಹಿಂದುಸ್ತಾನದ ರಾಯಭಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ. ಇವರು ಸಂಯುಕ್ತಪ್ರಾಂತದ ಶಿಯ್ಯಾ ಮುಸಲ್ಮಾನರ ಮುಂದಾಳುಗಳಿದ್ದು ಪ್ರಥಮ ನಡುಗಾಲ ಸರಕಾರದಲ್ಲಿ ಅಂಚೆ ಮಂತ್ರಿಗಳಾಗಿದ್ದರು.

ಸಂಯುಕ್ತಪ್ರಾಂತ

ಹಿಂದೀ ಒಕ್ಕೂಟದಲ್ಲಿಯ ಮುಸ್ಲಿಂ ಲೀಗ ಬಂಧುಗಳ ಸಹಾಯಕ್ಕೆ ಹಿಂದುಸ್ತಾನದಲ್ಲಿಯ ಪ್ರಾಂತಗಳಿಂದಲೆ ಹೆಚ್ಚಾಗಿ ಕೂಡಿಸಿದ ಹಣದಲ್ಲಿ ಒಂದು ಪೈ ಕೂಡ ಕೊಡುವದಿಲ್ಲೆಂದು ಜಿನ್ನಾ ಸಾಹೇಬರು ತಿಳಿಸಿರುವರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಈ ಎಲ್ಲ ಹಣವನ್ನು ಕರಾಚಿಗೆ ಸಾಗಿಸಲಾಗಿದೆ. ಮುಸ್ಲಿಂ ಲೀಗಿನ ಕೆಲ ಸದಸ್ಯರು ಕೇಂದ್ರ ಸಂಸ್ಥೆಯ ವಿರುದ್ಧ ದಾವೆ ಮಾಡುವರಾಗಿ ತಿಳಿಯುತ್ತದೆ.

ಭಾರತ ಸರಕಾರದ ಸಂಪರ್ಕ ಮಂತ್ರಿಗಳಾದ ಶ್ರೀ ರಫಿ ಅಹಮ್ಮದ ಕಿಡ್ವಾಯಿ ಇವರ ತಮ್ಮ ಸಫಿ ಅಹಮ್ಮದ ಕಿಡ್ವಾಯಿ (೫೦) ಇವರು ೬ ನೇ ತಾರೀಕು ಇರಿತದ ಗಾಯಗಳಿಂದ ಸತ್ತರು. ವಾಯುಸೇವೆಗಾಗಿ ನಿತ್ಯದಂತೆ ಮುಂಜಾನೆ ಹೋಗಿದ್ದರು. ಆದರೆ ಬಹಳ ಹೊತ್ತಿನ ವರೆಗೆ ಅವರು ಮರಳದ್ದರಿಂದ ತಪಾಸ ಮಾಡಲಾಗಿ ೧೦ ಗಂಟೆಗೆ ಅವರ ಶವ ಸಿಕ್ಕಿತು. ಇವರು ಮಂಸೂರಿ ಮುನಿಸಿಪಾಲಿಟಿಯ ಆಡಳಿತಗಾರರಾಗಿದ್ದರು.

ಅಬಕಾರಿ ಮಂತ್ರಿಗಳಾದ ಲಕ್ಷ್ಮಣರಾವ ಪಾಟೀಲರು ಮುಂಬಯಿ ಕ್ಯಾನರಾ ಸಾರಸ್ವತ ಸಂಘದ ಸಭೆಯಲ್ಲಿ ಭಾಷಣಮಾಡುತ್ತ ರಾಷ್ಟ್ರದ ಯುವಕರು ರಾಷ್ಟ್ರ ಪೋಷಕ ಕಾರ್ಯ ಕೈಕೊಳ್ಳುವದು ಅವಶ್ಯವಿದೆಯೆಂದು ಹೇಳಿದರು.

೧೯೪೩ ರಲ್ಲಿ ಗವರ್ನರ ಸರಕಾರದವರು ಮಾಡಿದ್ದ ಅರಳೆ ನಿಯಂತ್ರಣ ಕಾಯದೆಯನ್ನು ರದ್ದುಗೊಳಿಸಿ ಕೆಲವು ತಿದ್ದುಪಡಿಗಳೊಂದಿಗೆ ಅದೇ ಮಾದರಿಯ ಹೊಸ ಕಾಯದೆ ಮಾಡುವ ಉದ್ದೇಶದಿಂದ ಮುಂಬಯಿ ಸರಕಾರದವರು ಅರಳೆ ನಿಯಂತ್ರಣ ಮಸೂದೆಯನ್ನು ಪ್ರಸಿದ್ಧಿಸಿದ್ದಾರೆ. ಅರಳೆ ನಿಯಂತ್ರಣವನ್ನು ಪ್ರತಿಬಂಧಿಸುವದು ಹೊಸ ತಿದ್ದುಪಡಿಗಳ ಉದ್ದೇಶಗಳಲ್ಲೊಂದಾಗಿದೆ.

ಪುಣೆ ಜಿಲ್ಹಾ ಮ್ಯಾಜಿಸ್ಟ್ರೇಟರು ತಳೇಗಾವದ ಹಿಂದು ನಿವಾಸಿಗಳ ಮೇಲೆ ೫೦೦೦ ರೂಪಾಯಿ ಸಾಮೂಹಿಕ ದಂಡವನ್ನು ಹೇರಿದ್ದಾರೆ.

ಮಧ್ಯಪ್ರಾಂತ

ಜಬ್ಬಲಪುರ ಜಿಲ್ಹಾ ಮ್ಯಾಜಿಸ್ಟ್ರೇಟರ ಅಧ್ಯಕ್ಷತೆಯಲ್ಲಿ ಕೂಡಿದ್ದ ಸಂಯುಕ್ತ ಶಾಂತಿ ಸಮಿತಿಯ ಕಾಲಕ್ಕೆ ಮುಸ್ಲಿಂಲೀಗಿನ ಧುರೀಣರಾದ ಮೌಲಾನಾ ಬರಾನ್ಹುಲ್ ಹಕ್ಕ ಎಂ. ಎಲ್. ಎ. ಇವರು ಮಾತಾಡುತ್ತ ಇನ್ನು ಮುಂದೆ ಹಬ್ಬದಲ್ಲಿ ಗೋವಧೆ ಮಾಡುವದಿಲ್ಲೆಂದೂ ಮಶೀದೆಯನ್ನು ಪವಿತ್ರಗೊಳಿಸಲು ಅದರ ಮುಂದೆ ಗೋವಧೆ ಮಾಡುವದನ್ನು ನಿಲ್ಲಿಸಲಾಗುವದೆಂದೂ ಹೇಳಿದರು. ಹಿಂದೀ ಒಕ್ಕೂಟ ಸರಕಾರಕ್ಕೆ ಅತ್ಯಂತ ನಿಷ್ಠರಾಗಿ ಶಾಂತಿಯಿಂದ ಬಾಳುವೆ ಸಾಗಿಸುವದು ತಮಗೆ ಬೇಕಾಗಿದೆಂದೂ ಅದಕ್ಕಾಗಿ ತಮಗೆ ಸೌಕರ್ಯಗಳನ್ನು ಒದಗಿಸಬೇಕೆಂದೂ ಸರಕಾರಕ್ಕೆ ಕೇಳಿಕೊಂಡರು.

ಮಧ್ಯಪ್ರಾಂತದಲ್ಲಿಯ ಇಬ್ಬರು ಉಪಮಂತ್ರಿಗಳಾದ ಪಂಡಿತ ಕುಂಜಿಲಾಲ ದುಬೆ ಮತ್ತು ಡಾ. ಖೂಬಚಂದ ಬಾಘೇಲ ಇವರು ರಾಜೀನಾಮೆಯನ್ನು ಕೊಟ್ಟಿದ್ದಾರೆ.

ಪಶ್ಚಿಮ ಬಂಗಾಲ

ರೇಲ್ವೆ ಪೋಲೀಸರು ಡಂಡಂದಲ್ಲಿ ಆಳವು ಮೀರಿ ವರ್ತಿಸುತಿದ್ದ ಜನಸಂದಣಿಯ ಮೇಲೆ ಗುಂಡು ಹಾರಿಸಲಾಗಿ ನಾಲ್ವರು ಗಾಯಗೊಂಡರು. ಇವರು ಗಾಡಿ ನಿಲ್ಲಿಸಿ ಲೂಟ ಮಾಡುತಿದ್ದರಂತೆ.

ಬಂಗಾಲದ ಸುಪ್ರಸಿದ್ಧ ಗಾಯಕರಾದ ಪಂಕಜ ಕುಮಾರ ಮಲ್ಲಿಕರು ಗವರ್ನರ ರಾಜಾಜಿಯವರ ಬಂಗಲೆಯಲ್ಲಿ ೪ ನೇ ತಾರೀಕು ರಾತ್ರಿ ಭಕ್ತಿರಸ ಪ್ರಧಾನ ಗೀತೆಗಳನ್ನು ಹಾಡಿದರು. ಗವರ್ನರರು, ಅವರ ಮನೆಯವರು, ಅನೇಕ ಅತಿಥಿಗಳು ಉಪಸ್ಥಿತರಾಗಿದ್ದರು.

ಅಬ್ದುಲ್ ಕಮಾಲ ಅನ್ಸಾರಿಯವರು ಪಾಕಿಸ್ತಾನ ಮುಸಲ್ಮಾನರನ್ನು ಉದ್ದೇಶಿಸಿ ಪ್ರಕಟನೆ ಹೊರಡಿಸಿ ಹಿಂದುಸ್ತಾನದೊಡನೆ ಪುನಃ ಒಂದಾಗಿ ಇಂದಿನ ಹತ್ಯಾಕಾಂಡವನ್ನು ನಿಲ್ಲಿಸಬೇಕಾಗಿ ಬಿನ್ನವಿಸಿದ್ದಾರೆ.

ಕಲಕತ್ತೆಯ ಒಂದು ಹಾಳುಮನೆಯಲ್ಲಿ ನುಗ್ಗಿ ಪೋಲೀಸರು ೧೦೦ ಬಾಂಬುಗಳನ್ನು ೮ ಕೈಬಾಂಬುಗಳನ್ನು ೨೬೦೦ ಕಾಡತೂಸುಗಳನ್ನು ಟ್ಯಾಂಕುಗಳನ್ನು ಹಾರಿಸುವ ಸುರಂಗಗಳನ್ನೂ ಅಸಂಖ್ಯ ಖಡ್ಗಗಳನ್ನೂ ಬರ್ಚಿಗಳನ್ನು ಲಾರಿಗಳನ್ನೂ ಕೈವಶಮಾಡಿಕೊಂಡಿದ್ದಾರೆ. ಈ ಸ್ಥಳವು ಮದ್ದಿನ ಸಣ್ಣ ಕಾರಖಾನೆಯೊ ಏನೊ ಎನ್ನುವಂತೆ ಇದೆಯೆಂದು ಹೇಳಲಾಗುತ್ತದೆ.

ಪೂರ್ವ ಪಂಜಾಬ

ಪೂರ್ವ ಪಂಜಾಬದ ಗವರ್ನರರು ಆರ್ಡಿನನ್ಸೊಂದನ್ನು ಹೊರಡಿಸಿ ಮಂತ್ರಿಗಳ ಸಂಬಳವನ್ನು ನಿರ್ಧರಿಸಿದ್ದಾರೆ. ಮುಖ್ಯ ಮಂತ್ರಿಗಳಿಗೆ ವರ್ಷಕ್ಕೆ ೨೪೦೦೦ ಮತ್ತು ಉಳಿದ ಮಂತ್ರಿಗಳಿಗೆ ೧೮೦೦೦ ರೂ. ಅಲ್ಲದೆ ೩೬೦೦ ರೂ. ವಾಹನ ಭತ್ತೆ ಹಾಗು ಮನೆಗಳನ್ನು ಕೊಡಲಾಗುವದು.

ಪಶ್ಚಿಮ ಪಂಜಾಬದಿಂದ ಪೂರ್ವ ಪಂಜಾಬಕ್ಕೆ ४೦ ಮೈಲು ಉದ್ದವಿದ್ದ ನಿರಾಶ್ರಿತರ ತಂಡವೊಂದು ಪೂರ್ವ ಪಂಜಾಬದಿಂದ ಹೊರಟ ಅಮೈಲು ಉದ್ದದ ಮತ್ತೊಂದುತಂಡವು ೬ನೇ ತಾರೀಕಿನ ದಿನ ಹೋಗುತಿದ್ದಿತು. ರೋಡಗಳಿಗೆ ಮತ್ತು ರೇಲ್ವೆಗಳಿಗೆ ವಿಪರೀತ ಹಾನಿಯಾಗಿದ್ದು ಕಂಡುಬಂದು ಪಾಕಿಸ್ತಾನದಿಂದ ಹಿಂದುಸ್ತಾನಕ್ಕೆ ४ ಲಕ್ಷ ನಿರಾಶ್ರಿತರು ಬಂದಂತಾಗಿದೆ.

ಆಸಾಮ

ಆಸಾಮ ಸರಕಾರದವರು ಪ್ರಾಂತದಲ್ಲಿಯ ಜಮೀನದಾರಿಯನ್ನು ಕಿತ್ತಿಹಾಕಬೇಕೆಂದು ನಿರ್ಧರಿಸಿರುವರೆಂದು ತಿಳಿಯುತ್ತದೆ. ಜಮೀನದಾರಿಯನ್ನು ರದ್ದುಗೊಳಿಸಲು ಬೇರೆ ಪ್ರಾಂತಗಳಲ್ಲಿ ಯಾವ ಕ್ರಮವನ್ನು ಕೈಕೊಂಡಿರುವರೆಂದು ಮುಂತಾದ್ದನ್ನು ಅಭ್ಯಸಿಸಿ ತಮಗೆ ಸಲಹೆ ಕೊಡಲು ಸರಕಾರದವರು ಸ್ಪೆಶಲ್ ಆಫೀಸರರನ್ನು ನೇಮಿಸಿದ್ದಾರೆ.

ಆಸಾಮದಲ್ಲಿ ಆಸಾಮಿಯನ್ನೆ ಪ್ರಾಂತ ಭಾಷೆಯನ್ನಾಗಿ ಮಾಡಲಾಗಿದೆಯೆಂದು ಆಸಾಮ ಸರಕಾರವು ಸಾರಿದೆ. ಬಂಗಾಲ ಪ್ರಾಂತಿಕ ಸರಕಾರದವರು ಅದೇ ರೀತಿ ಬಂಗಾಲಿಯೆ ಪ್ರಾಂತದ ಭಾಷೆಯೆಂದು ಸಾರಿದ್ದಾರೆ.

ಪಾಕಿಸ್ತಾನ

ಸಿಂಧ

ಕರಾಚಿಯಿಂದ ನಿರ್ಯಾತವು ಹೆಚ್ಚಿಗೆ ನಡೆದಿದ್ದು ಆಯಾತವು ಕಡಿಮೆಯಾಗಿದೆ. ಆದುದರಿಂದ ಹತ್ತಿಯ ಸಂಗ್ರಹವು ಕರಾಚಿಯಲ್ಲಿ ಅರ್ಧದಷ್ಟು ಕಡಮೆಯಾಗಿದೆ. ೧೬೫ ಸಾವಿರ ಗಂಟಿನಷ್ಟು ಈಗ ಹತ್ತಿಯ ಸಂಗ್ರಹವಿದ್ದು ೯೦ ಸಾವಿರ ಗಂಟು ನಿರ್ಯಾತದ ಹಾದಿಯಲ್ಲಿ ಇವೆ. ಪಾಕಿಸ್ತಾನ ಮತ್ತು ಸಿಂಧ ಸರಕಾರಗಳ ಆಡಳಿತದಲ್ಲಿ ಅಲ್ಪಸಂಖ್ಯಾಕರಿಗಿದ್ದ ವಿಶ್ವಾಸ ಹಾರಿ ಹೋಗಿದ್ದರಿಂದ ಅವರು ಹತ್ತಿಯನ್ನು ಹೊರಗೆ ಕಳಿಸಹತ್ತಿದ್ದಾರೆ.

ಕರಾಚಿಯಲ್ಲಿ ಮುಸಲ್ಮಾನೇತರರ ಆಕಳಗಳನ್ನು ಕಳವು ಮಾಡುವುದು ಜೋರಿನಿಂದ ಸಾಗಿದ್ದು ಇಲ್ಲಿಯ ಗುಜರಾತ ನಗರ ವಿಭಾಗದಿಂದ ४೦ ಆಕಳಗಳು ಕಳವಾಗಿ ಹೋಗಿವೆ. ಸಪ್ಟಂಬರ ಒಂದೇ ತಿಂಗಳಲ್ಲಿ ೨೫೦ ಆಕಳುಗಳು ಕಳವಾಗಿ ಹೋದ ದೂರು ಬಂದಿವೆ. ಇಲ್ಲಿಯ ವರೆಗೆ ಈ ಆಕಳಗಳ ಶೋಧವಾಗಿಲ್ಲ. ಯಾರನ್ನೂ ಬಂಧಿಸಲಾಗಿಲ್ಲ. ಮುಸಲ್ಮಾನೇತರರಿಗೆಲ್ಲ ತಮ್ಮ ಆಕಳುಗಳ ಬಗ್ಗೆ ವಿವಂಚನೆಯುಂಟಾಗಿದೆ.

ಭವಾಲಪುರ ಸಂಸ್ಥಾನವು ಪಾಕಿಸ್ತಾನ ಪ್ರವೇಶ ಪತ್ರಕ್ಕೆ ಸಹಿ ಮಾಡಿ ಪಾಕಿಸ್ತಾನ ಡೊಮಿನಿಯನ್ನಿನಲ್ಲಿ ಸೇರಿದೆಂದು ಅಧಿಕೃತ ಪ್ರಕಟನೆ ಹೊರಟಿದೆ.

ಸಿಂಧ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಡಾ. ಚೊಯಿತರಾಮ ಗಿಡ್ವಾನಿಯವರು ದಿಲ್ಲಿಯ ಒಂದು ಪತ್ರಿಕೆಯಲ್ಲಿ ಕೊಟ್ಟ ಹೇಳಿಕೆಯನ್ನು ಪಾಕಿಸ್ತಾನದ ಸಂಪರ್ಕ ಮಂತ್ರಿ ಸರದಾರ ಬಿ. ನಿಶಿತಾರರು ಅಲ್ಲಗಳೆಯುತ್ತ ತಾವು ಕ್ವೆಟ್ಟಾಕ್ಕೆ ಭೆಟ್ಟಿ ಕೊಟ್ಟಾಗ ಮತಾಂತರ ಹೊಂದಿದ ಒಬ್ಬನಾದರೂ ತಮ್ಮ ಕಣ್ಣಿಗೆ ಬೀಳಲಿಲ್ಲವೆಂದೂ ಹಿಂದು ಶೀಖರ ಮತಾಂತರ ನಡೆದಿದೆಂದು ತಮಗೆ ಯಾರೂ ದೂರಿಕೊಳ್ಳಲಿಲ್ಲ ಎಂದೂ ಹೇಳಿದ್ದಾರೆ.

ಪೂರ್ವಪಂಜಾಬವನ್ನು ಬಿಟ್ಟು ಬೇರೆ ಯಾವದೇ ಕಡೆಯಿಂದ ಬಂದ ಮುಸ್ಲಿಂ ನಿರಾಶ್ರಿತರಿಗೆ ಪಾಕಿಸ್ತಾನವು ಆಶ್ರಯ ಕೊಡುವದಿಲ್ಲೆಂದು ಪಾಕಿಸ್ತಾನ ಮುಖ್ಯ ಮಂತ್ರಿ ಲಿಯಾಕತ ಅಲ್ಲಿಖಾನರು ಹೇಳಿದರು.

ಸಿಂಧಕ್ಕೆ ಒಂದು ಲಕ್ಷ ಮುಸ್ಲಿಂ ನಿರಾಶ್ರಿತರು ನಿರ್ಗತಿಕರಾಗಿ ಬಂದಿದ್ದು ಅವರಿಗೆ ಎಲ್ಲ ತರಹದ ಸಹಾಯ ಮಾಡಬೇಕಾಗಿದೆಯೆಂದು ಸಿಂಧದ ಮುಖ್ಯಮಂತ್ರಿ ಖುರ್ರೋರು ಹೇಳಿದರು.

ಸಂಸ್ಥಾನಗಳು

ಜವಾಹರ ಸಂಸ್ಥಾನದ ಜಿಲ್ಹೆಗಳಲ್ಲಿಯ ಹಿಂದು-ಮುಸಲ್ಮಾನರು ಮಹಾರಾಜರ ನೇತೃತ್ವದಲ್ಲಿ ಸದಾನಂದ ಸಮಾಧಿಗೆ ವಾರ್ಷಿಕ ಉರುಸಿನ ಸಮಯದಲ್ಲಿ ಹೋಗಿ ಪ್ರಾರ್ಥನೆ ಸಲ್ಲಿಸಿದರು.

ಹಲವಾಡ, ಧ್ರಾಗಂಧ್ರಾ ಸಂಸ್ಥಾನದಲ್ಲಿ ಹೊಸ ಸುಧಾರಣೆಗಳನ್ನು ಜಾರಿಯಲ್ಲಿ ತರಲಿದ್ದುದರಿಂದ ಮಧ್ಯಂತರ ಅವಧಿಯಲ್ಲಿ ಪಂಚಾಯತಿಯವರು ಆರಿಸುವ ೯ ಸದಸ್ಯರ ಸಲಹೆ ಸಮಿತಿಯನ್ನು ನೇಮಿಸಲಾಗಿದೆ. ಇದು ನಡುಗಾಲ ಸರಕಾರದ ವ್ಯವಸ್ಥೆ.

ನೇಪಾಳದಲ್ಲಿ ಪ್ರಜಾರಾಜ್ಯ ಸ್ಥಾಪನೆಗಾಗಿ ಎಲ್ಲ ವಿಧದ ಪ್ರಚಾರ ನಡೆಸಿದ್ದು ಈ ಸಂಬಂಧದಲ್ಲಿ ಅಲ್ಲಿ ಬಿಕ್ಕಟ್ಟು ಉಂಟಾಗುವ ಸಂಭವವಿದೆಯೆಂದು ತಿಳಿಯುತ್ತದೆ.

ಮುಂಬಯಿ ಶಾಸನಸಭೆಯ ಅಧಿವೇಶನದ ಕಾರ್ಯಕಲಾಪಗಳು

(ಸೆಪ್ಟಂಬರ ೧೧ ನೇ ತಾರೀಕಿಗೆ ಪ್ರಾರಂಭವಾದ ಅಧಿವೇಶನದ ಮೊದಲ ೧೫ ದಿನಗಳ ಸಿಂಹಾವಲೋಕನವನ್ನು ೨೯ ನೇ ತಾರೀಕಿನ ಸಂಚಿಕೆಯಲ್ಲಿ ಕೊಡಲಾಗಿದ್ದು ಅದರ ಮುಂದಿನ ೧೫ ದಿನಗಳ ವರದಿಯನ್ನು ಇದರಲ್ಲಿ ಕೊಡಲಾಗಿದೆ.)

೧೯೩೩ ರ ಗ್ರಾಮ ಪಂಚಾಯತಿ ತಿದ್ದುಪಡಿ ಮಸೂದೆಯನ್ನೊಳಗೊಂಡು ಈ ೧೫ ದಿನಗಳಲ್ಲಿ ಆರು ಮಸೂದೆಗಳು ಪಾಸಾಗಿರುತ್ತವೆ.

ಉಗ್ರಾಣಗಳ ನಿಯಂತ್ರಣ ಮಸೂದೆ

ಆರ್ಥಿಕ ಸಚಿವರಾದ ಶ್ರೀ ವ್ಹಿ. ಎಲ್. ಮೆಹತಾರವರು ೩ನೇ ತಾರೀಖಿನಲ್ಲಿ ಈ ಮಸೂದೆಯನ್ನು ಮಂಡಿಸಿದರು. ಅಮೇರಿಕೆಯಲ್ಲಿಯ ಒಕ್ಕಲತನ ಹುಟ್ಟುವಳಿ ಉಗ್ರಾಣ ಪದ್ಧತಿಯ ಮಾದರಿಯ ಮೇಲೆ ಈ ಮಸೂದೆ ರಚಿತವಾಗಿದ್ದು ಇದರಿಂದ ಒಕ್ಕಲಿಗರಿಗೆ ತಮ್ಮ ಕಾಳುಕಡಿಗಳನ್ನು ಉಗ್ರಾಣದಲ್ಲಿಟ್ಟು ಸುಲಭಬಡ್ಡಿ ದರದಂತೆ ಅಲ್ಪಾವಧಿ ಸಾಲ ಪಡೆದು, ಪೇಟೆಯಲ್ಲಿ ತಮ್ಮ ಸರಕಿಗೆ ಯೋಗ್ಯ ಬೆಲೆ ಬರುವ ವರೆಗೆ ದಾರಿ ಕಾಯಲು ಅನುಕೂಲವಾಗುವದು. ಇದರ ಬಗ್ಗೆ ಮಾತನಾಡುವಾಗ ಅರ್ಥಿಕ ಮಂತ್ರಿಗಳು, "ಈ ಪದ್ಧತಿಯನ್ನು ಜಾರಿಯಲ್ಲಿ ತರಲು ಮುಂಬಯಿ ಪ್ರಾಂತವೇ ಮೊದಲು ಮುಂದೆ ಬಂದಿದೆ" ಎಂದು ಹೇಳಿದರು. ೪ ನೇ ತಾರೀಖಿನ ದಿವಸ ಈ ಮಸೂದೆ ಪಾಸಾಯಿತು.

ಕಂದಾಯ ಕಾಯದೆ ತಿದ್ದುಪಡಿ ಮಸೂದೆ

ಮುಂಬಯಿ ಸರಕಾರವು ಈಗ ಪಾಸು ಮಾಡಿರುವ ಹೊಲ ಸಾಗುವಳಿ ಕಾಯದೆಯನ್ನು ಜಾರಿಯಲ್ಲಿ ತರಲು ಅನುಕೂಲವಾಗುವಂತೆ ೧೮೭೯ ರ ಕಂದಾಯ ಕಾಯದೆಯಲ್ಲಿ ತಿದ್ದುಪಡಿಗಳನ್ನು ಮಾಡಬೇಕೆಂಬ ಉದ್ದೇಶದಿಂದ ಈ ಮಸೂದೆಯನ್ನು ತರಲಾಗಿದೆ. ಸರಕಾರವು ರೈತರ ಹಿತದೃಷ್ಟಿಯಿಂದ ಯಾವದೇ ಕಾರ್ಯಕ್ರಮಗಳನ್ನು ಕೈಕೊಂಡರೂ ಅದರಲ್ಲಿ ಇನಾಮದಾರರು ನಿರೀಕ್ಷಿಸಿದಷ್ಟು ಸಹಾಯವನ್ನು ನೀಡುತ್ತಿರಲಿಲ್ಲ. ಆದರೆ ತಿದ್ದುಪಡಿಯಾದ ಈ ಮಸೂದೆಯಿಂದಾಗಿ ರೈತ ಇನಾಮದಾರರಲ್ಲಿ ಸೌಹಾರ್ದ ಹೆಚ್ಚಾಗಿ ರೈತರ ಹಿತಸಾಧನೆಯು ಸುಗಮವಾಗುವದೆಂದು ನಿರೀಕ್ಷಿಸಲಾಗಿದೆ.

ವಾಯದೆ ವ್ಯವಹಾರ ನಿಯಂತ್ರಣ ಮತ್ತು ಸಟ್ಟಾ ಪ್ರತಿಬಂಧಕ ಮಸೂದೆ

೨೫ ನೇ ತಾರೀಖಿನ ದಿವಸ ಅರ್ಥಿಕ ಸಚಿವರು ಈ ಮಸೂದೆಯನ್ನು ಮಂಡಿಸಿದರು. ಎಲ್ಲ ವಾಯದೆ ಪೇಟೆಗಳಲ್ಲಿ ಸಟ್ಟಾ ಪ್ರಚಾರದಲ್ಲಿದ್ದು ಅದನ್ನು ಸಂಪೂರ್ಣ ರದ್ದುಗೊಳಿಸುವ ಉದ್ದೇಶದಿಂದ ಈ ಮಸೂದೆ ಮಂಡಿಸಲ್ಪಟ್ಟಿದ್ದು ಸದ್ಯಕ್ಕೆ ಎಲ್ಲ ತರದ ವಾಯದೆ ನಿಯಂತ್ರಣವನ್ನು ಈ ಮಸೂದೆ ಹೇಳುತ್ತದೆ. ಅಲ್ಲದೆ ಅಧಿಕೃತ ಸಂಘಗಳ ಮುಖಾಂತರ ನಡೆಯುವ ಗುತ್ತಿಗೆಗಳನ್ನು ಅಕ್ರಮ ಮಾಡಲಾಗಿದೆ. ಈ ಮಸೂದೆಯು ಎರಡು ದಿನಗಳ ವರೆಗೆ ಚರ್ಚಿತವಾಗಿ ಸರ್ವಾನುಮತದಿಂದ ಪರಿಶೀಲಕ ಸಮಿತಿಗೆ ಒಪ್ಪಿಸಲಾಯಿತು. ಅದು ೧೪ ನೇ ತಾರೀಖಿಗೆ ವರದಿ ಒಪ್ಪಿಸಬೇಕೆಂದು ಗೊತ್ತುಪಡಿಸಲಾಗಿದೆ.

ಪ್ರಾಥಮಿಕ ಶಿಕ್ಷಣ ಮಸೂದೆ

೨೯ ನೇ ತಾರೀಖಿನ ದಿವಸ ಈ ಮಸೂದೆಯನ್ನು ಮಂಡಿಸುತ್ತ ಮುಖ್ಯ ಮಂತ್ರಿ ಖೇರರು "ಈಗ ಹತ್ತು ವರ್ಷಗಳಲ್ಲಿ ಇಡೀ ಪ್ರಾಂತದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡಿ ಉಚಿತವಾಗಿ ಒದಗಿಸಬೇಕೆಂದಿದೆ." ಎಂದು ಘೋಷಿಸಿದರು. ಈ ಯೋಜನೆಯು ಯಶಸ್ವಿಯಾಗಬೇಕಾದರೆ ಜನ ಸಹಕಾರವು ಅವಶ್ಯವಾದ್ದರಿಂದ ಸ್ಕೂಲಬೋರ್ಡ ಆಡಳಿತೆಯ ಅಕ್ರಮಗಳು ಅಳಿದು ಹೋಗಿ ಜನರ ಸಹಕಾರ ದೊರೆಯುವಂತೆ ಕೆಲವು ಸುಧಾರಣೆಗಳನ್ನು ಪ್ರಾಥಮಿಕ ಶಿಕ್ಷಣ ಕಾಯದೆಯಲ್ಲಿ ಮಾಡಲು ನಿರ್ಣಯಿಸಲಾಗಿದೆ. ಈ ಮಸೂದೆಯ ಮೇರೆಗೆ ಪ್ರಾಥಮಿಕ ಶಿಕ್ಷಣದ ೧೦೦ ಕ್ಕೆ ೯೬ ರಷ್ಟು ವೆಚ್ಚದ ಭಾರವನ್ನು ಸರಕಾರವೇ ಹೊರುತ್ತದೆ. ಶಿಕ್ಷಕರನ್ನು ನೇಮಿಸುವದಕ್ಕಾಗಿ ಒಂದು ಪ್ರತ್ಯೇಕವಾದ ಸ್ಟಾಫ್ ಸಿಲೆಕ್ಶನ್ ಬೋರ್ಡ್ ಅಂದರೆ ನೌಕರರನ್ನು ಆರಿಸುವ ಮಂಡಲವನ್ನು ಏರ್ಪಡಿಸಲಾಗುವದು. ಸ್ಕೂಲಬೋರ್ಡುಗಳ ಸಾಮಾನ್ಯ ಸದಸ್ಯರ ಕನಿಷ್ಠ ಅರ್ಹತೆ ಮುಲ್ಕೀಪರೀಕ್ಷೆಯೆಂದು ಇಡಲಾಗಿದೆ. ಈ ಮಸೂದೆಯು ಮೂರು ದಿನಗಳ ವರೆಗೆ ಚರ್ಚಿತವಾಗಿ ೧ ನೇ ತಾರೀಖಿನ ದಿವಸ ವಿಶೇಷ ಸಮಿತಿಗೆ ಒಪ್ಪಿಸಲಾಯಿತು. ಅದು ೧೦ ದಿನಗಳಲ್ಲಿ ವರದಿ ಮಾಡಬೇಕೆಂದು ನಿರ್ಣಯಿಸಲಾಗಿದೆ.

ಭಿಕ್ಷಾಟನಾ ನಿವಾರಣ ಕಾಯದೆ

೧೯೪೫ರ ಭಿಕ್ಷಾಟನಾ ನಿವಾರಣ ಕಾಯದೆಯನ್ನು ರದ್ದುಗೊಳಿಸಿ ಬೇರೊಂದು ಕಾಯದೆಯನ್ನು ಮಾಡುವ ಉದ್ದೇಶದಿಂದ ಈ ಮಸೂದೆಯನ್ನು ಶ್ರೀ ಮುರಾರಜಿಯವರು ೪ನೇ ತಾರೀಕಿನ ದಿವಸ ಮಂಡಿಸಿದರು. ಬಡತನದ ಮೂಲಕ ಉದರ ನಿರ್ವಾಹಕ್ಕಾಗಿ ಯಾವ ಬಗೆಯ ಶಿಕ್ಷಣವನ್ನೂ ಪಡೆಯಲು ಸಾಧ್ಯವಾಗದೆ ತಿರುಪೆಯನ್ನವಲಂಬಿಸಿದವರಿಗೆ ಸಹಾಯವಿತ್ತು ಉದರ ನಿರ್ವಾಹಕ್ಕೆ ಹಾದಿಯನ್ನು ತೋರಿಸುವದು, ಸೋಮಾರಿಗಳಾಗಿ ಮೈಗಳ್ಳತನದಿಂದ ತಿರುಪೆಗೆ ಪ್ರಾರಂಭಿಸಿದ ಸಮಾಜ ಘಾತುಕರನ್ನು ಕಾಯದೆಯಿಂದ ದಂಡಿಸಿ ಸನ್ಮಾರ್ಗಕ್ಕೆ ತರುವದು ಈ ಮಸೂದೆಯ ಉದ್ದೇಶವಿದೆ. ಭಿಕ್ಷೆಎತ್ತಲು ಪಶುಗಳನ್ನು ಉಪಯೋಗಿಸುತ್ತಿದ್ದರೆ ಅವುಗಳನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ತಿದ್ದುಪಡಿಯೊಂದಿಗೆ ಈ ಮಸೂದೆಯ ಪ್ರಥಮ ವಾಚನವು ಸ್ವೀಕೃತವಾಯಿತು.

ಅಪರಾಧ ವ್ಯಸನಿಗಳ ನಿಯಂತ್ರಣ ಮಸೂದೆ

೧೯೨೪ನೇ ಇಸ್ವಿಯ ಕ್ರಿಮಿನಲ್ ಟ್ರಾಯಿಬ್ಸ ಕಾಯದೆಯನ್ನು ರದ್ದುಗೊಳಿಸಿ ಪಂಜಾಬ ಮಾದರಿಯ ಅಪರಾಧ ವ್ಯಸನಿಗಳ ನಿಯಂತ್ರಣ ಕಾಯದೆಯನ್ನು ಮಾಡುವ ಮಸೂದೆಯನ್ನು ೬ನೇ ತಾರೀಕಿನ ದಿನ ಶ್ರೀ ಮುರಾರಜಿಯವರು ಮಂಡಿಸಿದರು. ಅಪರಾಧಮಾಡುವ ಜಾತಿಯವರೆಂದು ಯಾರನ್ನೂ ದಂಡಿಸದೆ ಪ್ರತ್ಯಕ್ಷವಾಗಿ ಅಪರಾಧಮಾಡುವ ಹಾಗೂ ಅಪರಾಧ ಮಾಡುವದೇ ಒಂದು ಚಟವಾಗಿರುವ ಮನೋವೃತ್ತಿಯವರನ್ನು ದಂಡಿಸಲು ಈ ಕಾಯದೆಯು ಅವಕಾಶ ಮಾಡಿಕೊಡುತ್ತದೆ.

ಮೋಟಾರ ಸಾರಿಗೆ ರಾಷ್ಟ್ರೀಕರಣ ಮಸೂದೆ

೭ ನೇ ತಾರೀಖಿನ ದಿವಸ ಗೃಹಮಂತ್ರಿಗಳು ಈ ಮಸೂದೆಯನ್ನು ಮಂಡಿಸಿದರು. ಪ್ರಾಂತಿಕ ಸರಕಾರವು ಎಲ್ಲ ಮೋಟಾರ ಸಾರಿಗೆಯನ್ನು ೧೯೫೧ ರೊಳಗಾಗಿ ರಾಷ್ಟ್ರೀಕರಣ ಮಾಡಬಾರದೆಂದು ಈ ಗೊತ್ತುವಳಿಯಲ್ಲಿ ಹೇಳಲಾಗಿದೆ. ಈ ಕಾರ್ಯವು ಸಾಂಗವಾಗಿ ಸಾಗಲು ಅಲ್ಲಲ್ಲಿ ಸಲಹೆ ಸಮಿತಿಗಳನ್ನು ನೇಮಿಸುವದು, ಈಗಿನ ಮೋಟಾರ ಸಾರಿಗೆಯ ಒಡೆಯರ ಅಸ್ತಿಯನ್ನು ಸರಕಾರವು ಕೊಂಡುಕೊಳ್ಳುವದು. ಲಾಯಸೆನ್ಸ ಮುಗಿಯುವ ಮುನ್ನ ರಾಷ್ಟ್ರೀಕರಣದಿಂದ ನಿಲ್ಲಿಸಲ್ಪಡುವ ಸಾರಿಗೆ ಮೋಟಾರ ಒಡೆಯರಿಗೆ ತಕ್ಕ ಪರಿಹಾರ ಕೊಡುವದು ಮುಂತಾದ ತತ್ವಗಳನ್ನು ಸೇರಿಸಲಾಗಿದೆ. "ಪ್ರಾಂತದ ಸಾರಿಗೆ ವ್ಯವಸ್ಥೆಯಲ್ಲಿ ಸರಕಾರದ ಈ ನಿರ್ಣಯದಿಂದ ದೊಡ್ಡ ಕ್ರಾಂತಿಯೇ ಆಗುವದು." ಎಂದು ಈ ಗೊತ್ತುವಳಿಯ ಬಗ್ಗೆ ಮಾತಾಡುತ್ತ ಶ್ರೀ ಮುರಾರಜಿಯವರು ಹೇಳಿದರು. ಸದ್ಯಕ್ಕೆ ಮೋಟಾರ ಸರ್ವೀಸಿನವರು ಜಲ್ದಿಯಲ್ಲಿ ಮೈಲಿಗೆ ೦-೦-೯ ಯಂತೆ ಮತ್ತೆ ೦-೦-೬ ಯಂತೆ ದರವನ್ನಿಟ್ಟಿದ್ದು ಇವೇ ಸರಕಾರದ ಪರಮಾವಧಿ ದರಗಳಾಗುವವೆಂದೂ ಸಾರಿದ್ದಾರೆ. ಈ ಮಸೂದೆಯೂ ೮ ನೇ ತಾರೀಖಿನ ದಿವಸ ಸ್ವೀಕೃತವಾಯಿತು.

ಇವಲ್ಲದೆ ಬೃಹತ್ ಮುಂಬಯಿ ಕಾಯದೆಗಳನ್ನು ರದ್ದುಗೊಳಿಸುವ ಮಸೂದೆ, ಮುಂಬೈ ಹ್ಯಾಕೋರ್ಟ (ಕಾರ್ಯಕ್ಷೇತ್ರ) ಮಸೂದೆ, ಮುಂಬಯಿ ಮೋಟಾರ ವಾಹನ ಕಾಯದೆ (೧೯೩೫) ಮತ್ತು ಮುಂಬಯಿ ಮ್ಯುನಿಸಿಪಲ್ ಕಾನೂನು (ಯುದ್ಧೋತ್ತರ ಪುನರ್ರಚನಾನಿಧಿ) ೧೯೪೪ ರ ತಿದ್ದುಪಡೆ ಈ ಮಸೂದೆಗಳು ಪಾಸಾದವು.

ಬರಲಿರುವ ಗೊತ್ತುವಳಿಗಳಲ್ಲಿ, ಅವಶ್ಯವೆನಿಸಿದಲ್ಲಿ ರಸ್ತೆಗುಂಟ, ಇಲ್ಲವೆ ರಸ್ತೆ ಮೇಲೆ ಹಾಯ್ದು ರೇಲ ಅಥವಾ ಟ್ರಾಂ ಹಾಕಲು ಅಪ್ಪಣೆ ಕೊಡುವ ಅಧಿಕಾರ ತೆಗೆದು ಕೊಳ್ಳುವ ಮಸೂದೆಯು ಮುಖ್ಯವಾಗಿದೆ.

ಮಂಗಳೂರು ಜಿಲ್ಲೆಯ ಎಂ. ಎಲ್. ಏ. ಗಳಾದ ಶ್ರೀ ಕೆ. ಅರ್. ಕಾರಂತ, ಯು. ಪಿ. ಮಲ್ಯ, ಶಮ್ನಾಡಸಾಹೇಬ್, ಹುಸೇನಸಾಹೇಬ್ ಮತ್ತು ಎಲ್. ಸಿ. ಪಾಯಸರು ಅಹಾರ ಮಂತ್ರಿಗಳಾದ ಟಿ. ಎಸ್. ಎಸ್. ರಾಜನ್ನರನ್ನು ಕಂಡು ಜಿಲ್ಲೆಯ ಆಹಾರ ಪರಿಸ್ಥಿತಿಯನ್ನೂ ಅಧಿಕ ಕೋಟಿಗರು ಅಕ್ಕಿ ಇಟ್ಟುಕೊಳ್ಳುವ ಸಂಗತಿಯನ್ನೂ ವಿವರಿಸಿ ಹೇಳಿದರು. ಈ ಸಂದರ್ಭದಲ್ಲಿ ಮದ್ರಾಸು ಸರಕಾರದ ಆಹಾರ ಶಾಖೆಯ ಕಾರ್ಯದರ್ಶಿಗಳೂ ಹಾಜರಿದ್ದರು.

ಹೈದರಾಬಾದಿನ ಹುಚ್ಚುತನ

ಹೈದರಾಬಾದಿನ ಶಾಸನ ಸಭೆಯ ಆಯವ್ಯಯ ಅಧಿವೇಶನದ ಅಂತ್ಯದಲ್ಲಿ ನವಾಬ ಜಂಗ್‌ಯಾರ ಜಂಗರು ಹೊಸ ಸುಧಾರಣೆಗಳನ್ನು ಬೇಗನೆ ಜಾರಿಯಲ್ಲಿ ತರಲು ದಿ. ಬ. ಅರವಮುದು ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯೊಂದನ್ನು ನೇಮಿಸಲಾಗಿದೆಯೆಂದೂ ಅದು ಎಲ್ಲರನ್ನು ಸಮಾಧಾನಪಡಿಸುವಂತೆ ನೋಡಿಕೊಳ್ಳುವುದೆಂದೂ ಹೇಳಿದರು. ಇದು ಮೈಸೂರಿನಲ್ಲಿ ಕಾಟ ತೀರಿಸುವುದಕ್ಕಾಗಿ ಅರ್ಕಾಟರು ಮಹಾರಾಜರ ಮೂಲಕ ಸಾರಿದ ಯೋಜನೆಗಿಂತ ಭಿನ್ನವಾಗಿರಲಾರದೆಂಬುದು ಹೈದರಾಬಾದಿನ ಸತ್ಯಾಗ್ರಹಿಗಳಿಗೆ ದುರೂಹ್ಯವಲ್ಲ.

ಹೈದರಾಬಾದು ಸಂಸ್ಥಾನದ ಮುಖ್ಯ ಮಂತ್ರಿಗಳಾದ ಛತ್ತಾರಿ ನವಾಬರು ತಾ. ೧ ರಲ್ಲಿ ಆಕಾಶವಾಣಿಯಲ್ಲಿ ಮಾತಾಡುತ್ತ, ಹೈದರಾಬಾದು ಹಿಂದುಸ್ತಾನವನ್ನಾಗಲಿ, ಪಾಕಿಸ್ತಾನವನ್ನಾಗಲಿ ಸೇರುವದಿಲ್ಲೆಂದು ಹೇಳಿದರು. ಇದರಿಂದ ಹೈದರಾಬಾದಿಗೆ ಇನ್ನೂ ಬುದ್ಧಿಮಂಕಾಗಿಯೇ ಇದೆಯೆಂಬುದು ಸ್ಪಷ್ಟವಾಗುತ್ತದೆ. ಸಂಸ್ಥಾನ ಕಾಂಗ್ರೆಸ್ಸಿನ ಹೋರಾಟ ಕುಗ್ಗದೆ, ಕೊರದೆ, ಅವಿಶ್ರಾಂತವಾಗಿ ಸಾಗಿದೆ. ಅದರ ಯಶಸ್ವಿ ಕಾರ್ಯವೇ ಹೈದರಾಬಾದಿನ ಭವಿತವ್ಯವನ್ನು ನಿರ್ಣಯಿಸಬಲ್ಲುದಾಗಿದೆ.

ಕಾಂಗ್ರೆಸ ಆದೇಶದ ಮೇರೆಗೆ ಹೈದರಾಬಾದು ನಗರದಲ್ಲಿ ದಬ್ಬಾಳಿಕೆಯ ನಿಷೇಧ ದಿನವನ್ನಾಚರಿಸಲು ಜನರು ಸೇರಿದ್ದಾಗ ೨೫ ಜನರು ಬಂಧಿಸಲ್ಪಟ್ಟರು. ಆ ದಿನ ಔರಂಗಾಬಾದಿನಲ್ಲಿ ಅಂಗಡಿಗಳೆಲ್ಲ ಮುಚ್ಚಿದ್ದವು. ಮತ್ತು ಮಧ್ಯಾಹ್ನ ಪ್ರತಿಬಂಧಕಾಜ್ಞೆಯನ್ನು ಮೀರಿ ಮೆರವಣಿಗೆ ಹೊರಟಿತ್ತು.

ಕುಷ್ಟಗಿಯಲ್ಲಿ ಕಾಯದೆಭಂಗ ಮಾಡಿ ಬಂಧಿತರಾದ ಶ್ರೀ ಫೂಲಚಂದ ಸೇಠರಿಗೆ ೨ ವರ್ಷ ಕಠಿನ ಶಿಕ್ಷೆ ಮತ್ತು ೧ ತಿಂಗಳ ಸಾದಾ ಶಿಕ್ಷೆ ಹಾಗೂ ಶ್ರೀ ಜಗನ್ನಾಥ ಎಂಬವರಿಗೆ ೨ ವರ್ಷ ಕಠಿನ ಶಿಕ್ಷೆ ವಿಧಿಸಲಾಯಿತು.

ಅ. ಭಾ. ಸಂಸ್ಥಾನ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಶೇಖ ಅಬ್ದುಲ್ಲಾರವರು ಹೈದರಾಬಾದಿನ ರಾಜಕೀಯ ಪರಿಸ್ಥಿತಿಯನ್ನರಿತುಕೊಳ್ಳಲು ಅಲ್ಲಿಗೆ ಹೋಗಲಿದ್ದಾರೆಂದು ಸುದ್ದಿ.

ಹೈದರಾಬಾದು ಸಂಧಾನ ಸಮಿತಿಯ ಛತ್ತಾರಿ ನವಾಬರು ನಿಜಾಮರ ಘಟನಾತ್ಮಕ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್ಟನ್ ಮತ್ತು ಕನ್ಸಲ್ಟಿಂಗ್ ಎಂಜಿನಿಯರರಾದ ನವಾಬ ಅಲಿ ನವಾಜ ಜಂಗರೊಡನೆ ದಿಲ್ಲಿಗೆ ಹೋಗಿ ಹಿಂದುಸ್ತಾನ ಸರಕಾರದೊಡನೆ ಕೊನೆಯದಾಗಿ ಮಾತುಕತೆ ಮುಗಿಸುವರೆಂದು ತಿಳಿಯುತ್ತದೆ.

ಸ್ವತಂತ್ರನಿರುತ್ತೇವೆಂಬ ನವಾಬ ಸಾಹೇಬರ ಡಂಗುರ ನಿಜವಾದರೆ ಹಿಂದುಸ್ತಾನ ಸರಕಾರದೊಡನೆ ಮಾತುಕತೆ ನಡೆಸುವವ ಆಗತ್ಯವೆಲ್ಲುಳಿಯಿತು? "ಗಾಳಿ ಬಂದಾಗ ತೂರಿಕೊ' ಎಂಬ ಸೂತ್ರ ಹಿಡಿಯಹೋದ ನಿಜಾಮರಂತಹ ಸಂಸ್ಥಾನಿಕರು ಗಾಳಿ ಇವರಿಗೆ ಮಾತ್ರ ಅನುಕೂಲವೆನಿಸದೆ ಸಂಸ್ಥಾನ ಪ್ರಜೆಗಳಿಗೂ ಅನುಕೂಲವಾಗಿ ಬೀಸುತ್ತಿದೆಯೆಂಬುದನ್ನು ಅರಿಯದೆ ದುಡುಕಿ ದಬ್ಬಾಳಿಕೆ ನಡೆಸುತ್ತ ಹೋದರೆ ಅವರ ಗೋರಿಯನ್ನವರೇ ಕಟ್ಟಿಕೊಂಡಂತಾಗದಿರದು. ಯಥಾಪ್ರಕಾರ ಸತ್ಯಾಗ್ರಹ ನಡೆಸುತ್ತಿರುವ ಕಾಂಗ್ರೆಸ್ಸು ಯಾವ ಮೋಸಕ್ಕೂ ಬಲಿಬೀಳದೆಂಬುದು ನಿಶ್ಚಯ.

ಮಾಸ್ಟರ ತಾರಾಸಿಂಗರ ಹೇಳಿಕೆ

ಮಾಸ್ಟರ ತಾರಾಸಿಂಗರು ದಿಲ್ಲಿಯ ಸುದ್ದಿಗಾರರ ಸಭೆಯಲ್ಲಿ ಈ ರೀತಿ ಹೇಳಿದರು:—

ಮಹಾತ್ಮಾ ಗಾಂಧೀಯವರೂ ಪಂ. ನೆಹರೂರೂ ಸದ್ಯದ ಪರಿಸ್ಥಿತಿಯನ್ನು ಅರಿತುಕೊಳ್ಳದೆ ದಿಲ್ಲಿ, ಯುಕ್ತಪ್ರಾಂತಗಳಲ್ಲಿಯ ಮುಸ್ಲಿಮರನ್ನು ಇಲ್ಲಿಯೇ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಪಂಜಾಬಕ್ಕೆ ಹೊಂದಿದ ದಿಲ್ಲಿ, ಯುಕ್ತಪ್ರಾಂತಗಳಲ್ಲಿ ಈ ಮುಸ್ಲಿಮರು ಉಳಿದುಕೊಂಡರೆ ಇಲ್ಲಿ ಅವರ ವಶದಲ್ಲಿ ಪಂಜಾಬಕ್ಕೆ ಹೊಂದಿದ ಭೂಮಿಯು ಉಳಿದುಕೊಂಡು ಈಗ ಸಿಂಧ ಬಲುಚಿಸ್ತಾನ ಗಡಿನಾಡು ಪಂಜಾಬದಿಂದ ಹೊರದೂಡಲ್ಪಟ್ಟ ಹಿಂದು ಶೀಖರಲ್ಲಿ ಅರ್ಧದಷ್ಟು ಜನರು ಹೊಟ್ಟೆಗಿಲ್ಲದೆ ಉಪವಾಸ ಸತ್ತುಹೋಗುವರು.

ಪಶ್ಚಿಮ ಪಂಜಾಬದಿಂದ ಹೊರಬಿದ್ದು ಬಂದ ಹಿಂದೂ ಶೀಖರು ತಮ್ಮ ಒಡೆತನದ ೨೫ ಲಕ್ಷ ಎಕರೆ ಭೂಮಿಯನ್ನು ಬಿಟ್ಟು ಬಂದಿದ್ದಾರೆ. ಪೂರ್ವ ಪಂಜಾಬದಿಂದ ಹೊರಟು ಹೋದ ಮುಸ್ಲಿಮರು ಬಹಳ ಕಡಿಮೆ ಎಕರೆ ಭೂಮಿಯನ್ನು ಬಿಟ್ಟು ಹೋಗಿದ್ದಾರೆ. ಅದ್ದರಿಂದ ಈಗ ತಮ್ಮ ಸ್ಥಾವರ ಅಸ್ತಿಯನ್ನು ಕಳೆದುಕೊಂಡು ಹಿಂದು ಶೀಖರಿಗೆ ದಿಲ್ಲಿ, ಯುಕ್ತಪ್ರಾಂತಗಳಲ್ಲಿಯ ಮುಸ್ಲಿಮರನ್ನು ಹೊರಗೆ ಹಾಕಿ ಅಸ್ತಿಯನ್ನು ಕೊಡಬೇಕು.

ಈ ಮೇಲೆ ಸೂಚಿಸಿದ ಪ್ರದೇಶಗಳಲ್ಲಿಂದ ಎಷ್ಟು ಮುಸ್ಲಿಮರನ್ನು ಹೊರಗೆ ಹಾಕಬೇಕು? ಅದರಿಂದ ಎಷ್ಟು ಮುಸ್ಲಿಮೇತರರಿಗೆ ಅನುಕೂಲವಾಗುವದು? ಎಂಬ ಲೆಕ್ಕವನ್ನು ಸರಕಾರವು ಸಿದ್ಧಪಡಿಸಬೇಕು. ಈ ಸ್ಥಾನಾಂತರವು ಶಾಂತರೀತಿಯಿಂದ ನಡೆಯುವಂತೆ ಮುಖಂಡರು ಪ್ರಯತ್ನಿಸಕಕ್ಕದ್ದು."

ಮೇಲಿನ ಸಲಹೆಯನ್ನು ಹಿಂದು[illegible] ಕಾರಣೆನ್ನಾಗಿ ಪರಿಶೀಲಿಸಿ ಕಾರ್ಯರೂ[illegible] ವುದೆಂದು ಅರಿಸಲಾಗಿದೆ.

ದಕ್ಷಿಣ ಕನ್ನಡ

ಮಂಗಳೂರಲ್ಲಿ ಜಿಲ್ಲಾ ಭಿವೃದ್ಧಿ ಸಂಘದ ಸಭೆ ತಾ ೧ ರಲ್ಲಿ ಕೂಡಿ ಜಿಲ್ಲೆಯ ನಾನಾಮುಖವಾದ ಸುಧಾರಣೆಗಳ ಬಗ್ಗೆ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಜಿಲ್ಲೆಯವರು ಮುಖ್ಯವಾಗಿ ತಮ್ಮ ಪ್ರಯತ್ನಗಳ ಮೇಲೆ ಹೊಂದಿಕೊಂಡಿರಬೇಕಲ್ಲದೆ ಸರಕಾರದಿಂದ ಹೆಚ್ಚಿನ ಸಹಾಯವನ್ನು ನಿರೀಕ್ಷಿಸಲಾಗದೆಂಬ ಅಂಶವು ಈ ಸಭೆಯಲ್ಲಿ ವ್ಯಕ್ತಮಾಡಲ್ಪಟ್ಟಿತು.

ಕಳೆದ ತಿಂಗಳ ತಾ ೨೦ ರ ವರೆಗೆ ವಿಶಾಖಪಟ್ಟಣ ಜಿಲ್ಲೆಗೆ ಬರಬೇಕಾಗಿರುವ ಅಕ್ಕಿ ಸುಮಾರು ೧೦೦೦ ಟನ್; ಕಳೆದ ತಾ೧ ರಲ್ಲಿದ್ದ ಅಕ್ಕಿ ಸಂಗ್ರಹ ಇನ್ನು ಕೆಲವೇ ದಿನಗಳವರೆಗೆ ಸಾಕು. ಹೊಸ ಅಕ್ಕಿಯಾಗುವ ವರೆಗೆ ಹೊರಗಿನಿಂದ ಸ್ವಲ್ಪ ಅಕ್ಕಿ ಬಾರದೆ ನಿರ್ವಾಹವಿಲ್ಲವೆಂದು ತಿಳಿದುಬರುತ್ತದೆ.

ಕಳೆದ ೨೯ ರಲ್ಲಿ ಮಂಗಳೂರಲ್ಲಿ ಮ್ಯುನಿಸಿಪಲ್ ಚುನಾವಣೆ ನಡೆಯಿತು. ಈ ವಿಷಯದಲ್ಲಿ ಮ್ಯುನಿಸಿಪಲ್ ಕಮಿಶನರು ಚೆನ್ನಾಗಿ ವ್ಯವಸ್ಥೆ ಮಾಡಿದ್ದಾರೆಂದೂ ಹೇಳಲಾಗಿದೆ.

ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ವತಿಯಿಂದ ಪಡುಬಿದರೆಯ ಶ್ರೀ ಶ್ರೀನಿವಾಸ ಶೆಟ್ಟಿಯವರ ನೇತೃತ್ವದಲ್ಲಿ ೫ ಮಂದಿಯ ತಂಡವೊಂದು ಮೈಸೂರು ಸತ್ಯಾಗ್ರಹದಲ್ಲಿ ಭಾಗವಹಿಸಲು ಹಾಸನಕ್ಕೆ ಹೊರಟ್ಟಿತು.

ಮುಳಿಯರುಗ್ರಾಮದ ಬಾಯಿಕೋಟು ಕುಯ್ಯಂಬುನಾಯರನು ಆತನ ಮನೆಯ ಜಗಲಿಯಲ್ಲಿ ನಿದ್ರಿಸುತ್ತಿದ್ದಾಗ ಯಾರೋ ಅವನಿಗೆ ಗುಂಡು ಹಾಕಿದರು. ಅದರಿಂದ ಅವನು ಮೃತಪಟ್ಟನು. ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಕುಂಬಳೆಯಿಂದ ಪುತ್ತೂರಿಗೆ ಹೋಗಿಬರುವ ಬಸ್ಸು ಈಗ ಕೆಲದಿನಗಳಿಂದ ಇದ್ದಲಿಯದಾದುದರಿಂದ ಯುಕ್ತ ವೇಳೆಯಲ್ಲಿ ಪ್ರವಾಸ ಮಾಡುವದಿಲ್ಲವೆಂದು ತಿಳಿಯುತ್ತದೆ.

ತೆಕ್ಕಟ್ಟೆ ಗ್ರಾಮದ ರೇಶನ್ ಅಂಗಡಿಯನ್ನು ಮುಚ್ಚಲಾಗಿದೆ. ಆದರೆ ಕೆಲ ಸ್ವಾರ್ಥಿಗಳು ತಾವು ಅದನ್ನು ನಡೆಸುವದಾಗಿ ಅರ್ಜಿ ಕೊಟ್ಟಿದ್ದಾರೆ. ವಸ್ತುಸ್ಥಿತಿಯೇನು, ಗ್ರಾಮಕ್ಕೆ ಅಂತಹ ಅಂಗಡಿ ಅವಶ್ಯಕವೇ ಎಂಬುದನ್ನು ಅಧಿಕಾರಿಗಳು ಪರಿಶೀಲಿಸುವರೆಂಬ ಹಾರೈಕೆಯಿದೆ.

ಹಳ್ಳಿಗಳಲ್ಲಿ ಇತ್ತೀಚೆಗೆ ಅಕ್ಕಿಯ ಶೋಧಕ್ಕಾಗಿ ಅಧಿಕಾರಿಗಳು ಬರುತ್ತಿರುವರಲ್ಲದೆ ಪರಿಶೀಲನೆಯ ಬಗ್ಗೆ ಅವರು ಅನುಸರಿಸುತ್ತಿರುವ ಧೋರಣದಿಂದ ನಾಗರಿಕ ಜೀವನ ನಡೆಸಲು ಕಠಿಣವೆನಿಸಿದೆಯೆಂದು ಮುಂಡ್ಕಂ ತಾರಿನಲ್ಲಿ ಸುದ್ದಿಯಿದೆ.

ಮಂಗಳೂರು ಸಮಾಜವಾದಿ ಪಕ್ಷದ ಕಾರ್ಯದರ್ಶಿ ಶ್ರೀ ಶಿವಶಂಕರರಾಯರ ನೇತೃತ್ವದಲ್ಲಿ ಸತ್ಯಾಗ್ರಹಿಗಳ ಒಂದು ತಂಡ ಮೈಸೂರಿಗೆ ಹೊರಟಿತು.

ರಾಜಾರಾಮ ಮೋಹನರಾಯರ ೧೧೪ ನೆಯ ಪುಣ್ಯತಿಥಿಯನ್ನು ಶ್ರೀ ಬಿ ವೈಕುಂಠ ಬಾಳಿಗಾರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಬ್ರಹ್ಮಸಮಾಜ ಆಚರಿಸಿತು.

ಮದ್ರಾಸಿನ ಸೌಂದರ ಕ್ರಿಕೆಟ್ ಆಟಗಾರರು ಮಂಗಳೂರಿನ ಎಂ. ಸಿ. ಸಿ ಯವರನ್ನು ಸೋಲಿಸಿದರು.

ಕೆಲ ಲೇಬರ್ ಏಜಂಟರು ಬಲತ್ಕಾರದಿಂದ ಹಳ್ಳಿಗರನ್ನು ರಾತ್ರಿಯಲ್ಲಿ ಕಾರಿನಲ್ಲಿ ಕೂರಿಸಿಕೊಂಡು ಘಟ್ಟಕ್ಕೆ ಸಾಗಿಸುತ್ತಿರುವ ಸುದ್ದಿ ಪುತ್ತೂರಿಂದ ಬಂದಿದೆ.

ಪೆರಡಾಲ ವಿದ್ಯಾರ್ಥಿ ಸಂಘದ ವಿಶೇಷ ಸಭೆಯು ಕಳೆದ ೨೪ ರಂದು ಶ್ರೀ ಕೆ. ಕೆ. ರೈಯವರ ಅಧ್ಯಕ್ಷತೆಯಲ್ಲಿ ಶ್ರೀ ಮುದವೀಡು ಕೃಷ್ಣರಾಯರ ನಿಧನದ ಬಗ್ಗೆ ದುಃಖ ಸೂಚಕ ಠರಾವನ್ನು ಪಾಸು ಮಾಡಿತು.

ಕಲ್ಲಡ್ಕದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಸಮಿತಿಯ ಆಶ್ರಯದಲ್ಲಿ, ಜಯಭಾರತ ಸಂಘ, ಸ್ಥಾಪಿಸಲ್ಪಟ್ಟಿತು ಮತ್ತು 'ಜಯಶಕ್ತಿ' ಎಂಬ ಕೈಬರಹದ ಪತ್ರಿಕೆಯೊಂದು ಹೊರಡಿಸಲ್ಪಟ್ಟಿತು.

ಮೈಸೂರಿನ ಕುರುಕ್ಷೇತ್ರ

ಕಾರಾಗೃಹದ ಕದ ತೆರೆಯಿತು, ಮುಖಂಡರಿಗೆ ಮುಕ್ತಿ ದೊರೆಯಿತು, ಸತ್ಯಾಗ್ರಹಿಗಳ ಶಕ್ತಿ ಇಮ್ಮಡಿಸಿತು !

ಮೊಳಕಾಲುಮುರು, ಹೊಳಲಕೆರೆ, ಹಿರಿಯೂರು ಇಲ್ಲಿಯ ತಾಲೂಕು ಕಚೇರಿಗಳ ಮುಂದೆ ಪಿಕೆಟಿಂಗ ಕಾರ್ಯ ಯಶಸ್ವಿಯಾಗಿ ಸಾಗಿದೆ.

ಹುರುವನೂರು ಪೋಲೀಸು ಕಚೇರಿಯನ್ನು ಸತ್ಯಾಗ್ರಹಿಗಳು ಕೈವಶಮಾಡಿಕೊಂಡಿದ್ದು ಅಲ್ಲಿಂದ ಪೋಲೀಸರು ಪಲಾಯನ ಮಾಡಿದ್ದಾರೆ. ಸ್ವಯಂಸೇವಕರೇ ಈಗ ಪೋಲೀಸು ಕೆಲಸ ನೋಡಿಕೊಳ್ಳುತ್ತಿದ್ದಾರೆ.

ಚಿತ್ರದುರ್ಗ ಜಿಲ್ಲಾ ಮ್ಯಾಜಿಸ್ಟ್ರೇಟರು ಜಿಲ್ಹೆಯಲ್ಲಿರುವ ಎಲ್ಲ ಗರಡಿ ಮನೆಗಳಿಗೆ ಬೀಗ ಮುದ್ರೆ ಹಾಕಲು ಪೋಲೀಸರಿಗೆ ಅಜ್ಞೆ ಕೊಟ್ಟಿದ್ದಾರೆ. ಇದಲ್ಲದೆ ಖಾಸಗಿ ಜನರ ಹತ್ತಿರ ಇರುವ ಎಲ್ಲ ಶಸ್ತ್ರಾಸ್ತ್ರಗಳನ್ನು ಕಸಿದುಕೊಳ್ಳಲು ಒಂದು ಆಜ್ಞೆ ಹೊರಡಿಸಿದ್ದಾರೆ. ಚಿತ್ರದುರ್ಗನಗರದಲ್ಲಿರುವ ಎಲ್ಲ ಗರಡಿ ಮನೆಗಳನ್ನು ತಾ ೧ರ ರಾತ್ರಿ ಪೋಲೀಸರು ವಶಪಡಿಸಿಕೊಂಡು ಬೀಗ ಮುದ್ರೆ ಹಾಕಿದ್ದಾರೆ.

ಹರಿಹರ ತಾಲೂಕು ಕಚೇರಿಯ ಮೇಲೆ ಏರಿಸಿದ ರಾಷ್ಟ್ರಧ್ವಜವನ್ನು ಅಧಿಕಾರಿಗಳು ಕಿತ್ತುಹಾಕಿದ್ದರಿಂದ ಜನರು ಅದನ್ನು ಪ್ರತಿಭಟಿಸಿ ಪುನಃ ರಾಷ್ಟ್ರಧ್ವಜವನ್ನು ತಾಲೂಕು ಕಚೇರಿಯ ಮೇಲೆ ಹಚ್ಚಿದರು. ಗೃಹಮಂತ್ರಿಗಳಿಗೆ ರಾಷ್ಟ್ರಧ್ವಜಕ್ಕೆ ಅಪಮಾನವಾದುದನ್ನು ತಿಳಿಸಲಾಗಿದೆ.

ಸತ್ಯಾಗ್ರಹ ಪ್ರಾರಂಭವಾಗಿ ಒಂದು ತಿಂಗಳು ಪೂರ್ತಿಯಾದ ನಿಮಿತ್ತ ತಾ, ೧ರಲ್ಲಿ ಸತ್ಯಾಗ್ರಹ ದಿನಾಚರಣೆ ಪಾಲಿಸಿ ದಾವಣಗೆರೆಯ ವರ್ತಕರೆಲ್ಲರೂ ಹರತಾಳ ಆಚರಿಸಿದರು. ಸಾಯಂಕಾಲ ಗಾಂಧಿ ಮೈದಾನದಲ್ಲಿ ವಕೀಲ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಾರ್ವಜನಿಕ ಸಭೆ ಸೇರಿ ಅನೇಕರು ಭಾಷಣ ಮಾಡಿದರು.

ತಾ. ೨ರಲ್ಲಿ ಶಿವಮೊಗ್ಗದ ಹಿಂದು ಮುಸಲ್ಮಾನರೆಲ್ಲರೂ ಹರತಾಳ ಆಚರಿಸಿದ್ದರಿಂದ ಪೇಟೆಯೆಲ್ಲ ರಣಗುಟ್ಟುತ್ತಿತ್ತು. ಬೆಳಿಗ್ಗೆ ಪ್ರಭಾತ ಫೇರಿಯಲ್ಲಿ ಬಹುಜನ ಭಾಗವಹಿಸಿತ್ತು.

ಹೊಸದುರ್ಗದಲ್ಲಿ ೩೮ ಜನರನ್ನು ಬಂಧಿಸಿ ಅವರನ್ನು ಚಿತ್ರದುರ್ಗಕ್ಕೆ ಕೊಂಡೊಯ್ಯಲು ಸಾಧ್ಯವಾಗದ್ದರಿಂದ ಬಿಡುಗಡೆ ಮಾಡಲಾಯಿತು.

ಹೊಸದುರ್ಗ ತಾಲೂಕಿನ ಕಾಂಗ್ರೆಸ್ಸು ಸಮಿತಿಯ ಅಧ್ಯಕ್ಷರಾಗಿದ್ದವರು ಈಗ ಸತ್ಯಾಗ್ರಹ ಸಮಯದಲ್ಲಿ ಸೆರೆಮನೆಗೆ ಹೋಗಲು ಹೆದರಿ ಪುಕ್ಕತನ ತೋರಿಸಿದ್ದರಿಂದ ಜನರು ಅವರಿಗೆ ಸ್ತ್ರೀಯರಿಗುಚಿತವಾದ ಬಾಗಿನ ಕೊಟ್ಟರು. ಇದರಂತೆಯೇ ಬೇರೆ ೬ ಜನರಿಗೆ ಮರ್ಯಾದೆ ಸಂದುದಾಗಿ ತಿಳಿಯುತ್ತದೆ.

ಭದ್ರಾವತಿಯ ರಾಘವೇಂದ್ರರಾಯರು ಕರ್ನಾಟಕ, ಅಂಧ್ರ, ಕೇರಳ, ತಮಿಳ ನಾಡುಗಳಲ್ಲಿ ಸಂಚರಿಸಿ ಬಂದಿದ್ದು ಎಲ್ಲ ಭಾಗಗಳಿಂದ ಸತ್ಯಾಗ್ರಹಿಗಳು ಮೈಸೂರು ಸತ್ಯಾಗ್ರಹದಲ್ಲಿ ಭಾಗವಹಿಸಲು ಉತ್ಸಾಹದಿಂದ ತಮ್ಮ ನಿರೀಕ್ಷಣೆಗಿಂತ ಹೆಚ್ಚಾಗಿ ಬರಹತ್ತಿರುವರೆಂದು ತಿಳಿಸುತ್ತಾರೆ.

ಹಿರೇಮಗಳೂರಿನಲ್ಲಿರುವ ಸೇಂದಿ ಅಂಗಡಿಗೆ ಬೆಂಕಿ ಹಚ್ಚಿದ ಪರಿಣಾಮವಾಗಿ ಅಂಗಡಿ ಭಸ್ಮವಾಯಿತು.

ತಾ. ೩ರ ರಾತ್ರಿಯಿಂದ ಕೆಟ್ಟ ಆಹಾರವನ್ನು ನಿಷೇಧಿಸುವುದರ ಸಲುವಾಗಿ ರಾಜಕೀಯ ಕೈದಿಗಳು ಮೈಸೂರು ಸಬ್ ಜೇಲಿನಲ್ಲಿ ಉಪವಾಸ ಕೈಕೊಂಡರೆಂದು ತಿಳಿಯುತ್ತದೆ.

ಮೈಸೂರು ಮತ್ತು ಬೆಂಗಳೂರು ಜೇಲುಗಳಿಂದ ಹಲವು ರಾಜಕೀಯ ಕೈದಿಗಳನ್ನು ಸ್ಥಳಾಭಾವದ ಮೂಲಕ ತಾ. ೩ರಂದು ಬಿಡುಗಡೆ ಮಾಡಲಾಯಿತು.

ಮುಂಬಯಿ ಪ್ರಾಂತಿಕ ಕಾಂಗ್ರೆಸ್ಸು ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲರು ಮೈಸೂರು ಪ್ರಜೆಗಳ ಹೋರಾಟಕ್ಕೆ ಬೆಂಬಲ ಕೊಟ್ಟು, ಪ್ರಜೆಗಳು ಜಾಗೃತರಾದುದನ್ನು ಕಂಡು ಕಾಲ್ಕಿತ್ತ ಬ್ರಿಟಿಶರಿಂದ ಸಂಸ್ಥಾನಿಕರು ಪಾಠ ಕಲಿಯಬೇಕು ಬೇಕೆಂದು ಹೇಳಿ ಬಲಾಢ್ಯ ಬ್ರಿಟಿಶರು ಪ್ರಜೆಗಳ ಹೋರಾಟದಿಂದ ಎಚ್ಚತ್ತು ತೊಲಗಿರುವಾಗ ಚಿಕ್ಕ ಸಂಸ್ಥಾನಿಕರ ಪಾಡೇನು? ಎಂದು ಹೇಳಿದರು.

ಮೈಸೂರ ಸರಕಾರದ ಅಪ್ಪಣೆಯ ಮೇರೆಗೆ ಮೈಸೂರು ಸಂಸ್ಥಾನ ಕಾಂಗ್ರೆಸ್ಸಿನ ಕಾರ್ಯಸಮಿತಿ ಸದಸ್ಯರನ್ನು ಚಿಕ್ಕಮಗಳೂರು ಸೆರೆಮನೆಯಿಂದ ತಾ. ೭ರಲ್ಲಿ ಬಿಡುಗಡೆಮಾಡಲಾಯಿತು. ಕರ್ನಾಟಕ ...ಲು ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷ ...ಸ್ಟ್ರ' ದ ಹಳ್ಳಿ, ಚೆಂಗಲರಾಯರೆಡ್ಡಿ ಹಾಗೂ ...ಂದ ಮುದ್ರಿತರು, ಮಹಾರಾಜನ್ನು ಇಂದಿನ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವ ಬಗ್ಗೆ ಒಂದೆಡೆ ಸಮಾಲೋಚನೆಗಾಗಿ ಕೂಡಿಸುವ ಬಗ್ಗೆ ಕೆಲ ಪ್ರತಿಷ್ಠಿತ ಅಧಿಕಾರೇತರ ಜನರು ಪ್ರಯತ್ನಿಸುತ್ತಿರುವರೆಂದು ಅಧಿಕೃತ ವರ್ಗಗಳಿಂದ ತಿಳಿಯುತ್ತದೆ.

ಬೆಂಗಳೂರು ವಕೀಲ ಸಂಘದ ಮುಂದೆ ಬಾಲಕಬಾಲಿಕೆಯರು ಉಪವಾಸ ಪ್ರಾರಂಭಿಸಿದುದರ ಪರಿಣಾಮವಾಗಿ ವಕೀಲ ಸಂಘವು ತನ್ನ ಕಚೇರಿಯನ್ನು ೧೫ ದಿನಗಳ ವರೆಗೆ ಮುಚ್ಚಲು ನಿರ್ಧರಿಸಿತು. ಅದರಿಂದ ಬಾಲಕರ ಉಪವಾಸ ಕೊನೆಗೊಂಡಿತು.

ತಾ. ೬ ರಲ್ಲಿ ಬೆಂಗಳೂರು ವಕೀಲ ಸಂಘವು ಪೋಲೀಸರು ಕೋರ್ಟಿನ ಆವರಣದಲ್ಲಿ ಜನಸಮೂಹದ ಮೇಲೆ ಮಾಡಿದ ಲಾಠಿ ಪ್ರಯೋಗವನ್ನು ತೀವ್ರವಾಗಿ ಖಂಡಿಸಿತು.

ಹೊಳೆನರಸೀಪುರದ ಗೋಳೀಬಾರಿನ ಪ್ರಕರಣದಲ್ಲಿ ಬಂಧಿಸಲ್ಪಟ್ಟ ೪೫ ಜನರನ್ನು ಚೆನ್ನಾಗಿ ಥಳಿಸಿದ್ದು ಅವರಲ್ಲಿ ಮೂವರ ಸ್ಥಿತಿ ಚಿಂತಾಜನಕವಿದೆಯೆಂದು ತಿಳಿಯುತ್ತದೆ.

ಸಶಸ್ತ್ರ ಜನರ ತಂಡವೊಂದು ತಾ. ೨ ರಲ್ಲಿ ಜಗಲೂರ ಬಳಿಯಿರುವ ಅಣವೆ ಗ್ರಾಮದ ಪೋಲೀಸು ಠಾಣೆಯ ಮೇಲೆ ಹಗಲು ಹೊತ್ತಿನಲ್ಲಿ ಏರಿಹೋದರೆಂದೂ ಅಲ್ಲಿದ್ದ ೫ ಪೋಲೀಸರಲ್ಲಿ ೩ ಜನ ಓಡಿಹೋದರೆಂದೂ ತಿಳಿದುಬಂದಿದೆ. ಈ ಸಶಸ್ತ್ರ ಜನರು ಇನ್ನಿಬ್ಬರನ್ನು ಚೆನ್ನಾಗಿ ಥಳಿಸಿ ಬಂದೂಕುಗಳನ್ನು ವಶಪಡಿಸಿಕೊಂಡು ಮಾಯವಾದರು. ಗಾಯಗೊಂಡ ಪೋಲೀಸರನ್ನು ದಾವಣಗೆರೆ ಅಸ್ಪತ್ರೆಗೆ ಸಾಗಿಸಲಾಯಿತು.

ತಾ. ೩ ರಲ್ಲಿ ಚಿತ್ರದುರ್ಗದ ಬಾಲಕಬಾಲಿಕೆಯರು ಪ್ರತ್ಯೇಕವಾಗಿ ೩ ಮೆರವಣಿಗೆಗಳನು ಹೊರಡಿಸಿದ್ದರು. ಪೋಲೀಸರು ಅವನ್ನು ಚದುರಿಸಿದ್ದಲ್ಲದೆ ಒಬ್ಬನಂತೂ ಒಬ್ಬಳು ಹುಡುಗಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಅವಮಾನಮಾಡಿದನು.

೧೯೪೨ ರ ಕ್ರಾಂತಿಯ ವೀರರೂ "ವಿಚಾರ" ಎಂಬ ಪತ್ರಿಕೆಯ ಸಂಪಾದಕೂ ಆದ ಶ್ರೀ ವೇದಮೂರ್ತಿಯವರನ್ನು ತಾ. ೮ ರಲ್ಲಿ ಬಂಧಿಸಲಾಯಿತು.

ಹರಿಹರದ ಸ್ತ್ರೀ ಸತ್ಯಾಗ್ರಹಿಗಳು ತಾ. ೫ ರಲ್ಲಿ ಮೆರವಣಿಗೆ ಹೊರಡಿಸಿ ಸತ್ಯಾಗ್ರಹವನ್ನು ಆಚರಿಸಿದರು.

ಬೀಚೋಡಿನ ಕಾಂಗ್ರೆಸ್ಸಿನ ಬೆಂಬಲಿಗರಾದ ೨೮ ಕುಟುಂಬಗಳಿಗೆ ಸೀದಾ ಕೊಡಬಾರದೆಂದು ಅಜ್ಞಾಪಿಸುವುದರಿಂದ ಈ ಸುದ್ದಿಯನ್ನು ಭಾರತ ಸರಕಾರದ ಆಹಾರ ಮಂತ್ರಿ ಡಾ. ರಾಜೇಂದ್ರ ಪ್ರಸಾದರಿಗೆ ತಂತಿಯ ಮೂಲಕ ತಿಳಿಸಲಾಗಿದೆ.

ದಾವಣಗೆರೆ ಸೆರೆಮನೆಯಲ್ಲಿ ಪೋಲೀಸರು ಸತ್ಯಾಗ್ರಹಿಗಳ ಸಾಮಾನುಗಳನ್ನು ಕಳತೊಡಗಿರುವರೆಂದು ತಿಳಿದು ಬಂದಿದೆ.

ಮೈಸೂರು ಕಾಂಗ್ರೆಸ್ಸಿನ ತೃತೀಯ ಸರ್ವಾಧಿಕಾರಿಗಳೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಆದ ಶ್ರೀ ನಿಜಲಿಂಗಪ್ಪನವರು ತಾ. ೬ ರಲ್ಲಿ ಬಿಡುಗಡೆ ಹೊಂದಿದರು. ಸಾರ್ವಜನಿಕ ಸಂದರ್ಶನವೊಂದರಲ್ಲಿ ಅವರು— "ಇದು ಆನಂದೋತ್ಸಾಹಗಳಿಂದ ಮೆರೆವ ಸಮಯವಲ್ಲ. ನಮ್ಮ ಸಾವಿರಾರು ಬಾಂಧವರು ಇನ್ನೂ ಸೆರೆಮನೆಗಳಲ್ಲಿ ಚಿತ್ರಹಿಂಸೆಗೆ ಗುರಿಯಾಗಿದ್ದಾರೆ. ಮಹಾರಾಜರು ಇನ್ನಾದರೂ ತಮ್ಮ ಏಕಾಂತವಾಸದಿಂದ ಹೊರಬಂದು ಪ್ರಜಾಧುರೀಣರನ್ನು ಭೆಟ್ಟಿಯಾಗಿ ಅವರ ಆಶೆ ಆಕಾಂಕ್ಷೆಗಳನ್ನು ಈಡೇರಿಸಲಿ " ಎಂದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಧುರೀಣರಾದ ಶ್ರೀ. ಕೆ. ಹನುಮಂತಯ್ಯನವರನ್ನು ಕೋಲಾರ ಜೇಲಿನಿಂದ ಬೆಂಗಳೂರಿಗೆ ಕರೆತಂದು ತಾ. ೭ ರಲ್ಲಿ ಬಿಡುಗಡೆ ಮಾಡಲಾಯಿತು.

ಮೈಸೂರು ಪ್ರ. ಪ್ರ. ಸಭೆಯ ದಸರೆ ಅಧಿವೇಶನವನ್ನು ಸಂಸ್ಥಾನದಲ್ಲಿಯ ತೀಕ್ಷ್ಣ ಆಹಾರ ಪರಿಸ್ಥಿತಿ ಹಾಗೂ ರಾಜಕೀಯ ಪರಿಸ್ಥಿತಿ ಇವುಗಳನ್ನನುಲಕ್ಷಿಸಿ ಮುಂದೂಡಲಾಗಿದೆಯೆಂದೂ ವಿಜಯ ದಶಮಿಯದಿನ ಮಹಾರಾಜರ ಜಂಬೂ ಸವಾರಿ ನಡೆಯುವದಿಲ್ಲೆಂದೂ ಪ್ರಕಟನೆ ಹೊರಟಿದೆ.

ಮೈಸೂರು ಸರಕಾರ ಮತ್ತು ರೇಲ್ವೆ ಕೆಲಸಗಾರರ ನಡುವೆ ಒಪ್ಪಂದವಾಗಿ ಸಂಪು ಮುಕ್ತಾಯವಾಯಿತು. ಸರಕಾರದ ಪರವಾಗಿ ಸಂಧಾನ ನಡೆಸಿದ ಶ್ರೇಯಸ್ಸು, ಡೆ. ಪೋಲೀಸು ಇನ್ಸ್ಪೆಕ್ಟರ್ ಜನರಲ್ಲರಾದ ಶ್ರೀ ಮು. ಕೆ. ಸೋಮಪ್ಪನವರಿಗೆ ಪ್ರಾಮುಖ್ಯವಾಗಿ ಸಲ್ಲುವುದು.

ಮೈಸೂರು ಸಂಸ್ಥಾನ ಕಾಂಗ್ರೆಸ್ ಕಾರ್ಯಸಮಿತಿಯ ಸಭೆ ತಾ. ೮ ರ ಸಂಜೆ ಪ್ರಾರಂಭವಾಯಿತು. ತಮ್ಮನ್ನು ಭೆಟ್ಟಿಯಾಗಲು ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರು ಬಿಡುಗಡೆ ಹೊಂದಿದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರಿಗೆ ಬರೆದ ಪತ್ರವು ಸಭೆಯ ಮುಂದಿಡಲ್ಪಟ್ಟಿತು. ಈ ಪತ್ರದ ಬಗ್ಗೆ ಇನ್ನೂ ಚರ್ಚೆನಡೆದಿದೆ.

ಮೈಸೂರು ಕಾಂಗ್ರೆಸ್ ಕಾರ್ಯಕರ್ತರು ತಾ.೫. ೬ ರಲ್ಲಿ ಹಿಂದುಪುರ ಸೇವಾಮಂದಿರದಲ್ಲಿ ಸೇರಿ ಮಹಾರಾಜರ ಘೋಷಣೆ ವ್ಯರ್ಥವೆಂದೂ ಸಂಪೂರ್ಣ ಹೊಣೆಗಾರ ಸರಕಾರ ಪ್ರಾಪ್ತವಾಗುವವರೆಗೆ ಹೋರಾಟ ಸಾಗತಕ್ಕದೆಂದೂ ನಿರ್ಧರಿಸಿದರು.

ಮೈಸೂರು ಸತ್ಯಾಗ್ರಹ ಕ್ರಿಯಾ ಸಮಿತಿಯ ಶ್ರೀ ಎಚ್.ಎಸ್.ರುದ್ರಪ್ಪ ಮತ್ತು ಕಾರ್ಲೆ ತಿಮ್ಮಯ್ಯನವರು "ಮೈಸೂರು ನಾಯಕರ ಬಿಡುಗಡೆಯಾದರೂ ಸರಕಾರದ ಅಮಾನುಷ ವರ್ತನೆ ಹೆಚ್ಚಾಗುತ್ತಲೇ ಸಾಗಿದೆ. ಆದುದರಿಂದ ಪೂರ್ಣ ಜವಾಬುದಾರಿ ಸರಕಾರ ಸ್ಥಾಪನೆಯಾಗುವ ವರೆಗೆ ಅಹಿಂಸಾತ್ಮಕ ಹೋರಾಟವನ್ನು ಮುಂದುವರಿಸಿಯೇ ತೀರಬೇಕೆಂದು ದೇಶ ಬಾಂಧವರಲ್ಲಿ ಪ್ರಾರ್ಥಿಸುತ್ತೇವೆ" ಎಂದು ಪ್ರಕಟಿಸಿದ್ದಾರೆ.

ಮಹಾತ್ಮಾಗಾಂಧಿಯವರ ವೈಯಕ್ತಿಕ ವೈದ್ಯರಾಗಿದ್ದ ಡಾ ಬಿಧನ ಚಂದ್ರರಾಯ್ ಎಂಬವರಿಗೆ ಅಮೇರಿಕದ ಡಿಕೇಟರಿನಲ್ಲಿಯ 'ಬ್ಲೂ ಕ್ರಾ' ಹೊಟೇಲಿನಲ್ಲಿ ಶ್ವೇತೇತರರೆಂಬ ಕಾರಣದಿಂದ ಒಮ್ಮೆ ಪ್ರವೇಶ ಸಿಗಲಿಲ್ಲವಂತೆ.



ಮುಂಬಯಿ ಪೇಟೆ

ಮುಂಬಯಿ ೮

ಶೇರಪೇಟೆ

ಮುಂಬಯಿ ಸ್ಟಾಕ ಪೇಟೆಯಲ್ಲಿ ಅಷ್ಟೊಂದು ಉತ್ಸಾಹವು ಇಂದು ಕಂಡು ಬರಲಿಲ್ಲ. ಬೆಲೆಗಳೇರಬಹುದೆಂಬ ಆಸೆಯ ಹಾರಸುದ್ದಿ ಕೂಡ ಹೊರಬೀಳದ್ದರಿಂದ ಎಲ್ಲೆಲ್ಲಿಯೂ ಇಳಿಕೆಯ ವಾತಾವರಣವೆ ಇದ್ದಿತು. ಆದರೆ ಇಂದು ಸ್ಟೀಲ ಶೇರುಗಳಿಗೆ ಗಿರಾಕಿಯೊಬ್ಬ ಸಿಕ್ಕದ್ದರಿಂದ ಕಡಮೆ ಧಾರಣೆಗಾದರೂ ಮಾರಾಟ ನಡೆಯಿತು. ಟಾಟಾ ಡೆಫರ್ಡ ಶೇರುಗಳು ೧೮೫೫ ರಿಂದ ಪ್ರಾರಂಭವಾಗಿ ೧೮೩೫ ಕ್ಕಿಳಿದು ಮುಂದೆ ಸ್ವಲ್ಪ ಸುಧಾರಿಸಿ ೧೮೫೨—೮ ಕ್ಕೇರಿದವು. ಆರ್ಡಿನರಿ ಶೇರುಗಳು ೩೭೪ ರಿಂದ ೩೬೦ ಕ್ಕಿಳಿದು ಮುಂದೆ ಮತ್ತೆ ೩೬೨ ಕ್ಕೇರಿದವು. ಇಂಡಿಯನ್ ೩೫—೧೨ ಕ್ಕೆ ಮತು ಬಂಗಾಲ ಸ್ಟೀಲ ೨೭—೧೨ ಕ್ಕೆ ಮಾರಾಟ ನಡೆಯಿತು. ಕಾಟನ್ ಮಿಲ್ಲ ಶೇರುಗಳಲ್ಲಿ ಬಾಂಬೆ ಡಾಯಿಂಗ ೧೧೩೫ ರಿಂದ ೧೧೨೨—೮—೦ ಕ್ಕಿಳಿದವು. ಕೊಹಿನೂರು ೫೮೦ ರಿಂದ ೫೭೬ ಕ್ಕಿಳಿದವು. ಸ್ವದೇಶಿ ೮ ರಷ್ಟು ಇಳಿದು ೬೮೯ ಕ್ಕೆ ನಿಂತವು. ಶಿಂದ್ಯಾ ೩೩—೧೦ ಕ್ಕಿಳಿದು ಮುಂದೆ ೩೪—೭ ಕ್ಕೇರಿದವು. ಅಸೋಸಿಯೇಟೆಡ್ ಸಿಮೆಂಟ್ಸ ೨-೮ ಕಳೆದುಕೊಂಡು ೧೬೨—೮ ಕ್ಕೆ ನಿಂತವು. ಸೆಕ್ಯೂರಿಟಿಗಳು ೩./.೧೯೮೬ ರ ಸಾಲ ಪತ್ರ ೧೦೦—೧೫ ಕ್ಕೆ ನಿಂತು ಉಳಿದುದೆಲ್ಲ ಸ್ಥಿರವಾಗಿ ಉಳಿದವು. ಇಂದಿನ ಧಾರಣೆಗಳು ಇಂತಿದ್ದವು. ಮುಂಬಯಿ ಡಾಯಿಂಗ ೧೧೨೨—೮—೦, ಸೆಂಟ್ರಲ್ ಇಂಡಿಯಾ ೩೧೨—೦—೦, ಸೆಂಚರಿ ೯೮೨—೮—೦, ಗೋಕಾಕ ೩೩೫—೦—೦ ಕೋಹಿನೂರ ೫೭೬—೦—೦, ಫೀನಿಕ್ಸ ೧೩೦೫—೦—೦, ಸೊಲ್ಲಾಪುರ ೬೦೬೦—೦—೦, ಸಿಂಪ್ಲೆಕ್ಸ ೨೩೬—೦—೦, ಸ್ವದೇಶಿ ೬೮೯—೦—೦, ವಿಷ್ಣು ೬೫೦—೦—೯ ಸಿಂಧ್ಯ ಸ್ಟೀಮ ೫೬೦—೦—೦ ಟಾಟಾ ಹೈಡ್ರೊ ೧೮೨—೮—೦ ಟಾಟಾ ಸ್ಟೀಲ ಡೆಫರ್ಡ ೧೮೫೨—೦—೦ ಟಾಟಾ ಸ್ಟೀಲ ಆರ್ಡಿನರಿ ೩೭೨—೦—೦, ಇಂಡಿಯನ್ ಆಯರ್ನ ೩೫—೧೨—೦. ಅಸೋಸಿಯೇಟೆಡ್ ಸಿಮೆಂಟ್ಸ ೧೬೨—೮—೦. ಟಾಟಾ ಸ್ಟೀಲ ಪ್ರೆಫರನ್ಸ ೨೦೭—೮—೦ ಟಾಟಾಸ್ಟೀಲ ೨ ನೇ ಪ್ರೆಫರನ್ಸ ೧೫೩—೪—೦,

ಬ್ಯಾಂಕುಗಳು

ಸೆಂಟ್ರಲ್ ೮೭—೦—೦ ಇಂಪೀರಿಯಲ್ ಅಂಶತ: ೫೫೭—೮—೦, ಇಂಪೀರಿಯಲ್ ಪೂರ್ಣ ೨೨೭೦—೦—೦, ಇಂಡಿಯಾ ೨೪೫-೧೨-೦, ರಿಝರ್ವ ೧೧೫—೮—೦.

ಸೆಕ್ಯುರಿಟಿ

೨.೩/೪ ದ ೧೯೪೮-೫೨ ರ ಸಾಲಪತ್ರ ೧೦೧-೩-೦ ೩./. ದ ೧೯೪೯೬-೫೨ ರವು. ೧೦೨-೭-೦ ೩॥ ದ ೧೯೪೭-೫೦ ೧೦೦-೬-೦ ೩./. ೧೯೮೬ ರವು ೧೦೦-೧೫-೦ ೪./. ೧೯೬೦-೭೦ ೧೧೪-೦-೦-೦ ೪॥./. ದ ೧೯೯೫-೬೦, ೧೧೪-೦-೦.

ಅರಳೆ ಧಾರಣೆ

ಇಂದು ಅರಳೆ ಪೇಟೆ ಸ್ಥಿರವಾಗಿ ಪ್ರಾರಂಭವಾಯಿತು. ಆದರೆ ಮುಂದೆ ಇಳಿಯಿತು. ಮುಂದೆ ಗಿರಾಕಿಗಳು ಹೆಚ್ಚಾದ್ದರಿಂದ ಸ್ವಲ್ಪ ಏರಿಕೆಯ ಸ್ಥಿತಿಯಲ್ಲಿ ಉಳಿಯಿತು. ಜಾನೇವಾರ ಅರಳೆಯು ೪೭೧-೪-೦ ಕ್ಕೆ ಪ್ರಾರಂಭವಾಗಿ ೪೬೯—೮—೦ಕ್ಕೆ ಇಳಿದು ಕಡೆಗೆ ೪೭೩-೨-೦ ಕ್ಕೆ ಏರಿತು. ಮಾರ್ಚ ವಾಯದೆ ೪೭೭—೮—೦ ಮತ್ತು ಮೇ ೪೮೪-೮-೦ ಇದ್ದಿತು.

ಚಿನ್ನ ಬೆಳ್ಳಿ

ಸರಾಫ ಪೇಟೆಯಲ್ಲಿ ಸಿಂಧ ಪಂಜಾಬಗಳಿಂದ ೮೦೦೦ ತೊಲಿ ಬಂಗಾರ ಬಂದದ್ದರಿಂದ ದರವು ೧೦೫-೪-೦ ರಿಂದ ೧೦೪—೬—೦ ಕ್ಕಿಳಿಯಿತು ಆದರೆ ಕರಾಚಿಯಿಂದ ಹೆಚ್ಚಿನ ಬೇಡಿಕೆ ಬಂದದ್ದರಿಂದ ಮತ್ತೆ ದರವು ೧೦೫—೩-೦ ಕ್ಕೆ ಬಂದಿತು. ತಯಾರಿ ಬೆಳ್ಳಿ ೧೬೩-೭-೦ ಯಿಂದ ೧೬೨-೧೨.೦ ಕ್ಕಿಳಿಯಿತು. ಆದರೆ ಮತ್ತೆ ೧೬೩-೮-೦ಕ್ಕೆ ಏರಿತು.

ಎಣ್ಣೆ ಕಾಳು

ಶೇಂಗಾ ೧೪೫-೧೩೪, ಅಗಸಿ ೩೦-೧೦-೦, ಅಗಸಿ ಎಣ್ಣೆ ೧೮—೨—೦.

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ.	೧	೨೭೫-೨೮೫
,,	೨	೨೬೦-೨೭೦
,,	೩	೨೪೫-೨೫೫
ಹಳೇ ಜಯವಂತ ಹತ್ತಿ		೨೯೦-೩೦೦
ಜಿನ ಹೊಸದು		೧೮೫-೧೯೫
ಜಿನ ಹಳೇದು		೧೯೮-೨೦೮
ಡಬಲರೋಲ		೧೮೫-೧೯೫
ಸಾಜಿನ		೧೮೫-೧೯೨
ಅಪಲಂಡ ಹತ್ತಿ		೨೭೫-೨೯೦

ನಿರಾಶ್ರಿತರ ಬಗೆಗೆ ಆಚಾರ್ಯ ಕೃಪಲಾನಿಯವರ ಹೇಳಿಕೆ


ರಾಷ್ಟ್ರಾಧ್ಯಕ್ಷ ಆಚಾರ್ಯ ಕೃಪಲಾನಿಯವರು ಪತ್ರಕಾರರ ಪರಿಷತ್ತಿನಲ್ಲಿ ನಿರಾಶ್ರಿತರ ಸಮಸ್ಯೆಯನ್ನು ಚರ್ಚಿಸುತ್ತ, "ನಿರಾಶ್ರಿತರು ವಿದೇಶಿಯರೂ ಅಲ್ಲ, ಉಪದ್ರವಿಗಳೂ ಅಲ್ಲ, ವಿಚ್ಛೇದ ಹೊಂದಿದ ಹಿಂದುಸ್ತಾನದ ಆಚೆಯ ಭಾಗದಲ್ಲಿ ಹುಟ್ಟಿದುದು ತಪ್ಪೇ? ಪಾಕಿಸ್ತಾನದ ಪ್ರತಿಯೊಬ್ಬ ನಾಗರಿಕನಿಗೂ ಹಿಂದುಸ್ತಾನಕ್ಕೆ ಬಂದು ನೆಲೆಸಿ ಹಿಂದುಸ್ತಾನದ ನಾಗರಿಕನಾಗಲು ಅಧಿಕಾರವಿದೆ. ಇಂಥವರನ್ನು ಹೊರದೂಡುವದೆಂದರೆ ಕಾಂಗ್ರೆಸ್ಸಿನ ಇತಿಹಾಸವನ್ನೇ ಅಳಿಸಿದಂತಾಗುವದು" ಎಂದರು.

"ಹಿಂದುಸ್ತಾನದ ಬಹು ಜನರು ಪಾಕಿಸ್ತಾನದ ಮುಸಲ್ಮಾನೇತರರು ನ್ಯಾಯವಾದ ಹಕ್ಕಿಗಾಗಿ ಹೋರಾಡುತ್ತಿದ್ದಾರೆಂದು ತಿಳಿಯುತ್ತಾರೆ. ಅವರೆಂದೂ ದೇಶದ ವಿಚ್ಛೇದನೆಗೆ ತಮ್ಮ ಸಮ್ಮತಿ ಕೊಡಲಿಲ್ಲ. ಹಿಂದುಸ್ತಾನದ ಇತರ ಭಾಗಗಳಲ್ಲಿದ್ದಷ್ಟೇ ಪ್ರಬಲ ಕಾಂಗ್ರೆಸ್ಸಿಗರು ಅಲ್ಲಿಯೂ ಇದ್ದಾರೆ."

ಸಂಸ್ಥಾನದ ವಿಷಯಕ ಕಾಂಗ್ರೆಸ ಧೋರಣವು ಹಾಗೆಯೇ ಇದೆ. ಆದರೂ ಸಂಸ್ಥಾನಿ ಪ್ರಜೆಗಳ ಸ್ವಾತಂತ್ರ್ಯವನ್ನು ಪರಿಸ್ಥಿತಿಗನುಗುಣವಾಗಿ ಕಾಂಗ್ರೆಸು ಎತ್ತಿ ಹಿಡಿಯಲು ಯತ್ನಿಸುವದೆಂದು ತಾವು ನಿಃಸಂದೇಹವಾಗಿ ಹೇಳಬಲ್ಲೆನೆಂದೂ ಆಚಾರ್ಯರು ಅಭಿಪ್ರಾಯ ಪಟ್ಟರು.

ಮಂಗಳೂರಿಗೆ ಬಂದ "ಬೊಂಬೆ ಕ್ರಾನಿಕಲ್" ಪತ್ರಿಕೆಯ ಉಪಸಂಪಾದಕರಾದ ಶ್ರೀ ಆರ್. ಕೆ. ಪ್ರಭುಗಳಿಗೆ ಸ್ಥಳೀಯ ಹಂಸರಾಜ ಥಿಯೇಟರ್ಸಿನವರು ಉಪಹಾರ ಕೊಟವಿತ್ತು ಸತ್ಕರಿಸಿದರು.

–– ಈ ವಾರದ ಕತೆ ––



ಶ್ರೀ.ಎಂ.ಲಕ್ಷ್ಮಣರಾವ್ ಇವರಿಂದ–

ಅಂದು ಶುಕ್ರವಾರ. ಶ್ರೇಷ್ಠವಾದ ದಿನ. ಲಕ್ಷ್ಮಿ, ಸರಸ್ವತಿ ಮುಂತಾದ ದೇವತೆಗಳ ಪೂಜೆಗೆ ಯೋಗ್ಯವಾದ ಸುದಿವಸ. ದಿಗ್ವಿಜಯವನ್ನು ಸಂಪಾದಿಸಲು ಹೊರಡಲು ಯೋಗ್ಯವಾದ ದಿನ. ಬಹಳ ವರುಷಗಳಿಂದಲೂ ಬಿಳಿಯರ ಬಂಧನದಲ್ಲಿ ಸಿಕ್ಕಿ ಕಣ್ಣೀರು ಸುರಿಸುತ್ತಿದ್ದ ಭಾರತಾಂಬೆಯ ಬಂಧನವನ್ನು ಬಿಡಿಸಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದ ಭಾರತೀಯರಿಗೆ ಬಹುಮುಖ್ಯವಾದ ಮಹತ್ವದ ದಿನ. ಇಂತಹ ಸುದಿನಸದಲ್ಲಿ ನಗರದ ನಾಗರಿಕರ ಮುಖದಲ್ಲಿ ಏನೋ ಒಂದು ವಿಧವಾದ ಮಂಕು ಮುಸುಕಿತ್ತು. ವರ್ತಕರೆಲ್ಲರೂ ತಮ್ಮ ಆರಾಮವನ್ನು ಮರೆತು ಅಂಗಡಿಗಳನ್ನು ಬೀಗದಿಂದ ಭದ್ರಪಡಿಸಿ ಸಂಕಟವನ್ನು ಸೂಚಿಸುತ್ತಿದ್ದರು. ಬಾಲಕರು ತಮ್ಮ ಸಂತಾಪದ ಸೂಚನೆಗಾಗಿ ಸ್ಕೂಲ್ ಕಾಲೇಜುಗಳಿಗೆ ಹೋಗದೆ ಗುಂಪಾಗಿ ಸೇರಿ ಬೀದಿ ಬೀದಿಗಳಲ್ಲಿ ಮೆರವಣಿಗೆ ಹೊರಟು ನಭೋಮಂಡಲವನ್ನೇ ಭೇದಿಸುವಂತಹ ಜಯಘೋಷಣೆಮಾಡುತ್ತ ಹೊರಬಿದ್ದರು.

ಗುಂಪಿನ ಮುಂದೆ ಹೋಗುತ್ತಿದ್ದ ತರುಣನ ಕೈಯಲ್ಲಿ ಶ್ರೇಷ್ಠವಾದ ಸ್ವತಂತ್ರ ಭಾರತ ಧ್ವಜವು ಕೋಲಿನ ಮೇಲ್ಭಾಗದಲ್ಲಿ ಹಾರಾಡುತ್ತ, ಯಾರ ಹೆದರಿಕೆಯೂ ಇಲ್ಲದೆ ನಡೆಯುವ ರಣಧೀರನಂತೆ ಮೆರೆಯುತ್ತಿತ್ತು. ಈ ದಿನದ ಸಂಕಟಕ್ಕೆ ಕಾರಣವೇನೆಂದರೆ ಕಾಂಗ್ರೆಸ್ ಮುಖಂಡರುಗಳು ಸಂಸ್ಥಾನ ಸರಕಾರಕ್ಕೆ ವಿರೋಧವಾಗಿ ಮಾತನಾಡಿದರೆಂಬ ಅಪಾದನೆಯ ಮೇಲೆ ಅವರನ್ನು ಹಿಂದಿನ ರಾತ್ರಿ ದಸ್ತಗಿರಿ ಮಾಡಿ ಜೈಲಿನಲ್ಲಿರಿಸಿದ್ದರು. ಆ ಮುಖಂಡರುಗಳ ಬಿಡುಗಡೆಗಾಗಿ ವೀರತರುಣರೂ, ಬಾಲಕರೂ, ವರ್ತಕರೂ ತಮ್ಮ ಕಾರ್ಯಗಳನ್ನು ಬಿಟ್ಟು ಹರತಾಳವನ್ನಾಚರಿಸಿದ್ದರು. ಎಲ್ಲರೂ ಆ ಸಭೆಯಲ್ಲಿ ಭಾಗವಹಿಸಿ ಸರಕಾರದ ಅನೀತಿಗಳನ್ನು ಖಂಡಿಸುತ್ತ, ಶ್ರೇಷ್ಠವಾದ ಕಾಂಗ್ರೆಸ್ ತತ್ವವನ್ನು ಪಾಲಿಸುತ್ತ, ಮಹಾತ್ಮರನ್ನು ಸ್ಮರಿಸುತ್ತ, ಜಯಘೋಷದೊಡನೆ ದೊಡ್ಡ ಮೆರವಣಿಗೆ ಹೊರಡಿಸಿದ್ದರು.

ಮಧ್ಯಾಹ್ನ ಒಂದು ಗಂಟೆಯ ಸಮಯವಾಗಿತ್ತು. ಸತ್ಪುರುಷರ ಮನಸ್ಸಿನಂತಹ ಸ್ವಚ್ಛವಾದ ಆಕಾಶದಲ್ಲಿ ಭಾಸ್ಕರನು ತನ್ನ ಇಚ್ಛೆಯಂತೆ ರಾರಾಜಿಸುತ್ತಿದ್ದನು. ಅವನ ತಾಪಕ್ಕೆ ಹೆದರಿ ಪಕ್ಷಿಗಳೆಲ್ಲವೂ ಗೂಡುಗಳಲ್ಲಿ ಅಡಗಿದ್ದವು. ಉರಿಬಿಸಿಲಿನ ತಾಪವನ್ನು ತಾಳಲಾರದೆ ಅನೇಕರು ಮನೆಯೊಳಗೆ ಮಲಗಿಕೊಂಡು ಬೀಸಣಿಗೆಯಿಂದ ಬೀಸಿಕೊಳ್ಳುತ್ತ ವಾಯುದೇವರನ್ನು ಸ್ಮರಿಸಿಕೊಳ್ಳುತ್ತಲಿದ್ದರು. ಬಿಸಿನೆತ್ತರದ ವೀರತರುಣರು ಬಿಸಿಲನ್ನು ಲೆಕ್ಕಿಸದೆ ಜಯಘೋಷ ಮಾಡುತ್ತ ತಮ್ಮ ಕೀರ್ತಿಯು ಪ್ರಪಂಚದಲ್ಲಿ ಬೆಳಗಬೇಕು, ಕನ್ನಡ ಮಾತೆಯ ಕರುಣಕಟಾಕ್ಷವು ತಮ್ಮ ಮೇಲೆ ಬೀಳಬೇಕು, ಮುಖಂಡರುಗಳ ಬಿಡುಗಡೆಯಾಗಬೇಕು, ಎಂಬ ಧ್ಯೇಯಗಳನ್ನಿಟ್ಟುಕೊಂಡು, ಯಾವುದನ್ನೂ ಲೆಕ್ಕಿಸದೆ, ಮುಂದೆ ನುಗ್ಗುತ್ತ ಕಾಲೇಜಿನ ಆವರಣವನ್ನು ಸೇರಿದರು.

ಜನರ ಗುಂಪು ಅಪಾರವಾಗಿ ಸೇರಿತು. ಅನೇಕರ ತಲೆಯ ಮೇಲಿದ್ದ ಪವಿತ್ರವಾದ ಖಾದೀ ಟೋಪಿಗಳು ಬಿಸಿಲಿನ ಪ್ರಕಾಶಕ್ಕೆ ಬೆಳ್ಳಿಯತಗಡುಗಳಂತೆ ಪ್ರಕಾಶಿಸುತ್ತಿದ್ದವು. ಸ್ವಲ್ಪ ಹೊತ್ತಿನ ನಂತರ ಎಲ್ಲರೂ ಕುಳಿತುಕೊಂಡು ನಿಶ್ಶಬ್ದವಾಗಿ ಭಾಷಣವನ್ನು ಕೇಳಲಾರಂಭಿಸಿದರು. ಖಾದಿಬಟ್ಟೆಗಳಿಂದ ಅಲಂಕೃತನಾಗಿ, ಗುಂಡಿನೇಟಿಗೂ ಅಂಜದಂತಹ ವಿಸ್ತಾರವಾದ ಎದೆಯುಳ್ಳ ಕರ್ನಾಟಕ ಮಾತೆಯ ಪುತ್ರನೊಬ್ಬನು ಎತ್ತರವಾದ ಸ್ಥಳದಲ್ಲಿ ನಿಂತುಕೊಂಡು ಮಾತನಾಡಲಾರಂಭಿಸಿದನು. ಅವನ ಬಾಯಿಂದ ಹೊರಬೀಳುತ್ತಿದ್ದ ವೀರವಾಣಿಯು ಸಭಿಕರ ಮನಸ್ಸನ್ನು ಆಕರ್ಷಿಸಿತು.

ಭಾಷಣ ಮುಂದುವರಿಸುತ್ತ ಆ ವೀರ ತರುಣನು ಸರಕಾರದ ನೀತಿಯನ್ನು ಖಂಡಿಸಲಾರಂಭಿಸಿದನು. ಕನ್ನಡಿಗರಿಗೆ ಒದಗಿರುವ ಸಂಕಟವನ್ನು ಬಿಚ್ಚಿ ಹೇಳಿದನು. ಎಲ್ಲರೂ ಒಗ್ಗಟ್ಟಿನಿಂದ ಸೇರಿ ಈ ಬೇಜವಾಬ್ದಾರಿ ಸರಕಾರವನ್ನು ದೂರ ತೊಲಗಿಸಿ ಪ್ರಜಾಸರಕಾರವನ್ನೇ ಸ್ಥಾಪಿಸಿಕೊಂಡು ಸಂತೋಷದಿಂದ ಬಾಳಬೇಕು ಎಂದು ವಿವರಿಸಿದನು. ಸೆರೆಮನೆಯಲ್ಲಿ ಅಡಗಿರುವ ಮುಖಂಡರುಗಳ ದೇಶಪ್ರೇಮವನ್ನು ಕೊಂಡಾಡಿದನು. ಅವರುಗಳ ಬಿಡುಗಡೆಗಾಗಿ ತನುಮನಧನವನ್ನು ಅರ್ಪಿಸಿ ಹೋರಾಡಲು ಸಿದ್ಧರಾಗಬೇಕು. ಎಂದು ತರುಣರಿಗೆ ಉತ್ಸಾಹವಾಗುವಂತೆ ಮಾತನಾಡಿದನು. ಎಲ್ಲರೂ ತಮ್ಮ ಒಪ್ಪಿಗೆಯನ್ನು ಸೂಚಿಸಲು ಕೈಚಪ್ಪಾಳೆಯನ್ನು ತಟ್ಟಿ "ಭಾರತಮಾತಾಕಿ ಜೈ" ಎಂದು ಏಕಕಂಠದಿಂದ ಕೂಗಿದರು.

ಆ ಸಮಯಕ್ಕೆ ಸರಿಯಾಗಿ ಮೂರು ಪೋಲೀಸ ವ್ಯಾನುಗಳು ಶಸ್ತ್ರ ಸಜ್ಜಿತರಾದ ಪೋಲೀಸರನ್ನು ತುಂಬಿಕೊಂಡು ಬಂದವು. ಮುಂದಿನ ವ್ಯಾನಿನಲ್ಲಿ ಕುಳಿತಿದ್ದ ಪೋಲೀಸರಿಗೆ ಮುಖಂಡನಾದ ಖಾಕಿಬಟ್ಟೆಯಿಂದ ಅಲಂಕೃತನಾದ ಜಿಲ್ಲಾಧಿಕಾರಿಯು ಕೆಳಗೆ ಇಳಿದನು. ಅವನ ಅಜ್ಞೆಯನ್ನು ಅನುಸರಿಸಿ ವ್ಯಾನುಗಳಲ್ಲಿದ್ದ ಪೋಲೀಸರೆಲ್ಲರೂ ಕೆಳಗಿಳಿದು ಸಾಲಾಗಿ ನಿಂತುಕೊಂಡರು. ಇವರನ್ನು ಲೆಕ್ಕಿಸದೆ ತರುಣನು ಮಾತನಾಡುತ್ತಲೇ ಇದ್ದನು. ಸರಕಾರದ ಅನೀತಿಯನ್ನು ಖಂಡಿಸುತ್ತಲೇ ಇದ್ದನು. ಸಭಿಕರೆಲ್ಲರೂ ಏಕಚಿತ್ತರಾಗಿ ಕೇಳುತ್ತ ಕೈಚಪ್ಪಾಳೆ ತಟ್ಟುತ್ತಲೇ ಇದ್ದರು. ಜಿಲ್ಲಾಧಿಕಾರಿಗೆ ಸ್ವಲ್ಪ ಸಿಟ್ಟುಬಂದಿತು. ಕೂಡಲೇ ಆ ವೀರ ತರುಣನ ಹತ್ತಿರಕ್ಕೆ ಹೋಗಿ "ನೀನು ಸರಕಾರವನ್ನು ದೂಷಿಸುತ್ತಿದ್ದೀಯೆ ಇದು ನ್ಯಾಯವಲ್ಲ. ನಿನ್ನ ಭಾಷಣವನ್ನು ನಿಲ್ಲಿಸಬೇಕು" ಎಂದು ಅಧಿಕಾರವಾಣಿಯಿಂದ ನುಡಿದನು.

ಆದರೆ ಆ ತರುಣನು ಇವನನ್ನು ಅಲಕ್ಷಿಸಿ ಮಾತನಾಡುತ್ತಲೇ ಇದ್ದನು. ಸ್ವಾತಂತ್ರ್ಯ ಸಮರಕ್ಕೆ ಸಿದ್ಧನಾಗಿ ಗುಂಡಿನೇಟಿಗೂ ಹೆದರದೆ ನಿಂತಿದ್ದ ಆ ಯುವಕನು ಇಂತಹ ಅಧಿಕಾರಿಗಳನ್ನು ಲೆಕ್ಕಿಸುವನೆ? ಇದರಿಂದ ಜಿಲ್ಲಾಧಿಕಾರಿಗೆ ಕೋಪವು ಇಮ್ಮಡಿಸಿತು. "ಇನ್ನು ಐದು ನಿಮಿಷಗಳ ಕಾಲಕೊಡುತ್ತೇನೆ. ಅಷ್ಟರಲ್ಲಿ ನೀನು ಸುಮ್ಮನಾಗಬೇಕು" ಎಂದು ಅರ್ಭಟಿಸುತ್ತ ನುಡಿದನು ಕೆಚ್ಚೆದೆಯ ವೀರನು ಯಾವುದನ್ನೂ ಉತ್ತರಿಸದೆ ತನ್ನ ಕಾರ್ಯದಲ್ಲೇ ನಿರತನಾಗಿದ್ದನು. ಜಿಲ್ಲಾಧಿಕಾರಿಗೆ ಕೋಪವು ಉಕ್ಕಿಬಂತು ತಡೆಯಲು ಸಾಧ್ಯವಿಲ್ಲದಂತಾಯಿತು. ಕೂಡಲೇ ಆ ತರುಣನನ್ನು ದಸ್ತಗಿರಿಮಾಡಿ ಪೋಲೀಸ ವ್ಯಾನಿಗೆ ತೆಗೆದುಕೊಂಡು ಹೋದನು ಹಿರಿಯ ಮುಖಂಡನ ದಸ್ತಗಿರಿಯಿಂದ ಮನನೊಂದ ಆ ಸಭಿಕರಿಗೆ ಬಹಳ ಸಿಟ್ಟುಬಂದಿತು. ಜಿಲ್ಲಾಧಿಕಾರಿಯ ಹತ್ತಿರ ಹೋಗಿ ಅವನನ್ನು ಬಿಡಬೇಕೆಂದು ಬೇಡಿಕೊಂಡರು. ಆದರೆ ಅವರ ಬೇಡಿಕೆಯು ಮರಳುಗಾಡಿನಲ್ಲಿ ನೀರನ್ನು ಬಯಸಿದಂತಾಯಿತು. ಅದರೂ ಧೈರ್ಯಗೆಡದೆ ಮುಂದೆ ಹೋಗಿ ಅಡ್ಡಗಟ್ಟಿದರು. ಜಿಲ್ಲಾಧಿಕಾರಿಗೆ ಕೋಪಬಂತು. ಕೂಡಲೇ ತನ್ನ ಸಿಬ್ಬಂದಿಗಳಿಗೆ ಅಜ್ಞಾಪಿಸಿ ಲಾಠಿಯಿಂದ ಹೊಡೆದು ಜನರನ್ನು ಓಡಿಸಲು ಹೇಳಿದನು.

ಅದರಂತೆ ಪೋಲೀಸರು ತಮ್ಮಲ್ಲಿದ್ದ ಲಾಠಿಗಳಿಂದ ಜನರನ್ನು ಹೊಡೆಯಲಾರಂಭಿಸಿದರು. ಲಾಠಿಯ ಪ್ರಹಾರವನ್ನು ತಡೆಯಲಾರದೆ ಕೆಲವು ಬಾಲಕರು ಅಲ್ಲಿಯೇ ಬಿದ್ದರು. ಮತ್ತೆ ಕೆಲವರು ಓಡಿದರು. ಸೆರೆಯಲ್ಲಿನ ಮುಖಂಡರುಗಳೆಲ್ಲದೆ ಪರಿತಪಿಸುತ್ತಿದ್ದ ಜನಗಳಿಗೆ ಇದು ತುಂಬಾಸಿಟ್ಟನ್ನುಂಟುಮಾಡಿತು. ನಿರಾಯುಧರಾದ ಈ ಜನಗಳು ಆಯುಧವನ್ನು ಹಿಡಿದಿದ್ದ ಪೋಲೀಸರಿಗೆ ಏನು ಮಾಡಬೇಕೆಂಬುದು ಮೊದಲು ತೋರದೆ ಸುಮ್ಮನೇ ಇದ್ದರು. ಲಾಠಿ ಏಟುಗಳು ಜಾಸ್ತಿಯಾದಂತೆಲ್ಲ ಇವರಿಗೆ ಕೋಪವು ಉದ್ರಿಕ್ತವಾಯಿತು. ಶಾಂತಿಗೆ ನೆಲೆಯಾಗಿದ್ದ ಅವರ ಮುಖದ ಮೇಲೆ ಕೋಪವು ಬಂದು ನೆಲಸಿ ಕಾಲರುದ್ರನಂತೆ ಕಣ್ಣಿನಲ್ಲಿ ಕೋಪದ ಕೆಂಡವನ್ನು ಸುರಿಸುತ್ತ ನಿಂತರು. ನೆಲದ ಮೇಲೆ ಬಿದ್ದಿದ್ದ ರುದ್ರನ ಸ್ವರೂಪವಾದ ಕಲ್ಲುಗಳು ಅವರ ಕೈಯನ್ನು ಅಲಂಕರಿಸಿದವು. ಕೈಯಲ್ಲಿ ಕೋಲಿದೆ ಎಂಬ ಅಹಂಕಾರವನ್ನು ತೋರಿಸುತ್ತ ಜನರನ್ನು ಸದೆಬಡಿಯುತ್ತ ಬರುತ್ತಿದ್ದ ನಿಷ್ಕರುಣೆಗಳಾದ ಪೋಲೀಸರ ಮೇಲೆ ಒಂದೇ ಸಮನೆ ಶಿಲಾವೃಷ್ಟಿಯು ಸುರಿಯಲಾರಂಭಿಸಿತು. ಗುಂಪು ಚದುರಿ ಅಲ್ಲೊಬ್ಬ ಇಲ್ಲೊಬ್ಬ ನಿಂತುಕೊಂಡು ಕಲ್ಲುಗಳನ್ನು ವೇಗವಾಗಿ ಬೀಸಲಾರಂಭಿಸಿದರು. ಅನೇಕ ಕಲ್ಲುಗಳು ಪೋಲೀಸರಿಗೆ ತಗುಲಿ ಅವರಲ್ಲಿದ್ದ ಗಾಜಿನ ಪದಾರ್ಥಗಳು ಒಡೆಯಲಾರಂಭಿಸಿದವು. ಇದೆಲ್ಲವನ್ನೂ ನೋಡಿ ಪ್ರಾಣದ ಹೆದರಿಕೆಯಿಂದ ಪೋಲೀಸರು ಹಿಮ್ಮೆಟ್ಟಿದರು. ಅವರ ಕೈಲಿದ್ದ ಕೋಲಿನ ಪ್ರಭಾವವು ಕನ್ನಡಮಾತೆಯ ಪುತ್ರರಾದ ಕೆಚ್ಚೆದೆಯ ತರುಣರ ಮೇಲೆ ನಡೆಯದೆ ಪರಾಜಯಹೊಂದಿತು.

ತನ್ನ ಸಿಬ್ಬಂದಿಗಳು ಹೆದರಿ ಹಿಮ್ಮೆಟ್ಟುತಿರುವುದನ್ನು ನೋಡುತ್ತ ಜಿಲ್ಲಾಧಿಕಾರಿಯು ಸುಮ್ಮನೆ ನಿಂತಿದ್ದನು. ಚದುರಿಹೋಗಿದ್ದ ಜನಗಳೆಲ್ಲರೂ ಇದೇ ಸಮಯವೆಂದು ಪುನಃ ಒಂದು ಗೂಡಿ ಗುಂಪಾಗಿ, ಕಲ್ಲುಗಳನ್ನು ಎಸೆಯುತ್ತ ಮುಂದೆ ನುಗ್ಗಿದರು. ಕೆಲವು ಕಲ್ಲುಗಳ ಏಟು ಜಿಲ್ಲಾಧಿಕಾರಿಗೂ ತಗುಲಿತು. ಅವನು ಅದರ ಏಟನ್ನು ತಡೆಯಲಾರದೆ ನಾಗರಹಾವಿನಂತೆ ಬುಸುಗುಟ್ಟುತ ಜನರ ಗುಂಪನ್ನು ಒಂದೇ ಸಮನೆ ನೋಡಲಾರಂಭಿಸಿದನು. ಜಯಘೋಷಣೆ ಮಾಡುತ್ತ ಜನಗಳು ಮುನ್ನುಗ್ಗಿ ಜಿಲ್ಲಾಧಿಕಾರಿಯ ಮೇಲೆ ಬರುತ್ತಿದ್ದರು. ಜಿಲ್ಲಾಧಿಕಾರಿಗೆ ದಿಕ್ಕೇತೋರದಂತಾಯಿತು. ಸ್ವಾತಂತ್ರ್ಯದಾಹದಿಂದ ಪೀಡಿತರಾಗಿರುವ ಈ ಜನರು ಏನು ಮಾಡಿಬಿಡುವರೋ ಎಂದು ಭಯವು ಅವನಲ್ಲಿ ಉಂಟಾಯಿತು. ತನ್ನ ಪ್ರಾಣಕ್ಕೇ ಅಪಾಯ ಬರಬಹುದೆಂದು ಯೋಚಿಸಿ ತನ ಸೊಂಟದಲ್ಲಿದ್ದ ರಿವಾಲ್ವರಿಗೆ ಕೈ ಹಾಕಿ ಹೊರಕ್ಕೆ ತೆಗೆದುಕೊಂಡನು.

ಇದನ್ನು ನೋಡಿದ ಜನಗಳಿಗೆ ಕೋಪವು ಇಮ್ಮಡಿಸಿತು. ಎಲ್ಲರೂ ಅವನನ್ನು ಸುತ್ತುಗಟ್ಟಿ ಮರುಷರಿಗೆ ಕಳಿಸಬೇಕೆಂದು ಯೋಚಿಸಿದರು. ಜಿಲ್ಲಾಧಿಕಾರಿಗೆ ಭಯವು ಇಮ್ಮಡಿಸಿತು. ಸಿಂಹಗಳ ನಡುವೆ ಸಿಕ್ಕಿಬಿದ್ದಿರುವ ಆನೆಯಂತಾದನು. ತನ್ನ ಬೆಂಗಾವಲಿಗೆ ನಿಂತಿದ್ದ ರಿಸರ್ವ ಪೋಲೀಸಿನವರಿಗೆ ಆಜ್ಞಾಪಿಸಿ ಬಂದೂಕುಗಳನ್ನು ಬಳಸಲು ಹೇಳಿದನು.

ಅದರೂ ಜನಗಳು ಮೇಲೆ ಮೇಲೆ ಬರುತ್ತಲೇ ಇದ್ದರು. ಯತ್ನವಿಲ್ಲದೆ ಜಿಲ್ಲಾಧಿಕಾರಿಯು ಜನಗಳ ಗುಂಪಿಗೆ ಗುಂಡನ್ನು ಹಾರಿಸಿ ಪೋಲೀಸರಿಗೂ ಗುಂಡುಹಾರಿಸುವಂತೆ ಅಜ್ಞಾಪಿಸಿದನು. ಬಂದೂಕದ ಕೊಳವೆಯೊಳಗೆ ಬಂಧಿಸಿದ್ದ ಸೀಸದ ಗುಂಡು "ಢಂ" ಎಂದು ಭಯಂಕರ ಶಬ್ದಮಾಡುತ್ತ ಹೊರಬಿತ್ತು.

ಕೂಡಲೇ ಜನರ ಗುಂಪು ಚದುರಿತು. ಜಿಲ್ಲಾಧಿಕಾರಿಯು ಹೊಡೆದ ಗುಂಡಿನೇಟು ಗುಂಪಿನ ನಡುವೆ ಇದ್ದ ಕೇವಲ ೧೩ ವರುಷದ ಬಾಲಕನ ಗುಂಡಿಗೆಯನ್ನು ಭೇದಿಸಿ ತೃಪ್ತಿಗೊಳ್ಳದೆ ರಭಸವಾಗಿ ಮುಂದೆ ನುಗ್ಗಿತು.

ಗಲಾಟೆಯನ್ನು ನೋಡುತ್ತ ಕಾಲೇಜಿನ ಹತ್ತಿರ ನಿಂತಿದ್ದ ಯುವ [illegible] ಅದು ಹೋಗಿ ತಗುಲಿತು. ಅವನ [illegible] ಹೊರಗೆ ಬರಲು ಶಕ್ತಿಯಿಲ್ಲದೆ ಅವನ ಎದೆಯಲ್ಲಿಯೇ ನಿಂತಿತು. ಕೂಡಲೇ ಆ ಯುವಕನು ಗುಂಡಿನೇಟನ್ನು ಸಹಿಸಲಾರದೆ "ಹಾ" ಎಂದು ಕೂಗುತ್ತ ಕೆಳಗುರುಳಿದನು. ಪೋಲೀಸರು ಹಾರಿಸಿದ ಗುಂಡುಗಳು ಅನೇಕ ತರುಣರ ಪ್ರಾಣವನ್ನು ಕಸಿದವು. ಒಂದು ಗಳಿಗೆಯೊಳಗಾಗಿ ಕಾಲೇಜು ಆವರಣವು ರಕ್ತದಿಂದ ಒದ್ದೆಯಾಗಿ [illegible] ಭೂಮಿಯಂತಾಯಿತು. [illegible] ತೋರಿತು. ಕೂಡಲೇ ಜಿಲ್ಲಾಧಿಕಾರಿಯು ಕಾರನ್ನು ಹತ್ತಿ ಪೋಲೀಸ್ ಸ್ಟೇಷನ್ನಿಗೆ ಹೊರಟನು.

ಜಿಲ್ಲಾಧಿಕಾರಿಯು ಆಫೀಸಿನಲ್ಲಿ ಕುರ್ಚಿಯ ಮೇಲೆ ಕುಳಿತುಕೊಂಡು ಯೋಚಿಸಲಾರಂಭಿಸಿದನು. ಅವನ ಮನಸ್ಸು ಬಿರುಗಾಳಿಗೆ ಸಿಕ್ಕಿದ ದೋಣಿಯಂತೆ ಹೊಯ್ದಾಡುತ್ತಿತ್ತು. ಮನಸ್ಸಿನಲ್ಲಿ ಶಾಂತಿಯೆಂಬುದೇ ಮರೆಯಾಗಿತ್ತು. ಅವನ ಕಿವಿಗಳಲ್ಲಿ ಜಯಕಾರದ ಧ್ವನಿಗಳೇ ಕೇಳಿಸುತ್ತಿದ್ದವು. ಕಣ್ಣೆದುರಿಗೆ ಆ ವೀರತರುಣರ ರುಧಿರದಿಂದ ಅಂಜದೆ ಮುನ್ನುಗ್ಗಿ ಬರುತ್ತಿರುವಂತೆಯೇ ಕಾಣಲಾರಂಭಿಸಿತು. ಈ [illegible]

ಪ್ರಾಣರಕ್ಷಣೆಗಾಗಿ ಅನೇಕ ಜನಗಳ ಪ್ರಾಣವನ್ನು ತೆಗೆದೆನಲ್ಲಾ?" ಎಂದು ಯೋಚಿಸಲಾರಂಭಿಸಿದನು. ಆದರೆ ಅದು ನನ್ನ ತಪ್ಪಲ್ಲ. ನಾನೂ ಸಹ ಸರಕಾರದ ಅಧಿಕಾರಿ. ಅದರ ಸೇವಕ. ಸರಕಾರಕ್ಕೆ ವಿಧೇಯನಾಗಿ ನಾನು ಮಾಡಿರುವುದೇ ಸರಿ. ಎಂದು ಏನೇನೋ ಸಮಾಧಾನಮಾಡಿಕೊಳ್ಳುತ್ತಲಿದ್ದನು. ಆದರೆ ಅವನ ಮನಸ್ಸಿನಲ್ಲಿ ಏನೋ ಒಂದು ವಿಧವಾದ ಉರಿಯು ಅವನನ್ನು ಸುಡುತ್ತಿತ್ತು.

ಸ್ವಲ್ಪ ಹೊತ್ತಿನ! ವರೆಗೂ ಹೀಗೆಯೇ ಯೋಚಿಸುತ್ತ ಕುಳಿತಿದ್ದನು. ಸಬ್ ಇನ್ಸ್‌ಪೆಕ್ಟರು ಬಂದು ಜಿಲ್ಲಾಧಿಕಾರಿಗೆ ನಮಸ್ಕರಿಸಿ ನಿಂತನು. "ಏನು?" ಎಂದು ಜಿಲ್ಲಾಧಿಕಾರಿಯು ಪ್ರಶ್ನಿಸಿದನು. "ಈಗ ನಡೆದ ಫೈರಿಂಗ್ ನಲ್ಲಿ ಸತ್ತವರುಮತ್ತು ಗಾಯಗೊಂಡಿರುವವರನ್ನು ತರಲಾಗಿದೆ." ಎಂದು ಹೇಳಿದನು. ಕೂಡಲೇ ಜಿಲ್ಲಾಧಿಕಾರಿಯು ಪರೀಕ್ಷಿಸುವುದಕ್ಕಾಗಿ ಹೊರಟನು.

ಗುಂಡಿನೇಟಿಗೆ ಸಿಕ್ಕಿ ತಮ್ಮ ಜೀವವನ್ನು ಕೊಟ್ಟಿರುವ ಬಾಲಕರ ಮೃತದೇಹಗಳೆಲ್ಲವನ್ನೂ ಪರೀಕ್ಷಿಸುತ್ತ ಮುಂದು ಮುಂದಕ್ಕೆ ಹೊರಟನು. ಕೆಲವರ ಎದೆಯಲ್ಲಿಯೂ, ಮತ್ತೆ ಕೆಲವರ ಗಂಟಲಿನಲ್ಲಿಯೂ ಇನ್ನೂ ಕೆಲವರ ಹೊಟ್ಟೆಯಲ್ಲಿಯೂ ಗುಂಡುಗಳು ಭೇದಿಸಿಕೊಂಡು ಹೋಗಿದ್ದವು. ಬಿಳಿಯ ಬಟ್ಟೆಗಳ ಮೇಲೆ ರಕ್ತವು ಸುರಿದು ಭಯಂಕರವಾಗಿ ಕಾಣುತ್ತಿತ್ತು. ಆದರೆ ಆ ಶವಗಳ ಮುಖದಲ್ಲಿ ದುರ್ಮರಣಕ್ಕೆ ಈಡಾದವರ ಮುಖದಲ್ಲಿ ಕಾಣುವಂತೆ ಯಾವ ವಿಧವಾದ ವಿಕಾರವೂ ಕಾಣುತ್ತಿರಲಿಲ್ಲ. ಎಲ್ಲರೂ ಶಾಂತರೀತಿಯಲ್ಲಿ ಮಲಗಿ ನಿದ್ರಿಸುತ್ತಿರುವಂತೆ ಕಾಣುತ್ತಿತ್ತು.

ಶವಗಳನ್ನು ಪರೀಕ್ಷಿಸುತ್ತ ಜಿಲ್ಲಾಧಿಕಾರಿಯು ಮುಂದು ಮುಂದೆ ಹೋಗುತ್ತಿದ್ದನು. ಮೇಜಿನ ಮೇಲಿದ್ದ ಟೆಲಿಫೋನ್ ಟ್ರಿಣ್....ಟ್ರಿಣ್ ಎಂದು ಶಬ್ದಮಾಡಲಾರಂಭಿಸಿತು. ಕೂಡಲೇ ಜಿಲ್ಲಾಧಿಕಾರಿಯು ಫೋನನ್ನು ತೆಗೆದುಕೊಂಡು ಮಾತನಾಡಲಾರಂಭಿಸಿದನು. "ಕಾಲೇಜಿಗೆ ಹೋಗಿದ್ದ ಶ್ರೀನಿವಾಸು ಮನೆಗೆ ಇನ್ನೂ ಬಂದಿಲ್ಲವೆಂದು" ಜಿಲ್ಲಾಧಿಕಾರಿಯ ಹೆಂಡತಿಯು ಕೇಳಿದಳು. ತಕ್ಷಣವೇ [illegible] ಪಿಸಿ ತನ್ನ ಮಗನ [illegible] ಕಳುಹಿಸಿ ಶವಗಳ ಪರೀಕ್ಷೆಗೆ ಮುಂದೆ ಹೊರಟನು.

ಕೊನೆಯಲ್ಲಿದ್ದ ಶವಗಳ ಮುಖದ ಮೇಲಿದ್ದ ಬಟ್ಟೆಯನ್ನು ಸಬ್ ಇನ್ಸ್‌ಪೆಕ್ಟರು ತೆಗೆದನು. ಒಬ್ಬ ತರುಣನಿಗೆ ಗುಂಡು ಎದೆಗೆ ತಗುಲಿ ಅಲ್ಲಿಯೇ ನಿಂತಿತ್ತು. ಅವನ ಬಟ್ಟೆಯ ಮೇಲೆಲ್ಲ ರಕ್ತವು ಧಾರಾಕಾರವಾಗಿ ಸುರಿದು [illegible] ಆ ಶವವನ್ನು ಜಿಲ್ಲಾಧಿಕಾರಿಯು ಚೆನ್ನಾಗಿ ಪರೀಕ್ಷಿಸಲಾರಂಭಿಸಿದನು. ಪಕ್ಕಕ್ಕೆ ಹೊರಳಿಸಿ ನೋಡಿದನು. ಕೂಡಲೇ ಅವನಿಗೆ [illegible] ಯಿತು. ತಲೆ ತಿರುಗಲಾರಂಭಿಸಿತು. ಕಣ್ಣಿನಲ್ಲಿ ಕತ್ತಲೆಕವಿಯಿತು. ಅದು ಅವನ ಪ್ರೇಮ ಪುತ್ರನಾದ ಶ್ರೀನಿವಾಸನ ಶವವೆಂದು ಅರಿವಾಯಿತು. ಜಿಲ್ಲಾಧಿಕಾರಿಗೆ ಮುಂದಕ್ಕೆ ಹೋಗಲು ದಾರಿಯೇ ತೋರಲಿಲ್ಲ. ಅಲ್ಲಿಯೇ ನಿಂತುಕೊಂಡು ಒಂದೇ ಸಮನೆ ಆ ಶವವನ್ನು ನೋಡಲಾರಂಭಿಸಿದನು. ಕಣ್ಣಿನಲ್ಲಿ ನೀರು ಸುರಿಯಲಾರಂಭಿಸಿತು. ಅಧಿಕಾರಿಯು ಈ ಅವಸ್ಥೆಯನ್ನು ನೋಡಿ, ಸಬ್ ಇನ್ಸ್‌ಪೆಕ್ಟರು ಅವಕ್ಕಾದನು. "ಈ ಬಾಲಕನನ್ನು ಕೊಂದವನಾರು?" ಎಂದು ಸಬ್ ಇನ್ಸ್‌ಪೆಕ್ಟರನ್ನು ಪ್ರಶ್ನಿಸಿದನು. "ತಾವು ಮೊದಲು ಹಾರಿಸಿದ ಗುಂಡು, ಆ ಬಾಲಕನನ್ನು ಭೇದಿಸಿ ಇವನಿಗೆ ತಗುಲಿತು. ಈ ಬಾಲಕನು ಕಾಲೇಜಿನ ಹತ್ತಿರ ನಿಂತುಕೊಂಡು ಗಲಾಟೆಯನ್ನು ನೋಡುತ್ತಿದ್ದನು" ಎಂದು ಹೇಳಿ ಪಕ್ಕದಲ್ಲಿದ್ದ ಇನ್ನೊಂದು ಶವವನ್ನು ತೋರಿಸಿದನು.

ಜಿಲ್ಲಾಧಿಕಾರಿಗೆ ಏನು ಮಾತನಾಡಬೇಕು. ಮತ್ತೇನನ್ನು ಪ್ರಶ್ನಿಸಬೇಕೆಂಬುದೇ ತೋರಲಿಲ್ಲ. ಅಲ್ಲಿನಿಂತುಕೊಳ್ಳಲು ಅವನಿಗೆ ಸಾಧ್ಯವಾಗಲಿಲ್ಲ. "ನನ್ನ ಮಗನನ್ನು ನಾನೇ ಕೊಂದೆನೆ?" ಎಂದು ಬಹಳವಾಗಿ ಯೋಚಿಸಲಾರಂಭಿಸಿದನು. ಆದರೆ ಅವನ ಯೋಚನೆಗೆ ಯಾವ ಉತ್ತರವೂ ದೊರೆಯಲಿಲ್ಲ. ಕೂಡಲೇ ಡ್ರೈವರನನ್ನು ಕರೆದು ಕಾರನ್ನು ತರುವಂತೆ ಹೇಳಿದನು.

ಮನೆಯ ಬಾಗಿಲಿನಲ್ಲಿ ಜಿಲ್ಲಾಧಿಕಾರಿಯ ಹೆಂಡತಿಯು ನಿಂತುಕೊಂಡಿದ್ದಳು. ಅವಳು ತನ್ನ ಪತಿ, ಪುತ್ರರಿಗಾಗಿ ಕಾಯುತ್ತಲಿದ್ದಳು. ಕಾರು ಬರುತ್ತಿರುವುದನ್ನು ದೂರದಿಂದಲೇ ನೋಡಿ ಸಂತೋಷಗೊಂಡಳು. ಕಾರು ಹತ್ತಿರ ಬರುತ್ತ ಬರುತ್ತ ಅವಳ ಆಸೆಯು ನಿರಾಸೆಯಾಯಿತು. ಅವಳ ಪತಿಯೊಬ್ಬನೇ ಕುಳಿತಿರುವುದನ್ನು ನೋಡಿ ಆಶ್ಚರ್ಯಗೊಂಡಳು. ಕಾರು [illegible]

–೧೬ನೇ [illegible]

Reg. No. B. 3148
LICENCE No. ... Licenced to Post without Prepayment



ಜ್ಯೋತಿಷಿ:— ಕೃಷ್ಣಶಾಸ್ತ್ರಿ ಭಡೆ, ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ

ಅಕ್ಟೋಬರ ೧೩ ರಿಂದ ೧೯ ರ ವರೆಗೆ

ಮೇಷ

ಪ್ರಕೃತಿ ಸಾಧಾರಣವೆ ಆದರೆ ಹೆಂಡತಿ ಮಕ್ಕಳ ಪ್ರಾಪಂಚಿಕ ಸುಖ ಉತ್ತಮ ಹೆಚ್ಚು ಹೆಚ್ಚು ಆದರೆ ಅವರಲ್ಲಿಯು ಜೀವ ಸಾಧ್ಯ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ. ಆದರೆ ಲಾಭ ಮತ್ತು ಪ್ರತಿಷ್ಠೆ ಅನುಕೂಲ. ಸ್ಥಾವರದಲ್ಲಿ ಸ್ವಲ್ಪ ಹಾನಿ. ಕೆರೆಯುವರು ಮತ್ತು ಅವರಲ್ಲಿ ಹುಡುಗ ಹುಡಿಗೆಯರ ಜಟಿವಾಟದಿಂದಲೆ ಬಹಳ ಕಿರ್ಕಿಟಿ. ವಾದ ದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಭರಣಿಗೆ ತೊಂದರೆ ಕಡಮೆ. ತಾ. ೧೫, ೧೬, ೧೯ ಅನುಕೂಲ.

ವೃಷಭ

ಪ್ರಕೃತಿ ಸಾಧಾರಣವೆ. ಪರಸ್ತ್ರೀ ಬಗ್ಗೆ ಮನಸ್ಸು ಹರಿಯು ಹತ್ತುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಆದರೆ ಮಕ್ಕಳ ಭಾವೀ ಹಿತದ ಬಗ್ಗೆ ಸ್ವಲ್ಪ ಗೂಢ ಚಿಂತೆ ಹತ್ತುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಆದರೆ ಶತ್ರುಗಳು ಗುಪ್ತ ರೀತಿಯಿಂದ ಹೆಚ್ಚು ಉಪದ್ರವ ಕೊಡುವರು. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರ ಕ್ಕಿಂತ ಅನುಕೂಲ. ರೋಹಿಣಿಗೆ ಬಹಳ ತೊಂದರೆ. ತಾ. ೧೫, ೧೭, ೧೮ ಅನುಕೂಲ.

ಮಿಥುನ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಬಹಳ ಉತ್ತಮ. ಆದರೆ ಹೆಂಡತಿಯ ಪ್ರಕೃತಿ ದಿನವೂ ಕುಂದುತ್ತ ನಡೆದ ಹಕರಾರು. ಅಲ್ಲದೆ ನಿಮ್ಮ ನಿಮ್ಮಲ್ಲಿಯು ಕಲಹಕ್ಕೆ ಹೆಚ್ಚು ಜೋರು. ಯಾವುದೊಂದು ಸುಂದರ ವಸ್ತು ಮುರಿದು ಇಲ್ಲವೆ ಹರಿದು ಹೋಗುವದರಿಂದ ಮನಸ್ಸಿಗೆ ಬಹಳ ಹಳಹಳಿ ಹತ್ತುವ ಪ್ರಸಂಗ. ಮಾಹಿತಿಯಲ್ಲಿ ಸುಳ್ಳೊಂದು ಸುದ್ದಿಯೊಂದು ಭಾವಿಕತೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ನೀರಿನಂತೆ ವೆಚ್ಚ ಮಾಡುವ ಪ್ರಸಂಗ ಬರುವುದರಿಂದ ಕಿಸೆಯೊಳಗಿನ ಹಣ ವೆಚ್ಚ ಮಾಡುವ ಇಲ್ಲವೆ ಸಾಲ ತೆಗೆವ ಸರತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಿಮ್ಮೆಟ್ಟುವದು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಆರಿದ್ರೆಗೆ ಹೆಚ್ಚು ತೊಂದರೆ. ತಾ. ೧೫, ೧೬ ಅನುಕೂಲ.

ಕರ್ಕ

ಪ್ರಕೃತಿ ಸಾಧಾರಣವೆ. ಹೆಂಡತಿ ಮತ್ತು ಮಕ್ಕಳ ಆರೋಗ್ಯವೂ ಸ್ವಲ್ಪ ಕೆಡುವದು. ಆದರೆ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ತುಂಬ ಲಾಭ. ಆದರೆ ಪ್ರತಿಷ್ಠೆ ಕುಂದುವದು. ಮಿತ್ರರ ಉತ್ಕರ್ಷ. ಆದರೆ ಸ್ವತಃ ನಿಮಗೆ ಅವರ ಬಹಳ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಪುಷ್ಯಕ್ಕೆ ಹೆಚ್ಚು ತೊಂದರೆ. ತಾ. ೧೫, ೧೬, ೧೮ ಅನುಕೂಲ.

ಸಿಂಹ

ನಿಮ್ಮ ಆರೋಗ್ಯ ಅನುಕೂಲ. ಆದರೆ ಹೆಂಡತಿ ಮತ್ತು ಮಕ್ಕಳ ಆರೋಗ್ಯ ಬಹಳಮಟ್ಟಿಗೆ ಕೆಡುವ ಅಂಜಿಕೆ. ಆದರೆ ಎಲ್ಲರ ಏಕಮತ ಮತ್ತು ಉತ್ತಮ ಪ್ರೇಮ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವೆಚ್ಚವೂ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸ ತೊಂದರೆಯುದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಪುಬ್ಬಕ್ಕೆ ತೊಂದರೆ ಕಡಮೆ. ತಾ. ೧೫, ೧೭, ೧೩, ೧೬ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಪ್ರಿಯ ಜನರ ಸಹವಾಸ. ಸಂಗ್ರಹದಲ್ಲಿ ಹೆಚ್ಚಳ. ನಿಮ್ಮ ಮನೆತನದ ವರ್ಚಸ್ಸನ್ನು ಬೆಳೆಸುವ ಕೆಲ ಕೆಲಸ ಮಾಡುವ ಯೋಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮಿತ್ರರಿಂದ ಮಾತ್ರ ಸ್ವಲ್ಪ ಅಪಮಾನ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಹಸ್ತಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೫, ೧೭, ೧೩, ೧೬ ಅನುಕೂಲ.

ತುಲಾ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿ ಮಕ್ಕಳ ಆರೋಗ್ಯ ಕೆಡುವದು. ಪ್ರಾಪಂಚಿಕ ಸುಖ ಒಳಗೊಳಗೆ ಚೆನ್ನಾಗಿ ಇಲ್ಲದಿದ್ದರೂ ಹೊರಗೆ ದೊಡ್ಡ ಜಂಭ ತೋರಿಸುವ ಸರತಿ. ಉದ್ಯೋಗದಲ್ಲಿ ಪ್ರಗತಿ ಅನುಕೂಲ. ಆದರೆ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಮೆ. ಮೊದಲು ಮಾಡಿದ ಕೆಲಸದ ಬಗ್ಗೆ ಜನರಿಯಲ್ಲಿ ತಪ್ಪು ತಿಳುವಳಿಕೆ ಮತ್ತು ಹಾನೀಯ ಟೀಕೆಯು ಸುರಿಮಳೆ. ವೆಚ್ಚ ಮಿತಿ ಮೀರಿ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳದೇ ಜೋರು ಹೆಚ್ಚು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಸ್ವಾತಿಗೆ ಹೆಚ್ಚು ತೊಂದರೆ. ತಾ. ೧೫, ೧೬, ೧೮ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ. ಆದರೆ ಕೆಲ ಕಾರಣಕ್ಕಾಗಿ ಹೆಂಡತಿ ಗೂಡ ಕಿರ್ಕಿಟಿ. ಮಕ್ಕಳ ಉನ್ನತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ಪ್ರತಿಸ್ಪರ್ಧಿಯು ಗೂಡ ಆಗುವ ಕರ್ಜೆಗಾಗಿ ಅನವಶ್ಯಕ ಬಹಳ ವೆಚ್ಚ ವಾದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು ಆದರೂ ಅದರಿಂದಲೆ ಭಾವೀ ಹಿತಕ್ಕೆ ಬಹಳ ಪೋಷಕವಾಗುವದು. ಮಿತ್ರರ ಅಭಿವೃದ್ಧಿಯು ಮಾತುಗಳು ಆದರೆ ನಿಮ್ಮಗೂಡ ಅವರ ವರ್ತನೆ ಬಹಳ ತುಚ್ಛತೆಯದು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿಯು ಕೆಲಸ ಉತ್ತಮ. ಅನು ರಾಧೆಗೆ ತೊಂದರೆಯಿಂದ ಯಶಸ್ಸು. ತಾ. ೧೫, ೧೭, ೧೭, ೧೮ ಅನುಕೂಲ.

ಧನು

ಪ್ರಕೃತಿ ಕೆಡುವದು ಮಕ್ಕಳಲ್ಲಿ ಒಬ್ಬರಿಗೆ ಅಪಘಾತದ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ಮನೆಯಲ್ಲಿ ಎಲ್ಲರೂ ಬೇಜವಾಬ ದಾರ ರೀತಿಯಿಂದ ವರ್ತಿಸುವದು ಮತ್ತು ವೆಚ್ಚಕ್ಕಾಗಿ ಕೈಬಿಡುವಾಗುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಬಹಳ ಯಶಸ್ಸು ಅಲ್ಲದೆ ಶತ್ರುಗಳೂ ಪರಭಾರೆ ಅನ್ಯಕಾರಣಗಳಿಗಾಗಿ ಬಹಳ ಹಾನಿ. ಪ್ರವಾಸಾದಿ ಕೆಲಸ ಹಿತವು. ಪೂರ್ವಾಷಾಢಾಕ್ಕೆ ತೊಂದರೆ ಕಡಮೆ. ತಾ. ೧೫, ೧೭, ೧೬, ೧೯ ಅನುಕೂಲ.

ಮಕರ

ಸ್ವತಃ ಮನೆಯಲ್ಲಿಯು ಬಹುತರ ಜನರ ಪ್ರಕೃತಿ ಕೆಡುವದು. ಪ್ರಾಪಂಚಿಕ ಸುಖದಲ್ಲಿ ಉಳಿದ ಕೆಲ ಅಡ ಚಣಿಗಳು. ಉದ್ಯೋಗದಲ್ಲಿ ಪ್ರಗತಿ ಜೋರಾದ್ದು. ಪ್ರತಿಷ್ಠೆ ಅದ್ವಿತೀಯ ಮತ್ತು ತುಂಬ ಲಾಭ. ಆದರೆ ಅದು ಆಗು ವಾಗ ಮಾತ್ರ ಕೆಲಸವಾಯು ಗೊಂದಲವೇಳುವಂತೆ ತೊಂದರೆಯಾಗುವ ಸಂಭವ. ಮಿತ್ರ ಮಿತ್ರರಲ್ಲಿ ಒಬ್ಬರಿ ಗೊಬ್ಬರಿಗೆ ಮೋಸಮಾಡಿದ ಆರೋಪ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅತಿ ಕಷ್ಟ ಮತ್ತು ತೊಂದರೆಯಿಂದ ಅನು ಕೂಲತೆ. ಪ್ರವಾಸಾದಿ ಕೆಲಸ ಹಿತದ್ದು. ಶ್ರವಣಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೫, ೧೪, ೧೫, ೧೬ ಅನುಕೂಲ.

ಕುಂಭ

ಪ್ರಕೃತಿಯಲ್ಲಿ ಕುರುಕುರಿ. ಬಂಧುವರ್ಗದವರಿಗೂ ಬಹಳ ಕ್ಲೇಶ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಪ್ರತಿಷ್ಠೆ ತುಂಬ ಲಾಭ. ಧಂದೆದವರಿಗಿಂತ ನೋಕರಿಯವರಿಗೆ ಹೆಚ್ಚು ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಕ್ಕಳಲ್ಲಿ ಬಹುತರ ಜನರ ಉನ್ನತಿ. ಸ್ಥಾವರದಲ್ಲಿ ಹೆಚ್ಚಳ. ಶತ್ರುಗಳಲ್ಲಿ ಒಬ್ಬರ ಮರ ಣದ ಸಂಭವ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿ ಗಿಂತ ಹೆಚ್ಚು ಅನುಕೂಲ. ಶತತಾರಿಕೆಗೆ ತೊಂದರೆಯಿಂ ದಲೆ ಯಶಸ್ಸು. ತಾ. ೧೫, ೧೬, ೧೭, ೧೮ ಅನುಕೂಲ.

ಮೀನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೆ ಹೆಂಡತಿಗೆ ಅಲ್ಪ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಕಷ್ಟದಿಂದ ಕೊನೆಗೆ ಅಂದಾಜಿಗಿಂತ ಹೆಚ್ಚು ಒಳಿತು. ಮಿತ್ರತ್ವದಲ್ಲಿ ವಿರೋಧ. ಪ್ರವಾಸ ತೊಂದರೆಯದು. ಪತ್ರವ್ಯವಹಾರ ಅಕಾಲಕ್ಕೆ ಆಗುವದರಿಂದ ವಿರಸ. ಆದರೆ ಭೆಟ್ಟಿಯು ಕೆಲಸ ಉತ್ತಮ. ಉತ್ತರಾ ಭಾದ್ರಪದಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೭, ೧೭, ೧೮ ಅನುಕೂಲ.

ಕಾಶ್ಮೀರ ಸರಕಾರ 'ಕಾಶ್ಮೀರ ಟೈಮ್ಸ್'ಗೆ ಪಾಕಿಸ್ತಾನಕ್ಕೆ ಅದು ಸೇರಬೇಕೆಂಬ ಬರಹಗಳನ್ನು ಪ್ರಸಿದ್ಧಿಸಬಾರದೆಂದುದಕ್ಕೆ ಪ್ರತಿಭಟನೆಯೆಂದು ಅದು ಪ್ರಕಟನೆ ನಿಲ್ಲಿಸಿದೆ.

ಈ ವಾರದ ಕಥೆ

(೧೫ ನೇ ಪುಟದಿಂದ)

ಮುಂದೆ ಬಂದು ನಿಂತಿತು. ಕೂಡಲೇ ಜಿಲ್ಲಾಧಿಕಾರಿಯು ನೇರವಾಗಿ ಮನೆಯೊಳಕ್ಕೆ ಹೋದನು. ಇದನ್ನು ನೋಡಿದ ಅವನ ಹೆಂಡತಿಗೆ ಬಹಳ ಆಶ್ಚರ್ಯವಾಗಿ ತನ್ನ ಪತಿಯನ್ನೇ ಹಿಂಬಾಲಿಸಿದಳು. ಜಿಲ್ಲಾಧಿಕಾರಿಯು ಯಾವ ಮಾತನ್ನೂ ಆಡದೆ ಕೋಣೆಗೆ ಹೋಗಿ ಸುಮ್ಮನೆ ಕುಳಿತುಕೊಂಡನು.

"ಮಗು ಶ್ರೀನಿವಾಸನೆಲ್ಲಿ?" ಎಂದು ತನ್ನ ಪತಿಯನ್ನು ಪ್ರಶ್ನಿಸಿದಳು. ಜಿಲ್ಲಾಧಿಕಾರಿಯು ಸುಮ್ಮನೇ ಕುಳಿತಿದ್ದನು. ಅವನ ಮುಖದಲ್ಲಿ ಸಂಕಟವು ಎದ್ದು ಕಾಣುತ್ತಿದ್ದಿತು. "ಮಗುವೆಲ್ಲಿ?" ಎಂದು ಮತ್ತೊಮ್ಮೆ ಸಂಕಟದಿಂದ ಅವನ ಹೆಂಡತಿಯು ಪ್ರಶ್ನಿಸಿದಳು.

"ನನ್ನೊಡನೆ ಬರಲಿಲ್ಲ" ಎಂದು ಬಹಳ ಸಂಕಟದಿಂದ ಜಿಲ್ಲಾಧಿಕಾರಿಯು ಹೇಳಿದನು. "ಹಾಗಾದರೆ ಎಲ್ಲಿ ಹೋದನು?" ಎಂದು ಕೇಳಿದಳು. ಜಿಲ್ಲಾಧಿಕಾರಿಗೆ ಏನು ಹೇಳಬೇಕೆಂಬುದೇ ತೋರಲಿಲ್ಲ. ಮಗನನ್ನು ಗುಂಡಿನಿಂದ ಕೊಂದೆ ಎಂದು ಹೇಳುವುದಾದರೂ ಹೇಗೆ? ಎಂದು ಯೋಚಿಸುತ್ತಿದ್ದನು. ಆದರೆ ಅವನ ಹೆಂಡತಿಯು ಮೇಲೆ ಮೇಲೆ ಪ್ರಶ್ನಿಸುತ್ತಿರುವದನ್ನು ಕೇಳಲಾರದೆ ಯತ್ನವಿಲ್ಲದೆ ಹೇಳಬೇಕಾಗಿ ಬಂದಿತು.

"ಶ್ರೀನಿವಾಸನು ಗುಂಡಿನೇಟಿಗೆ ಸಿಕ್ಕಿ ಸತ್ತು ಹೋದನು. ಎಂದು ಬಹಳ ಕ್ಷೀಣಸ್ವರದಿಂದ ಹೇಳಿದನು. ಇದನ್ನು ಕೇಳಿದ ಕೂಡಲೇ ಅವನ ಹೆಂಡತಿಯು ಬೆಚ್ಚಿಬಿದ್ದು "ನನ್ನ ಮಗನನ್ನು ಕೊಂದವರಾರು? ಅವನೇನು ಅಂತಹ ತಪ್ಪನ್ನು ಮಾಡಿದನು. ಅಯ್ಯೋ! ಆ ನನ್ನ ಮುದ್ದು ಮಗುವಿನ ಎದೆಗೆ ಗುಂಡಿನೇಟಿ? ಗುಂಡು ಹೊಡೆದ ಪಾಪಿಯನ್ನು ಕೈ ಬಿಟ್ಟಿರಾ?" ಎಂದು ಗದ್ಗದಸ್ವರದಿಂದ ಒಂದೇ ಸಮನೆ ಪ್ರಶ್ನಿಸಲಾರಂಭಿಸಿದಳು. ಜಿಲ್ಲಾಧಿಕಾರಿಯು ತನ್ನ ಹೆಂಡತಿಯ ಸಂಕಟವನ್ನು ನೋಡಿ ಬಹಳ ವ್ಯಥೆಪಟ್ಟನು. ಅವನ ಬಾಯಿಂದ ಸುಳ್ಳು ಹೇಳಲಾಗಲಿಲ್ಲ. "ನನ್ನ ಮಗನನ್ನು ಕೊಂದ ಪಾಪಿ ನಾನೆ" ಎಂದು ನಿಧಾನವಾಗಿ ಹೇಳಿ ಅವನು ಹೆಂಡತಿಯ ಮುಖವನ್ನು ಒಂದೇ ಸಮನೆ ನೋಡಲಾರಂಭಿಸಿದನು.

ತನ್ನ ಪತಿಯ ಮಾತನ್ನು ಆಕೆಯು ನಂಬಲಿಲ್ಲ. "ನೀವೆ ಕೊಂದವರು? ಯಾಕೆ ಕೊಂದಿರಿ? ನೀವು ಮುದ್ದಿನಿಂದ ಸಾಕಿದ ಮಗುವನ್ನು ನೀವೇಕೆ ಗುಂಡಿನಿಂದ ಕೊಂದಿರಿ?" ಎಂದು ಕೇಳಿದಳು. "ಹೌದು ನಾನೆ ಕೊಂದೆ. ನನ್ನ ಪ್ರಾಣ ರಕ್ಷಣೆಗಾಗಿ ಜನಗಳ ಗುಂಪಿಗೆ ಗುಂಡು ಹಾರಿಸಿದೆ. ಆ ಗುಂಡು ಗುರಿತಪ್ಪಿ ಕಾಲೇಜಿನ ಹತ್ತಿರ ನಿಂತಿದ್ದ ಶ್ರೀನಿವಾಸನಿಗೆ ತಗಲಿತು ಎಂದು ಹೇಳಿ ಪೂರೈಸುವುದರೊಳಗಾಗಿಯೇ ಅವನ ಹೆಂಡತಿಯು "ಅಯ್ಯೋ ಶ್ರೀನಿವಾಸ" ಎಂದು ರೋದಿಸುತ್ತ ನೆಲದ ಮೇಲೆ ಉರುಳಿದಳು. ಆಕೆಗೆ ಪ್ರಜ್ಞೆ ತಪ್ಪಿ ಹೋಯಿತು.

ಇದನ್ನು ನೋಡಿದ ಜಿಲ್ಲಾಧಿಕಾರಿಗೆ ಸಂಕಟ ವಿಪರೀತವಾಯಿತು. ಮಗನನ್ನು ಕಳೆದುಕೊಂಡ ಸಂಕಟ, ತನ್ನ ಹೆಂಡತಿಯ ರೋದನ ಇವೆರಡರಿಂದ ಅವನ ಮನಸ್ಸು ಕಂಗೆಟ್ಟಿತು. ತನ್ನ ಮಗನ ಶವದ ಜೊತೆಯಲ್ಲಿದ್ದ ಬಾಲಕರ ಶವಗಳು ಕಣ್ಣೆದುರಿಗೆ ಬಂದು ನಿಂತವು. ತನ್ನ ಮಗನ ಸಾವಿಗೆ ವ್ಯಥೆ ಪಡುತ್ತಿರುವ ತನ್ನ ಹೆಂಡತಿಯಂತೆ ಆ ಬಾಲಕರ ತಾಯಿಯರು ಎಷ್ಟು ರೋದಿಸುತ್ತಿರಬಹುದು? ಎಷ್ಟು ವಿಧವಾಗಿ ನನ್ನನ್ನು ಶಪಿಸುತ್ತಿರಬಹುದು? ಆ ತಾಯಂದಿರ ಸಂಕಟಕ್ಕೆ ಗುರಿಮಾಡಿದ ಪಾಪಿ ನಾನೇ ಅಲ್ಲವೇ? ಎಂಬ ಯೋಚನೆಯು ಅವನಲ್ಲಿ ಹುಟ್ಟಿತು. ಇಂತಹ ಪಾಪಕಾರ್ಯವನ್ನು ಮಾಡಿದ ತನಗೆ ಶಿಕ್ಷೆಯಾವುದು? ಎಂದು ಚಿಂತಿಸುತ್ತ ತನ್ನ ಬಲಗೈಯನ್ನು ಸೊಂಟಕ್ಕೆ ಹಾಕಿ ಪಿಸ್ತೂಲನ್ನು ಹೊರಗೆಳೆದುಕೊಂಡನು. ಮಗನ ಪ್ರಾಣವನ್ನು ತೆಗೆದಿದ್ದ ಆ ಪಿಸ್ತೂಲಿನ ಒಳಗೆ ಇನ್ನೊಂದು ಗುಂಡು ನಗುತ್ತ ಕೂತಿತ್ತು. ಕೂಡಲೇ ಅದನ್ನು ತನ್ನ ಎದೆಗೆ ಇಟ್ಟುಕೊಂಡು ಹಾರಿಸಿದನು.

ಕೂಡಲೇ ಅವನ ಪ್ರಾಣ ಪಕ್ಷಿಯು ಪಿಸ್ತೂಲಿನ ಶಬ್ದಕ್ಕೆ ಹೆದರಿ ಅವನ ಹೃದಯವನ್ನು ಭೇದಿಸಿಕೊಂಡು ಹೊರಬಿದ್ದು ಗಾಳಿಯೊಳಗೆ ಹಾರಿಹೋಯಿತು!

ತಿದ್ದುಪಡಿ

'ಬೆಳ್ಳಿ ಚುಕ್ಕೆ'ಯೆಂಬ ಕೈಬರಹದ ತ್ರೈಮಾಸಿಕದ 'ಬೆಳ್ಳಿ ಬಳಗ' ಲ್ಯಾಮಿಂಗ್‌ಟನ್ ಹೈಸ್ಕೂಲಿನದೆಂದು ಸೆಪ್ಟಂಬರ ೨೯ ರ ಸಂಚಿಕೆಯಲ್ಲಿ ತಿದ್ದಿಕೊಂಡು ಓದಬೇಕಾಗಿ ವಾಚಕರಲ್ಲಿ ವಿನಂತಿ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣ ಟ್ರಸ್ಟ'ದ ಪರವಾಗಿ ಹ. ರಾ. ಪುರೋಹಿತರಿಂದ ಮುದ್ರಿತವಾಗಿ ಪ್ರಕಟವಾಯಿತು.